ಸಂಪುಟ: 06 ಸಂಚಿಕೆ: 212 ಪುಟಗಳು: 08 ಶನಿವಾರ 17 ಅಕ್ಟೋಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 + 91 8035621249 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ



ಯಾ ದೇವಿ ಸರ್ವ ಭೂತೇಷು
ಕಾಳರಾತ್ರಿ ದೇವಿ ರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ
ನಮಸ್ತಸ್ಯೈ ನಮೋ ನಮಃ

## ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಕರ್ನಾಟಕ ರಾಜ್ಯ ನರೇಗಾ (ವಿಬಿ ಜಿ ರಾಮ್ ಜಿ) ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸುದೀರ್ಘ ಕಾಲದಿಂದ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯ ವಿವಿಧ ಸಮಸ್ಯೆಗಳಿಗೆ ತಕ್ಷಣವೇ ಸ್ಪಂದಿಸಬೇಕು ಎಂದು ಪ್ರತಿಭಟನಾನಿರತರು ಆಗ್ರಹಿಸಿದರು. 2008 ರಿಂದಲೂ ಗ್ರಾಮೀಣಾಭಿವೃದ್ಧಿ ಇಲಾಖೆಯ ವಿವಿಧ ತಂತ್ರಾಂಶಗಳ ನಿರ್ವಹಣೆಯ ಕೆಲಸ ಮಾಡುತ್ತಿರುವ ನೌಕರರಿಗೆ ಇಲ್ಲಿಯವರೆಗೆ ಸೇವಾ ಭದ್ರತೆ ದೊರೆತಿಲ್ಲ. ಆದ್ದರಿಂದ ನೂತನ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಮುಂದುವರಿಕೆಗೆ ತಕ್ಷಣ ಸರ್ಕಾರ ಆದೇಶ ಹೊರಡಿಸಬೇಕು ಹಾಗೂ ಅವರ ಸುದೀರ್ಘ ಸೇವೆಯನ್ನು ಪರಿಗಣಿಸಿ ಹುದ್ದೆಗಳನ್ನು ತಕ್ಷಣವೇ ಕಾಯಂಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ.

ರಾಜ್ಯದ ಗ್ರಾಮೀಣ ಭಾಗದಲ್ಲಿ ಕಳೆದ ಸುಮಾರು 15 ವರ್ಷಗಳಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಯಶಸ್ವಿಯಾಗಲು ಹಗಲಿರುಳು ಶ್ರಮಿಸುತ್ತಿರುವ 3,657ಕ್ಕೂ ಹೆಚ್ಚು ಹೊರಗುತ್ತಿಗೆ ಸಿಬ್ಬಂದಿ ಪ್ರಸ್ತುತ ಸೇವಾ ಭದ್ರತೆಯ ವಿಚಾರದಲ್ಲಿ ಅನಿಶ್ಚಿತತೆಯನ್ನು ಎದುರಿಸುತ್ತಿದ್ದಾರೆ. ವಿಬಿ ಜೀ ರಾಮ್‌ಜಿ ಸಿಬ್ಬಂದಿಗೆ ಒದಗಿಸುವ ಮಾದರಿಯಲ್ಲಿ ಸೇವಾ ಭದ್ರತೆ ನೀಡುವುದು ಅತ್ಯಗತ್ಯವಾಗಿದೆ ಎಂದು ಸಂಘದ ಮುಖಂಡರು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, ನೌಕರರಿಗೆ ಕಡ್ಡಾಯವಾಗಿ ಪ್ರತಿ ತಿಂಗಳು ನಿಯಮಿತವಾಗಿ ವೇತನ ಪಾವತಿಸಬೇಕು. ನೌಕರರ ಕುಟುಂಬದ ಹಿತದೃಷ್ಟಿಯಿಂದ ಆರೋಗ್ಯ ವಿಮೆ ಮತ್ತು ಅಪಘಾತ ಪರಿಹಾರ ಸೌಲಭ್ಯವನ್ನು ಒದಗಿಸಬೇಕು ಹಾಗೂ ಪ್ರಸ್ತುತ ಸೇವೆಯಲ್ಲಿರುವ ಎಲ್ಲಾ ಸಿಬ್ಬಂದಿಯ ಮೂಲ ವೇತನಕ್ಕೆ ಶೇಕಡಾ 25 ರಷ್ಟು ವೇತನ ಹೆಚ್ಚಳ ಪರಿಷ್ಕರಣೆ ಮಾಡಬೇಕು.

## ಮತ್ತಷ್ಟು ತೀವ್ರ ಸ್ವರೂಪ ಪಡೆದ ಸ್ಟಿಂಗ್ ಆಪರೇಷನ್ ಪ್ರಕರಣ

• ಉದಯವಾಹಿನಿ, ಬೆಂಗಳೂರು

ಸ್ಟಿಂಗ್ ಆಪರೇಷನ್ ಪ್ರಕರಣ ದಿನದಿಂದ ದಿನಕ್ಕೆ ಪೆಂಡಂಭೂತದಂತೆ ಕಾಡುತ್ತಿದೆ. ಸ್ಟಿಂಗ್ ಆಪರೇಷನ್ ವಿಚಾರವಾಗಿ ವಿಪಕ್ಷಗಳು ಸರ್ಕಾರದ ವಿರುದ್ಧ ಆಲೌಟ್ ಸಮರ ಸಾರಿದೆ. ಸ್ಟಿಂಗ್‌ನಲ್ಲಿ ಭಾಗಿಯಾದವರನ್ನು ಬಂಧಿಸದಿದ್ದರೆ ರಾಜ್ಯಾದ್ಯಂತ ಪ್ರತಿಭಟನೆ ಮಾಡುವುದಾಗಿ ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ಎಚ್ಚರಿಕೆ ನೀಡಿದ್ದಾರೆ. ಇದರ ಮಧ್ಯೆ ಇದೀಗ ಜೆಡಿಎಸ್ ಸಹ ಈ ಸ್ಟಿಂಗ್ ಆಪರೇಷನ್ ಬಗ್ಗೆ ದೂರು ನೀಡಿದೆ. ಜೆಡಿಎಸ್ ಕಾನೂನು ಘಟಕದ ಪ್ರದೀಪ್ ಎಂಬುವರು ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದು, ಕರ್ನಾಟಕ ರಾಜ್ಯದ ಪ್ರಭಾವಿ ನಾಯಕನ ಸ್ಟಿಂಗ್ ಮಾಡಲಾಗಿದೆ. ಹೀಗಾಗಿ ಸೂಕ್ತ ತನಿಖೆ ನಡೆಸಿ ಸ್ಟಿಂಗ್ ಆಪರೇಷನ್ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ. ಇನ್ನೂ ಸ್ಟಿಂಗ್ ಆಪರೇಷನ್ ಪ್ರಕರಣದಲ್ಲಿ ಜೆಡಿಎಸ್ ಕಾರ್ಯಕರ್ತರು ವಶಕ್ಕೆ ಪಡೆದು ವಿಚಾರಣೆ ಮಾಡಿರೋದು ಕುಮಾರಸ್ವಾಮಿ ಅವರನ್ನು ಕೆರಳಿಸಿದ್ದು, ಸರ್ಕಾರದ ತನಿಖೆ ವಿರುದ್ಧ ಆಕ್ರೋಶ ಹೊರ ಹಾಕಿ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾರೆ. ಪಾರದರ್ಶಕ ತನಿಖೆಯ ಭರವಸೆ ಕೊಟ್ಟ ಬಳಿಕ ಧರಣಿ ಕೈ ಬಿಟ್ಟ ಕುಮಾರಸ್ವಾಮಿ, ಸರ್ಕಾರಕ್ಕೆ 2 ದಿನಗಳ ಡೆಡ್‌ಲೈನ್ ನೀಡಿದ್ದಾರೆ. ಇದರ ಮಧ್ಯೆ ಅ.17ರಂದು ಜೆಡಿಎಸ್ ಶಾಸಕರು, ಮುಖಂಡರ ಸಭೆ ಕರೆದಿದ್ದಾರೆ.

## ಖರ್ಗೆ ಟ್ರಸ್ಟ್‌ಗೆ ಭೂಮಿ ಹಂಚಿಕೆ ಪ್ರಕರಣ: ಆ.18ರ ಆದೇಶ ಹಿಂಪಡೆದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬದ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಭೂಮಿ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆ.18ರಂದು ನೀಡಿದ್ದ ಆದೇಶವನ್ನು ಹೈಕೋರ್ಟ್ ಹಿಂಪಡೆದಿದೆ. ಆದೇಶ ಹಿಂಪಡೆಯುವಂತೆ ಕೋರಿ ರಾಹುಲ್ ಖರ್ಗೆ ಅರ್ಜಿ ಸಲ್ಲಿಸಿದ್ದ ಹಿನ್ನೆಲೆ ಪುನಃ ವಿಚಾರಣೆಗೆ ಹೈಕೋರ್ಟ್ ಮುಂದಾಗಿದೆ. ಅ.30ರಂದು ಮರುವಿಚಾರಣೆಗೆ ನಿರ್ಧರಿಸಲಾಗಿದ್ದು, ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ ಆದೇಶ ಹೊರಡಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆಗಸ್ಟ್ 18ರಂದು ಬಿಎನ್‌ಎಸ್‌ಎಸ್ ಸೆಕ್ಷನ್ 223 ಅಡಿಯ ಕೋರ್ಟ್ ವಿಚಾರಣೆಯನ್ನು ಹೈಕೋರ್ಟ್ ರದ್ದುಪಡಿಸಿತ್ತು. ಪ್ರಮಾಣಪತ್ರದ ದೋಷ ಸರಿಪಡಿಸಲು ದೂರುದಾರರಿಗೆ ಅವಕಾಶ ನೀಡಲಾಗಿತ್ತು. ಆ ಬಳಿಕ ಪೊಲೀಸರ ತನಿಖೆ ಕುರಿತಂತೆ ತೀರ್ಮಾನಿಸಲು ಸೂಚಿಸಿತ್ತು.

## ಪರೀಕ್ಷೆ ಬರೆದ ಅಭ್ಯರ್ಥಿಗಳ ಕಳ್ಳಾಟದ ಬ್ರಹ್ಮಾಂಡ ಸೀಕ್ರೆಟ್ ಬಯಲು

• ಉದಯವಾಹಿನಿ, ಬೆಂಗಳೂರು

ಕೆಪಿಎಸ್‌ಸಿ ನೇಮಕಾತಿಯಲ್ಲಿ ನಡೆದ ಅಕ್ರಮ ಬಗೆದಷ್ಟು ಬಯಲಾಗುತ್ತಿದೆ. ಪ್ರಕರಣ ಸಂಬಂಧ ಇಡಿ ನಡೆಸಿದ ತನಿಖೆಯಲ್ಲಿ ಅಕ್ರಮದಲ್ಲಿ ಶಾಮೀಲಾದ ಅಭ್ಯರ್ಥಿಗಳ ಎಕ್ಸಾಂ ಸೀಕ್ರೆಟ್ ಬಯಲಾಗಿದೆ. ಕೆಪಿಎಸ್‌ಸಿಯ ಕೆಲ ಸದಸ್ಯರೇ ಅಭ್ಯರ್ಥಿಗಳಿಗೆ ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಪರೀಕ್ಷೆ ಬರೆಯಿಸಿರುವ ಮಾಹಿತಿ ಇಡಿಗೆ ಲಭ್ಯವಾಗಿದೆ. ಪರೀಕ್ಷೆಗೂ ಮುನ್ನವೇ ಅಭ್ಯರ್ಥಿಗಳಿಗೆ ಒಂದು ಚೀಟಿಯಲ್ಲಿ ಉತ್ತರ ಬರೆದು ನೀಡಲಾಗಿತ್ತು. ಆದ್ರೂ ಅದನ್ನೂ ಬರೆಯಲು ಸಾಧ್ಯವಾಗದವರಿಗೆ ವಿಶೇಷ ಪ್ಲ್ಯಾನ್ ಮಾಡಿದ್ದರು. ಖುದ್ದು ತಾವೇ ಪ್ರಶ್ನೆ ಪತ್ರಿಕೆ ಮತ್ತು ಒಎಂಆರ್ ಕೊಟ್ಟು ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಪರೀಕ್ಷೆ ಬರೆಸಿದ್ದಾರೆ. ನಂತರ ಒಎಂಆರ್ ಶೀಟ್‌ಗಳನ್ನು ಆಯ್ಕೆ ಪಟ್ಟಿಯಲ್ಲಿ ಸೇರಿಸಿದ್ದರು. OMR ಶೀಟ್‌ಗಳು ಯಾರಿಗೂ ಅನುಮಾನ ಬಾರದಂತೆ ಮೌಲ್ಯಮಾಪನ ಮಾಡಲಾಗಿತ್ತು. ಸದ್ಯ ಇಡಿ ವಿಚಾರಣೆ ವೇಳೆ ಪರೀಕ್ಷೆ ಬರೆಸುವಲ್ಲಿ ಭಾಗಿಯಾಗಿರುವುದು ಪತ್ತೆಯಾಗಿವೆ.

## ಕಳೆದ 3 ವರ್ಷದಲ್ಲಿ ಡ್ರಗ್ ಪ್ರಕರಣದಲ್ಲಿ 37 ಸಾವಿರ ಮಂದಿಯ ಬಂಧನ, 10 ಸಾವಿರ ಆರೋಪಿಗಳಿಗೆ ಶಿಕ್ಷೆ

• ಉದಯವಾಹಿನಿ, ಬೆಂಗಳೂರು

ಮಾದಕ ದ್ರವ್ಯಗಳ ವಿರುದ್ಧದ ಹೋರಾಟವು ಯಾವುದೇ ಒಂದು ರಾಜ್ಯ ಅಥವಾ ಸರ್ಕಾರಕ್ಕೆ ಸೀಮಿತವಾದುದಲ್ಲ. ಯುವಜನತೆಯ ಭವಿಷ್ಯವನ್ನು ರಕ್ಷಿಸುವ ಈ ಹೋರಾಟದಲ್ಲಿ ಇಡೀ ದೇಶ ಒಂದಾಗಿ ನಿಲ್ಲಬೇಕು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಬೆಂಗಳೂರಿನ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮುಂಭಾಗದಲ್ಲಿ ರಾಷ್ಟ್ರೀಯ ಏಕತಾ ದಿವಸ್-2026ರ ಅಂಗವಾಗಿ ಕರ್ನಾಟಕ ಪೊಲೀಸ್ ಆಯೋಜಿಸಿರುವ ರಾಷ್ಟ್ರೀಯ ಮೋಟಾರ್‌ಸೈಕಲ್ ರ್‍ಯಾಲಿಗೆ ಚಾಲನೆ ನೀಡಿ ಅವರು ಮಾತನಾಡಿದ್ದಾರೆ. ಕರ್ನಾಟಕವಾಗಲಿ, ಕಾಶ್ಮೀರವಾಗಲಿ ಅಥವಾ ದೆಹಲಿಯಾಗಲಿ, ಸರ್ಕಾರಗಳು ಮತ್ತು ರಾಜ್ಯಗಳ ಭಿನ್ನತೆಗಳನ್ನು ಬದಿಗಿಟ್ಟು ಮಾದಕ ದ್ರವ್ಯಗಳ ವಿರುದ್ಧ ನಾವೆಲ್ಲರೂ ಒಗ್ಗಟ್ಟಿನಿಂದ ಹೋರಾಡಬೇಕು. ನಮ್ಮ ಯುವಜನರ ಭವಿಷ್ಯವನ್ನು ರಕ್ಷಿಸುವುದು




ಎಲ್ಲರ ಸಾಮೂಹಿಕ ಜವಾಬ್ದಾರಿ. ಈ ರ್‍ಯಾಲಿಯ ಮೂಲಕ ದೇಶದ ಯುವಜನತೆಗೆ ಇದೇ ಸಂದೇಶವನ್ನು ತಲುಪಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ಮಾದಕ ದ್ರವ್ಯಗಳ ವಿರುದ್ಧದ ಕಾರ್ಯಾಚರಣೆಯಲ್ಲಿ ಸುಮಾರು 37 ಸಾವಿರ ಜನರನ್ನು ಬಂಧಿಸಲಾಗಿದ್ದು, 10 ಸಾವಿರ ಮಂದಿಗೆ ಶಿಕ್ಷೆಯಾಗಿದೆ. ಈ ಅಂಕಿಅಂಶಗಳು ಮಾದಕ ದ್ರವ್ಯಗಳ ವಿರುದ್ಧದ ಹೋರಾಟದಲ್ಲಿ ರಾಜ್ಯ ಸರ್ಕಾರ ಮತ ಗಂಭೀರತೆ ಹಾಗೂ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ ಎಂದರು. ಮಾದಕ ದ್ರವ್ಯಗಳ ಸಮಸ್ಯೆ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ, ಗ್ರಾಮೀಣ ಪ್ರದೇಶಗಳಲ್ಲಿಯೂ ಇದು ವೇಗವಾಗಿ ಹರಡುತ್ತಿದೆ.

ಅಲ್ಲದೆ, ಈ ಸಮಸ್ಯೆ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರದೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ವ್ಯಾಪಿಸಿದೆ. ಆದ್ದರಿಂದ, ಈ ಪಿಡುಗನ್ನು ಎದುರಿಸಲು ರಾಜ್ಯಗಳ ಗಡಿಗಳನ್ನು ಮೀರಿ ಸಮನ್ವಯದೊಂದಿಗೆ ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ ಎಂದು ಅವರು ಹೇಳಿದ್ದಾರೆ. ರಾಷ್ಟ್ರೀಯ ಏಕತಾ ದಿವಸ್‌ನ ಅಂಗವಾಗಿ ಇದೇ ಮೊದಲ ಬಾರಿಗೆ ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರ ಪೊಲೀಸ್ ಸಂಸ್ಥೆಗಳ ಸಿಬ್ಬಂದಿಯನ್ನು ಒಳಗೊಂಡ ರಾಷ್ಟ್ರೀಯ ಮೋಟಾರ್‌ಸೈಕಲ್?ರ್‍ಯಾಲಿಯನ್ನು ಆಯೋಜಿಸಲಾಗಿದೆ. ಆಯಾ ರಾಜ್ಯಗಳಿಂದ ಆರಂಭವಾಗುವ ಈ ರ್‍ಯಾಲಿಗಳು ಗುಜರಾತ್‌ನ ಏಕತಾ ನಗರವನ್ನು ತಲುಪಿ, ಅಲ್ಲಿ ನಡೆಯುವ ರಾಷ್ಟ್ರೀಯ ಏಕತಾ ದಿವಸ್ ಕಾರ್ಯಕ್ರಮದಲ್ಲಿ ಭಾಗವಹಿಸಲಿವೆ. ಕರ್ನಾಟಕದಿಂದ ಒಟ್ಟು 200 ಪೊಲೀಸ್ ಸಿಬ್ಬಂದಿ ಈ ರ್‍ಯಾಲಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ಬೆಂಗಳೂರು ನಗರ ಪೊಲೀಸ್, ಕೇಂದ್ರೀಯ ಮೀಸಲು ಪೊಲೀಸ್ ಪಡೆ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ ಸೇರಿದಂತೆ ವಿವಿಧ ಪೊಲೀಸ್ ಘಟಕಗಳ ಸಿಬ್ಬಂದಿ ಹಾಗೂ ಬೈಕರ್ಸ್ ಯುನಿಟಿ ಕಾಲ್ಸ್ ಇಂಡಿಯಾದ ಸದಸ್ಯರು ರ್‍ಯಾಲಿಯಲ್ಲಿ ಭಾಗವಹಿಸುತ್ತಿದ್ದಾರೆ.

ಅಕ್ಟೋಬರ್ 15ರಂದು ಬೆಂಗಳೂರಿನಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರ್‍ಯಾಲಿ ಸಂಚರಿಸಲಿದ್ದು, ಅಕ್ಟೋಬರ್ 16ರಂದು ಕರ್ನಾಟಕ ಪೊಲೀಸ್ ತಂಡವು ಗುಜರಾತನ ಏಕತಾ ನಗರಕ್ಕೆ ತನ್ನ ಮುಂದಿನ ಪ್ರಯಾಣವನ್ನು ಆರಂಭಿಸಲಿದೆ.






# ರಾಜ್ಯಪಾಲರಾಗಿ ಸುಧಾ ಯಾದವ್ ಪ್ರಮಾಣವಚನ

## ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸುಧಾ ಯಾದವ್ ಅವರನ್ನು ಕರ್ನಾಟಕದ ರಾಜ್ಯಪಾಲರನ್ನಾಗಿ ನೇಮಕ

ಸುಧಾ ಯಾದವ್ ಅವರು ಭಾರತೀಯ ಜನತಾ ಪಕ್ಷದಲ್ಲಿ ಹಲವು ಸಂಘಟನಾತ್ಮಕ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಪಕ್ಷದ ಇತರೆ ಹಿಂದುಳಿದ ವರ್ಗಗಳ ಮೋರ್ಚಾದ (ಒಬಿಸಿ ಮೋರ್ಚಾ) ರಾಷ್ಟ್ರೀಯ ಉಸ್ತುವಾರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯೆಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

2022ರಲ್ಲಿ ಅವರನ್ನು ಬಿಜೆಪಿಯ ಸಂಸದೀಯ ಮಂಡಳಿಗೆ ಸೇರ್ಪಡೆ ಮಾಡಿಕೊಳ್ಳಲಾಗಿತ್ತು. ಈ ಮೂಲಕ ಸುಷ್ಮಾ ಸ್ವರಾಜ್ ಬಳಿಕ ಸಂಸದೀಯ ಮಂಡಳಿಯಲ್ಲಿ ಸ್ಥಾನ ಪಡೆದ ಎರಡನೇ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಲೋಕಭವನದ ಗ್ಲಾಸ್ ಹೌಸ್‌ನಲ್ಲಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ನಿರ್ಗಮಿತ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ ಜಿ. ಪರಮೇಶ್ವರ, ಸಚಿವರಾದ ಶರಣ ಪ್ರಕಾಶ್ ಪಾಟೀಲ್, ಕೆ.ಜೆ. ಜಾರ್ಜ್ ಮತ್ತು ಪ್ರಿಯಾಂಕ್ ಖರ್ಗೆ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ಟಿ. ನಾರಾಯಣಸ್ವಾಮಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಪೊಲೀಸ್ ಮಹಾನಿರ್ದೇಶಕ ಮತ್ತು ಮಹಾನಿರೀಕ್ಷಕ ಎಂ.ಎ. ಸಲೀಂ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಸೇರಿದಂತೆ ಶಾಸಕರು, ಸಂಸದರು, ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

### ಸಾರ್ವಜನಿಕ ಜೀವನದಲ್ಲಿ ಅನುಭವ

2ನೇ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ನೂತನ ರಾಜ್ಯಪಾಲರಾಗಿ ಸುಧಾ ಯಾದವ್ ಅವರು ಶುಕ್ರವಾರ ಬೆಂಗಳೂರಿನ ಲೋಕಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರು ನೂತನ ರಾಜ್ಯಪಾಲರಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣವಚನ ಬೋಧಿಸಿದರು. ನಿರ್ಗಮಿತ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರ ಅಧಿಕಾರಾವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸುಧಾ ಯಾದವ್ ಅವರನ್ನು ಕರ್ನಾಟಕದ ರಾಜ್ಯಪಾಲರನ್ನಾಗಿ ನೇಮಕ ಮಾಡಿದ್ದರು. ಸುಧಾ ಯಾದವ್ ಅವರು ಕರ್ನಾಟಕದ ರಾಜ್ಯಪಾಲ ಹುದ್ದೆ ಅಲಂಕರಿಸಿದ ಎರಡನೇ ಮಹಿಳೆಯಾಗಿದ್ದಾರೆ. ಇದಕ್ಕೂ ಮೊದಲು ವಿ.ಎಸ್. ರಮಾದೇವಿ ಅವರು 1999ರಿಂದ 2002ರವರೆಗೆ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದರು.

ಸುಧಾ ಯಾದವ್ ಅವರ ಪತಿ ಸುಖಬೀರ್ ಸಿಂಗ್ ಯಾದವ್ ಅವರು ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಡೆಪ್ಯುಟಿ ಕಮಾಂಡೆಂಟ್ ಆಗಿದ್ದರು. 1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಪಾಕಿಸ್ತಾನಿ ಪಡೆಗಳ ವಿರುದ್ಧ ಹೋರಾಡುತ್ತಿದ್ದಾಗ ನಡೆದ ಫಿರಂಗಿ ದಾಳಿಯಲ್ಲಿ ಅವರು ಹುತಾತ್ಮರಾಗಿದ್ದರು. ಮರಣೋತ್ತರವಾಗಿ ಅವರಿಗೆ ಸೇನಾ ಪದಕ ನೀಡಿ ಗೌರವಿಸಲಾಗಿತ್ತು. ಪತಿಯ ನಿಧನದ ಬಳಿಕ ಸುಧಾ ಯಾದವ್ ಅವರು ಸಾರ್ವಜನಿಕ ಜೀವನ ಪ್ರವೇಶಿಸಿದರು. 1999ರಲ್ಲಿ ಹರಿಯಾಣದ ಮಹೇಂದ್ರಗಢ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾದ ಅವರು, 2004ರವರೆಗೆ ಸಂಸತ್ ಸದಸ್ಯೆಯಾಗಿ ಕಾರ್ಯನಿರ್ವಹಿಸಿದರು. ರಸಾಯನಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿರುವ ಸುಧಾ ಯಾದವ್ ಅವರು, ಪ್ರಸ್ತುತ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ರೂರ್ಕಿ ಎಂದು ಕರೆಯಲಾಗುವ ಅಂದಿನ ರೂರ್ಕಿ ವಿಶ್ವವಿದ್ಯಾಲಯದಲ್ಲಿ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿ ಪಡೆದಿದ್ದರು. ಈ ಸಂದರ್ಭದಲ್ಲಿ ಅವರು ಚಿನ್ನದ ಪದಕವನ್ನೂ ಗಳಿಸಿದ್ದರು.

### ಸಾಂಸ್ಥಿಕ ಅನುಭವ

ಪ್ರಧಾನಿ ನರೇಂದ್ರ ಮೋದಿ ಅವರ ಪ್ರೇರಣೆಯಿಂದ ರಾಜಕೀಯ ಪ್ರವೇಶಿಸಿದ ಇವರು 1999 ರಿಂದ 2004ರವರೆಗೆ ಹರಿಯಾಣದ ಮಹೇಂದ್ರಗಢ ಲೋಕಸಭಾ ಕ್ಷೇತ್ರದ ಸಂಸದೆಯಾಗಿ ಸೇವೆ ಸಲ್ಲಿಸಿದ್ದಾರೆ. ಬಿಜೆಪಿ ಸಂಸದೀಯ ಮಂಡಳಿಗೆ ಆಯ್ಕೆಯಾದ 2ನೇ ಮಹಿಳೆ (ಸುಷ್ಮಾ ಸ್ವರಾಜ್ ಅವರ ನಂತರ) ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಜೊತೆಗೆ ಬಿಜೆಪಿ ಒಬಿಸಿ ಮೋರ್ಚಾದ ರಾಷ್ಟ್ರೀಯ ಉಸ್ತುವಾರಿಯಾಗಿ ಹಾಗೂ ಕೇಂದ್ರ ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗದ ಸದಸ್ಯೆಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.



### ಹೊಸ ರಾಜ್ಯಪಾಲರ ನೇಮಕ

ರಾಷ್ಟ್ರಪತಿಯವರ ಆದೇಶದ ಹಿನ್ನೆಲೆಯಲ್ಲಿ ಇತರ 5 ರಾಜ್ಯಗಳಿಗೂ ಹೊಸ ರಾಜ್ಯಪಾಲರ ನೇಮಕ ಜಾರ್ಖಂಡ್‌ನ ಬಿಜೆಪಿಯ ಹಿರಿಯ ನಾಯಕ ಬ್ರಜ್ ಮೋಹನ್ ರಾಮ್ ಅವರು ಒಡಿಶಾ ರಾಜ್ಯಪಾಲರಾಗಿ, ಢಾಲ್ ಸಿಂಗ್ ಬಿಸೆನ್ ಅವರು ಉತ್ತರಖಂಡ ರಾಜ್ಯಪಾಲರಾಗಿ ನೇಮಕಗೊಂಡಿದ್ದರು. ಕೇರಳಂ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರನ್ನು ತಮಿಳುನಾಡಿನ ರಾಜ್ಯಪಾಲರನ್ನಾಗಿಯೂ, ಸಿಕ್ಕಿಂ ರಾಜ್ಯಪಾಲ ಓಂ ಪ್ರಕಾಶ್ ಮಾಥುರ್ ಅವರನ್ನು ಕೇರಳಂನ ರಾಜ್ಯಪಾಲರನ್ನಾಗಿಯೂ ನೇಮಕ ಮಾಡಲಾದಿದೆ. ಅದೇ ರೀತಿಯಲ್ಲಿ ದುಷ್ಯಂತ್ ಗೌತಮ್ ಅವರು ಸಿಕ್ಕಿಂ ರಾಜ್ಯದ ನೂತನ ರಾಜ್ಯಪಾಲರಾಗಿ ನೇಮಕಗೊಂಡಿದ್ದರು.

### ಪತಿಯನ್ನು ಕಳೆದುಕೊಂಡಿದ್ದ ಸುಧಾ ಯಾದವ್



ಸುಧಾ ಯಾದವ್ ಅವರ ಪತಿ ಸುಖಬೀರ್ ಸಿಂಗ್ ಯಾದವ್ ಅವರು ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಡೆಪ್ಯುಟಿ ಕಮಾಂಡೆಂಟ್ ಆಗಿದ್ದರು. 1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಪಾಕಿಸ್ತಾನಿ ಪಡೆಗಳ ವಿರುದ್ಧ ಹೋರಾಡುತ್ತಿದ್ದಾಗ ನಡೆದ ಫಿರಂಗಿ ದಾಳಿಯಲ್ಲಿ ಅವರು ಹುತಾತ್ಮರಾಗಿದ್ದರು. ಮರಣೋತ್ತರವಾಗಿ ಅವರಿಗೆ ಸೇನಾ ಪದಕ ನೀಡಿ ಗೌರವಿಸಲಾಗಿತ್ತು. ಪತಿಯ ನಿಧನದ ಬಳಿಕ ಸುಧಾ ಯಾದವ್ ಅವರು ಸಾರ್ವಜನಿಕ ಜೀವನ ಪ್ರವೇಶಿಸಿದರು.1999ರಲ್ಲಿ ಹರಿಯಾಣದ ಮಹೇಂದ್ರಗಢ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾದ ಅವರು, 2004ರವರೆಗೆ ಸಂಸತ್ ಸದಸ್ಯೆಯಾಗಿ ಕಾರ್ಯನಿರ್ವಹಿಸಿದರು.

ರಸಾಯನಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿರುವ ಸುಧಾ ಯಾದವ್ ಅವರು, ಪ್ರಸ್ತುತ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ರೂರ್ಕಿ ಎಂದು ಕರೆಯಲಾಗುವ ಅಂದಿನ ರೂರ್ಕಿ ವಿಶ್ವವಿದ್ಯಾಲಯದಲ್ಲಿ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿ ಪಡೆದಿದ್ದರು. ಅವರು ಚಿನ್ನದ ಪದಕವನ್ನೂಗಳಿಸಿದ್ದರು.

### ಪ್ರಮಾಣವಚನಕ್ಕೂ ಮುನ್ನ ಯೋಧರಿಗೆ ಗೌರವ



ಕರ್ನಾಟಕದ ಇತಿಹಾಸದಲ್ಲಿ ಮಹಿಳೆಯೊಬ್ಬರು ರಾಜ್ಯಪಾಲರ ಹುದ್ದೆ ಅಲಂಕರಿಸುತ್ತಿರುವುದು ಇದು ಎರಡನೇ ಬಾರಿ. ಈ ಹಿಂದೆ ವಿ.ಎಸ್. ರಮಾದೇವಿ ಅವರು 1999ರಿಂದ 2002ರವರೆಗೆ ರಾಜ್ಯಪಾಲೆಯಾಗಿ ಸೇವೆ ಸಲ್ಲಿಸಿದ್ದರು. ಇದೀಗ ಡಾ. ಸುಧಾ ಯಾದವ್ ಅವರ ನೇಮಕದೊಂದಿಗೆ ರಾಜ್ಯಕ್ಕೆ ಮತ್ತೊಬ್ಬ ಮಹಿಳಾ ರಾಜ್ಯಪಾಲೆ ದೊರೆತಿದ್ದಾರೆ. ಅಧಿಕೃತವಾಗಿ ಅಧಿಕಾರ ಸ್ವೀಕರಿಸುವುದಕ್ಕೂ ಮುನ್ನ ಡಾ. ಸುಧಾ ಯಾದವ್ ಅವರು ಬೆಂಗಳೂರಿನ ರಾಷ್ಟ್ರೀಯ ಮಿಲಿಟರಿ ಸ್ಮಾರಕಕ್ಕೆ ಭೇಟಿ ನೀಡಿ ಹುತಾತ್ಮ ಯೋಧರಿಗೆ ಪುಷ್ಪನಮನ ಸಲ್ಲಿಸಿದರು. ದೇಶದ ರಕ್ಷಣೆಯಲ್ಲಿ ಪ್ರಾಣತ್ಯಾಗ ಮಾಡಿದ ಯೋಧರಿಗೆ ಗೌರವ ಸಲ್ಲಿಸಿದ ಬಳಿಕ ಅವರು ಪ್ರಮಾಣವಚನ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

# ಮತಾಧಿಕಾರದ ರಕ್ಷಣೆಗೆ ಕರ್ನಾಟಕದಲ್ಲಿ ಇಂಡಿಯಾ ಮೈತ್ರಿಕೂಟದ ಸಂಘಟಿತ ಹೋರಾಟ

## ಮಿತ್ರಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಸಮನ್ವಯ ಸಮಿತಿ ರಚಿಸಿ ಎಸ್‌ಐಆರ್ ವಿರುದ್ಧ ರಾಜ್ಯಾದ್ಯಂತ ಹೋರಾಟದ ರೂಪುರೇಷೆಗಳನ್ನು ಸಿದ್ಧಪಡಿಸಿ, ಬೆಂಗಳೂರಿನಿಂದ ಜಿಲ್ಲಾ, ತಾಲ್ಲೂಕು ಮಟ್ಟದವರೆಗೆ ಜನಾಂದೋಲನ ರೂಪಿಸಲು ನಿರ್ಧರಿಸಲಾಗಿದೆ.

• ಉದಯವಾಹಿನಿ, ಬೆಂಗಳೂರು

ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ಪ್ರತಿಯೊಬ್ಬ ನಾಗರಿಕನ ಮತದಾನದ ಹಕ್ಕಿನ ರಕ್ಷಣೆಗಾಗಿ 'ಮತ ಉಳಿಸಿ-ದೇಶ ಉಳಿಸಿ' ಘೋಷಣೆಯಡಿ ಕರ್ನಾಟಕದಲ್ಲಿ ಸಂಘಟಿತ ಹೋರಾಟ ರೂಪಿಸಲು ಇಂಡಿಯಾ ಮೈತ್ರಿಕೂಟದ ಮಿತ್ರಪಕ್ಷಗಳು ನಿರ್ಧರಿಸಿವೆ.

ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ನೇತೃತ್ವದಲ್ಲಿ ಶುಕ್ರವಾರ ನಗರದ ಶಾಸಕರ ಭವನದಲ್ಲಿ ನಡೆದ ರಾಜ್ಯಮಟ್ಟದ ಸಭೆಯಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ, ಅರ್ಹ ಮತದಾರರ ಹೆಸರುಗಳ ಕೈಬಿಡುವಿಕೆ ಹಾಗೂ ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ವಿಸ್ತೃತ ಚರ್ಚೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಬಿ.ಕೆ.ಹರಿಪ್ರಸಾದ್, ಮತದಾನದ ಹಕ್ಕು ಪ್ರಜಾಪ್ರಭುತ್ವದ ಅಡಿಪಾಯ. ಯಾವುದೇ ಕಾರಣಕ್ಕೂ ನೈಜ ಹಾಗೂ ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು.




ದೇಶಾದ್ಯಂತ ಸುಮಾರು 13 ಕೋಟಿ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ, ಅರ್ಹ ಮತದಾರರ ಹೆಸರುಗಳನ್ನು ಮರುಸೇರ್ಪಡೆಗೊಳಿಸಬೇಕು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂಬುದು ಇಂಡಿಯಾ ಮೈತ್ರಿಕೂಟದ ಸ್ಪಷ್ಟ ನಿಲುವಾಗಿದೆ ಎಂದು ತಿಳಿಸಿದರು. ಕೇಂದ್ರ ಸರ್ಕಾರ ಪ್ರಜಾಪ್ರಭುತ್ವ ವಿರೋಧಿ ಹಾಗೂ ಫ್ಯಾಸಿಸ್ಟ್ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿದ ಅವರು, ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸಬೇಕಾದ ಚುನಾವಣಾ ಆಯೋಗವು ರಾಜಕೀಯ ಪಕ್ಷವೊಂದರ ಪರವಾಗಿ ನಡೆದುಕೊಳ್ಳುತ್ತಿದೆ. ಮತದಾರರ ಹಕ್ಕುಗಳನ್ನು ಕಸಿದುಕೊಳ್ಳುವ ಯಾವುದೇ ಪ್ರಯತ್ನದ ವಿರುದ್ಧ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಿ ಹೋರಾಡಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಪ್ರತಿಭಟನೆ ನಡೆಸುವುದು ಪ್ರತಿಯೊಬ್ಬ ನಾಗರಿಕನ ಪ್ರಜಾಸತ್ತಾತ್ಮಕ ಹಕ್ಕು. ನಿರ್ಬಂಧಗಳನ್ನು ವಿಧಿಸುವ ಮೂಲಕ ಜನರ ಧ್ವನಿಯನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಸಂವಿಧಾನ ಮತ್ತು ಮತಾಧಿಕಾರದ ರಕ್ಷಣೆಗಾಗಿ ನಡೆಯುವ ಹೋರಾಟವನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ಇದು ಕೇವಲ ರಾಜಕೀಯ ಪಕ್ಷಗಳ ಹೋರಾಟವಲ್ಲ, ದೇಶದ ಪ್ರಜಾಪ್ರಭುತ್ವದ ಅಸ್ತಿತ್ವ ಹಾಗೂ ನಾಗರಿಕರ ಸಾಂವಿಧಾನಿಕ ಹಕ್ಕುಗಳ ರಕ್ಷಣೆಗಾಗಿ ನಡೆಯುವ ಹೋರಾಟ ಎಂದು ಹರಿಪ್ರಸಾದ್ ಸ್ಪಷ್ಟಪಡಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಮಿತ್ರಪಕ್ಷಗಳ ಮುಖಂಡರು ಎಸ್‌ಐಆರ್ ಪ್ರಕ್ರಿಯೆಯ ಪರಿಣಾಮಗಳು, ಮತದಾರರ ಪಟ್ಟಿಯಲ್ಲಿನ ಲೋಪದೋಷಗಳು ಹಾಗೂ ಮುಂದಿನ ಹೋರಾಟದ ಕಾರ್ಯತಂತ್ರದ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ರೈತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳನ್ನು ಒಗ್ಗೂಡಿಸಿಕೊಂಡು ಮತಾಧಿಕಾರದ ರಕ್ಷಣೆಯ ಹೋರಾಟವನ್ನು ಜನಾಂದೋಲನವಾಗಿ ರೂಪಿಸುವ ಅಗತ್ಯವನ್ನು ಪ್ರತಿಪಾದಿಸಿದರು.

### ಇಂಡಿಯಾ ಮೈತ್ರಿಕೂಟದ ಸಮನ್ವಯ ಸಮಿತಿ ರಚನೆ

ರಾಜ್ಯದಲ್ಲಿ ಇಂಡಿಯಾ ಮೈತ್ರಿಕೂಟದ ಹೋರಾಟವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಸಂಘಟಿಸಲು ಕಾಂಗ್ರೆಸ್, ಸಿಪಿಐ, ಸಿಪಿಐ(ಎಂ), ಸಿಪಿಐ(ಎಂಎಲ್) ಲಿಬರೇಶನ್, ಸಮಾಜವಾದಿ ಪಕ್ಷ ಹಾಗೂ ಫಾರ್ವರ್ಡ್ ಬ್ಲಾಕ್ ಸೇರಿದಂತೆ ಮಿತ್ರಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಸಮನ್ವಯ ಸಮಿತಿ ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಸಮಿತಿಯ ಮೂಲಕ ರಾಜ್ಯಾದ್ಯಂತ ಹೋರಾಟದ ರೂಪುರೇಷೆಗಳನ್ನು ಸಿದ್ಧಪಡಿಸಿ, ಬೆಂಗಳೂರಿನಿಂದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದವರೆಗೆ ಜನಾಂದೋಲನ ರೂಪಿಸಲು ನಿರ್ಧರಿಸಲಾಯಿತು. ನವೆಂಬರ್ 1ರಂದು ನವದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆಯಲಿರುವ ಬೃಹತ್ ಪ್ರತಿಭಟನೆಯಲ್ಲಿ ಕರ್ನಾಟಕದ ಇಂಡಿಯಾ ಮೈತ್ರಿಕೂಟದ ಎಲ್ಲಾ ಮಿತ್ರಪಕ್ಷಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇದರ ಮುಂದುವರೆದ ಭಾಗವಾಗಿ ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿ, ನಂತರ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ಹೋರಾಟವನ್ನು ವಿಸ್ತರಿಸಲಾಗುವುದು ಎಂದು ಹರಿಪ್ರಸಾದ್ ತಿಳಿಸಿದರು.

ಈ ದಿನದ ದರ ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 14,744 /Gram 24ct ₹ 13,515/Gram 22ct ಬೆಳ್ಳಿ: ₹230./ Gram

# ಮಾರತ್ತಹಳ್ಳಿಯಲ್ಲಿ ಉಚಿತ ಹೆಲ್ತ್ ಕಾರ್ಡ್ ವಿತರಣೆ

• ಉದಯವಾಹಿನಿ, ಕೆ.ಆರ್.ಪುರ

ಬೆಂಗಳೂರು ಪೂರ್ವ ನಗರ ಪಾಲಿಕೆಯ ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಸಫಾಯಿ ಕರ್ಮಚಾರಿಗಳ ಆರೋಗ್ಯ ರಕ್ಷಣೆಯ ಉದ್ದೇಶದಿಂದ ಮಾರತ್ತಹಳ್ಳಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಹೆಲ್ತ್ ಕಾರ್ಡ್ ಅನ್ನು ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತರಾದ ಡಿ.ಎಸ್. ರಮೇಶ್ ಅವರು ವಿತರಣೆ ಮಾಡಿದರು.

ನಂತರ ಮಾತನಾಡಿದ ಅವರು ಪೌರಕಾರ್ಮಿಕರು ಪ್ರತಿದಿನ ನಗರದ ಸ್ವಚ್ಛತೆಯನ್ನು ಕಾಪಾಡಲು ಶ್ರಮಿಸುತ್ತಿದ್ದು, ಸಾರ್ವಜನಿಕರ ಆರೋಗ್ಯ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಅವರ ಸೇವೆಯನ್ನು ಗುರುತಿಸಿ, ಅವರ ಆರೋಗ್ಯದ ಕಾಳಜಿ ವಹಿಸುವುದು ನಮ್ಮ ಕರ್ತವ್ಯವಾಗಿದೆ. ಈ ಉದ್ದೇಶದಿಂದ ವೈದೇಹಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಆಯುಕ್ತರು ತಿಳಿಸಿದರು.

ಶಿಬಿರದಲ್ಲಿ ಒಂಬತ್ತಕ್ಕೂ ಹೆಚ್ಚು ಆರೋಗ್ಯ ತಪಾಸಣಾ ಕೌಂಟರ್‌ಗಳನ್ನು ತೆರೆಯಲಾಗಿದ್ದು, ವೈದ್ಯಕೀಯ ಸಿಬ್ಬಂದಿಯಿಂದ ಸ್ವಚ್ಛತಾ ಸಿಬ್ಬಂದಿಯ ಆರೋಗ್ಯ ತಪಾಸಣೆ ನಡೆಸಲಾಯಿತು. ರಕ್ತದೊತ್ತಡ, ರಕ್ತದಲ್ಲಿನ ಸಕ್ಕರೆ ಪ್ರಮಾಣ ಸೇರಿದಂತೆ ವಿವಿಧ ಆರೋಗ್ಯ ತಪಾಸಣೆಗಳನ್ನು ಕೈಗೊಳ್ಳಲಾಯಿತು. ಆರೋಗ್ಯ ಸಮಸ್ಯೆಗಳಿರುವವರಿಗೆ ಸೂಕ್ತ ವೈದ್ಯಕೀಯ ಸಲಹೆ ನೀಡಲಾಯಿತು. ಒಟ್ಟಾರೆ 1,700ಕ್ಕೂ ಹೆಚ್ಚು ಸ್ವಚ್ಛತಾ ಸಿಬ್ಬಂದಿ ಉಚಿತ ಆರೋಗ್ಯ ತಪಾಸಣೆಯ ಪ್ರಯೋಜನ ಪಡೆದುಕೊಂಡರು.

# ರಾಜ್ಯ ಆರೋಗ್ಯ ಇಲಾಖೆ 'ಗ್ರೂಪ್ ಡಿ' ಸಿಬ್ಬಂದಿ ನೇಮಕಾತಿಯಲ್ಲಿ ಅಕ್ರಮ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಹೈದರಾಬಾದ್-ಕರ್ನಾಟಕ ಕೇಡರ್ ಅಡಿಯಲ್ಲಿ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ನೇಮಕಗೊಂಡಿದ್ದ 'ಗ್ರೂಪ್ ಡಿ' ವೃಂದದ 52 ನೌಕರರು, ನಕಲಿ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಗಳನ್ನು ಸಲ್ಲಿಸಿದ್ದಾರೆ ಎಂಬ ಆರೋಪದ ಮೇಲೆ ಅಮಾನತುಗೊಂಡಿದ್ದಾರೆ. ಇವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ಇಲಾಖೆಯು 2015ರ ಮಾರ್ಚ್‌ನಲ್ಲಿ 'ಗ್ರೂಪ್ ಡಿ' ನೌಕರರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿತ್ತು. ಜಾತಿವಾರು ವರ್ಗೀಕರಣದ ಆಧಾರದ ಮೇಲೆ 18 ರಿಂದ 40 ವರ್ಷ ವಯೋಮಿತಿಯನ್ನು ನಿಗದಿಪಡಿಸಲಾಗಿತ್ತು. ವಿದ್ಯಾರ್ಹತೆಯಾಗಿ ಮಾನ್ಯತೆ ಪಡೆದ ಮಂಡಳಿಯಿಂದ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕೆಂದು ಕಡ್ಡಾಯಗೊಳಿಸಲಾಗಿತ್ತು. ಅಭ್ಯರ್ಥಿಗಳ ಶೈಕ್ಷಣಿಕ ಅಂಕಗಳ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆ ನಡೆಯಬೇಕಿತ್ತು. ಅದೇ ವರ್ಷದ ನವೆಂಬರ್‌ನಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಯಿತು.

ಆದರೆ, ನೇಮಕಾತಿ ಆದೇಶಗಳನ್ನು 2016ರ ಜೂನ್‌ನಲ್ಲಿ ನೀಡಲಾಯಿತು. ಈ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡು, ಕಲ್ಯಾಣ ಕರ್ನಾಟಕ ಪ್ರದೇಶದ ವಿವಿಧ ಜಿಲ್ಲಾ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ನಿಯೋಜಿಸಲಾಗಿತ್ತು. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಗಳಿಸಿದ್ದ 230 ಅಂಕಗಳನ್ನು, ಅವರ ಅಂಕಪಟ್ಟಿಗಳಲ್ಲಿ 625ಕ್ಕೆ 586 ಅಂಕಗಳೆಂದು ಬದಲಾಯಿಸಿ ತೋರಿಸಲಾಗಿತ್ತು. ಇದರ ಬೆನ್ನಲ್ಲೇ, ಕರ್ನಾಟಕದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ನಡೆಸುವ 'ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ'ಗೆ ಇಲಾಖೆಯು ಪತ್ರ ಬರೆದಿದೆ.

## ಸ್ಟಿಂಗ್ ಆಪರೇಷನ್ ಟಾರ್ಗೆಟ್: ಬೆಂಬಲಕ್ಕೆ ಬಾರದ ಸಂಪುಟ ಸಹೋದ್ಯೋಗಿಗಳು

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬಿಜೆಪಿ ಮತ್ತು ಜೆಡಿ(ಎಸ್) ಪಕ್ಷಗಳು 'ಸ್ಟಿಂಗ್ ಆಪರೇಷನ್' ವಿಷಯದಲ್ಲಿ ತಮ್ಮನ್ನು ಗುರಿಯಾಗಿಸಿಕೊಂಡಿದ್ದರೂ, ತಮ್ಮ ಸಂಪುಟ ಸಹೋದ್ಯೋಗಿಗಳು ಬೆಂಬಲ ನೀಡುತ್ತಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ.

ಮೂಲಗಳ ಪ್ರಕಾರ, ಸಚಿವ ಸಂಪುಟ ಸಭೆಯ ಆರಂಭದಲ್ಲೇ ಮುಖ್ಯಮಂತ್ರಿಯವರು ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮತ್ತು ಬಿಜೆಪಿ ನಾಯಕರು ತಮ್ಮ ಮೇಲೆ ದಾಳಿ ನಡೆಸುತ್ತಿದ್ದರೂ, ಬಹುತೇಕ ಸಚಿವರು ತಮ್ಮ ಬೆಂಬಲಕ್ಕೆ ಬರುತ್ತಿಲ್ಲ ಎಂದು ಮುಖ್ಯಮಂತ್ರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇದು ಸಂಪುಟದಲ್ಲಿ ಒಗ್ಗಟ್ಟಿಲ್ಲ ಎಂಬ ಸಂದೇಶವನ್ನು ರವಾನಿಸುತ್ತದೆ ಎಂದು ಅವರು ಹೇಳಿದ್ದಾರೆ ಎನ್ನಲಾಗಿದೆ. ಇನ್ನು ಮುಂದೆ ಈ ವಿಷಯದ ಕುರಿತು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಮಾತ್ರ ಪ್ರತಿಕ್ರಿಯಿಸಬೇಕು, ಬೇರೆ ಯಾರೂ ಮಾತನಾಡಬಾರದು ಎಂದು ಅವರು ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. 'ಸ್ಟಿಂಗ್ ಆಪರೇಷನ್' ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಸ್ತುತ ನಡೆಯುತ್ತಿರುವ ತನಿಖೆಯು ಅದೇ ರೀತಿಯಲ್ಲಿ ಮುಂದುವರಿಯಬೇಕು ಎಂದು ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಒಂದು ವೇಳೆ ಬೇರೆ ರೀತಿಯ ತನಿಖೆಯ ಅಗತ್ಯವಿದ್ದರೆ, ಆ ನಿರ್ಧಾರವನ್ನು ಮುಖ್ಯಮಂತ್ರಿಯವರ ವಿವೇಚನೆಗೆ ಬಿಡಲಾಗಿದೆ ಎಂದು ತಿಳಿದು ಬಂದಿದೆ.

# ದೆಹಲಿಯ CJP ಹೋರಾಟಕ್ಕೆ ಕರ್ನಾಟಕದಿಂದ ಫಂಡಿಂಗ್

## ಅಪ್ಪಾ, ನಮ್ಮ ಗೃಹ ಸಚಿವರೇ, ಇದು ನಿಮ್ಮ ಹೇಳಿಕೆ- ವಿಡಿಯೋ ಪ್ರದರ್ಶಿಸಿ ಎಚ್ ಡಿಕೆ ಟಾಂಗ್

• ಉದಯವಾಹಿನಿ, ಬೆಂಗಳೂರು

1 ಸಾರ್ವಜನಿಕ ಜೀವನದಲ್ಲಿ ಅನುಭವ
2 ಪತಿಯನ್ನು ಕಳೆದುಕೊಂಡಿದ್ದ ಸುಧಾ
3 ಸೇನಾ ಪದಕ ನೀಡಿ ಗೌರವಿಸಲಾಗಿತ್ತು

ದೆಹಲಿಯಲ್ಲಿ ನಡೆಯುತ್ತಿರುವ ಸಿಜೆಪಿ ಪ್ರತಿಭಟನೆ ಹಾಗೂ ಧರಣಿಗಳಿಗೆ ಕರ್ನಾಟಕ ಸರ್ಕಾರದಿಂದಲೇ ಹಣ ರವಾನೆಯಾಗುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ನಿನ್ನೆ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾಂಗ್ರೆಸ್ ಮತ್ತು ಸಿಜೆಪಿ ಎರಡೂ ಒಂದೇ ಎಂದು ಹೇಳಿದ್ದಾರೆ. ಏನು ಬೇಕಾದರೂ ಗಲಾಟೆ ಮಾಡಿ, ನಾವು ಯಾವುದೇ ಕಾನೂನು ಕ್ರಮ ಕೈಗೊಳ್ಳುವುದಿಲ್ಲ ಎಂದು ಪರೋಕ್ಷವಾಗಿ ಪ್ರಚೋದನೆ ನೀಡುತ್ತಿದ್ದಾರೆ ಎಂದು ದೂರಿದರು.

ತಮ್ಮ ಪರವಾಗಿ, ತಮಗೆ ಬೇಕಾದಂತೆ ಕಾನೂನನ್ನು ಕೈಗೆತ್ತಿಕೊಂಡು ಹೋರಾಟ ನಡೆಸಿದರೆ ಸರ್ಕಾರ ಯಾವುದೇ ಕ್ರಮ ಜರುಗಿಸುವುದಿಲ್ಲ ಎಂದು ಹೇಳುವ ಮೂಲಕ ಹೋರಾಟಗಾರರಿಗೆ ಯಾರೂ ಹೆದರಬೇಡಿ ಎಂದು ಅಭಯ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ಇತ್ತೀಚೆಗೆ ವೈರಲ್ ಆಗಿರುವ ವಿಡಿಯೋವೊಂದನ್ನು ಪ್ರದರ್ಶಿಸಿ, ತಮ್ಮ ಪರವಾಗಿ ಹೋರಾಟ ನಡೆಸುವವರ ವಿರುದ್ಧ ಪೊಲೀಸರು ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಪ್ರಿಯಾಂಕ್ ಖರ್ಗೆ ಹೇಳಿರುವುದನ್ನು ಕುಮಾರಸ್ವಾಮಿ ಟೀಕಿಸಿದ್ದಾರೆ. ನೀವೇನು ಬೇಕಾದರೂ ಗಲಾಟೆ ಮಾಡಿ, ನಿಮ್ಮ ಮೇಲೆ ನಾವೇನು ಪೊಲೀಸ್‌ನವರು ಆ್ಯಕ್ಷನ್ ತಗೊಳ್ಳಲ್ಲ ಎಂದು ಸಿಜೆಪಿ ಪರ ಖರ್ಗೆ ಹೇಳಿಕೆ ನೀಡಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದ್ದಾರೆ.

ಅಪ್ಪಾ, ನಮ್ಮ ಗೃಹ ಸಚಿವರೇ, ನಿಮ್ಮ ಹೇಳಿಕೆ ಇದು ಎಂದು ವಿಡಿಯೋ ಪ್ರದರ್ಶಿಸಿ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು. ಅಲ್ಲದೆ, ಸಿಜೆಪಿ ಚಟುವಟಿಕೆಗಳಿಗೆ ಫಂಡ್ಸ್ ಎಲ್ಲಾ ಇಲ್ಲಿಂದಲೇ ಹೋಗ್ತಾ ಇದೆ. ನಮ್ಮ ರಾಜ್ಯದ ಹಣವನ್ನ ಲೂಟಿ ಮಾಡಿ, ದೇಶದಲ್ಲಿ ಅಭದ್ರತೆ ಉಂಟುಮಾಡಲು ರವಾನಿಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಮುಖ್ಯಮಂತ್ರಿಗಳು ಪದೇ ಪದೇ ಕಾಲವೇ ಎಲ್ಲವನ್ನೂ ನಿರ್ಧಾರ ಮಾಡುತ್ತದೆ ಎಂದು ಹೇಳುತ್ತಿರುತ್ತಾರೆ. ಈ ಎಲ್ಲಾ ಅಕ್ರಮ ಮತ್ತು ಒಳಸಂಚುಗಳು ಸದ್ಯದಲ್ಲೇ ಜನರ ಮುಂದೆ ಬಯಲಾಗಲಿವೆ ಎಂದು ಕುಮಾರಸ್ವಾಮಿ ಎಚ್ಚರಿಕೆ ನೀಡಿದ್ದಾರೆ. ಸಿದ್ದಾರ್ಥ ಟ್ರಸ್ಟ್ ವಿಷಯದಲ್ಲಿ ಮೋದಿ ಹತ್ರ ಮಲ್ಲಿಕಾರ್ಜುನ್ ಖರ್ಗೆ ಯಾಕೆ ಹೋಗಿದ್ರು ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಗೃಹ ಸಚಿವರ ಈ ಹೇಳಿಕೆಯು ಕಾನೂನು ಸುವ್ಯವಸ್ಥೆಯನ್ನು ದುರ್ಬಲಗೊಳಿಸುವ ಪ್ರಯತ್ನ ಎಂದು ಕುಮಾರಸ್ವಾಮಿ ಹೇಳಿದ್ದಾರೆ.


ಉದಯವಾಹಿನಿ ಚಿತ್ರ

### ಕೆಪಿಎಸ್ಸಿ ಕಾರ್ಯವೈಖರಿ ಬಗ್ಗೆ ಯುವಜನರ ಆಕ್ರೋಶ

ಈ ಸಂದರ್ಭದಲ್ಲಿ ಅನೇಕ ಉದ್ಯೋಗ ವಂಚಿತ ಅಭ್ಯರ್ಥಿಗಳು ಸಚಿವರಲ್ಲಿ ದೂರುಗಳನ್ನು ಹೇಳಿಕೊಂಡರು. ಪರೀಕ್ಷಾ ವಿಧಾನ, ತಪ್ಪು ತಪ್ಪಾಗಿ ಮುದ್ರಣವಾಗುವ ಪ್ರಶ್ನೆ ಪತ್ರಿಕೆಗಳು, ಒಎಂಆರ್ ಶೀಟುಗಳ ತಿದ್ದುಪಡಿ ಸೇರಿದಂತೆ ಅನೇಕ ಅಕ್ರಮಗಳನ್ನು ಎಸಗಲಾಗಿದೆ ಎಂದು ಹೇಳಿದರು. ನಮಗೆ ಈ ಸರ್ಕಾರದ ಮೇಲೆ ನಂಬಿಕೆಯೇ ಸತ್ತುಹೋಗಿದೆ. ನೋಟಿಫಿಕೇಶನ್ ಮಾಡುತ್ತಾರೆ, ಆದರೆ ಓದುವುದಕ್ಕೆ ಸಮಯವನ್ನೇ ಕೊಡುವುದಿಲ್ಲ. ಉತ್ತರ ಕರ್ನಾಟಕದಿಂದ ಬಂದು ಬೆಂಗಳೂರಿನಲ್ಲಿ ತಿಂಗಳಾನುಗಟ್ಟಲೆ ಕಷ್ಟಪಟ್ಟು ಓದುತ್ತಿದ್ದೇವೆ. ನಮಗೆ ಈ ಸರ್ಕಾರದ ಮೇಲೆ ನಂಬಿಕೆಯೇ ಸತ್ತುಹೋಗಿದೆ. ಪೀಜಿಗಳಿಗೆ ಅಣೆಕಟ್ಟಲಾಗಿದೆ ಸಂಕಷ್ಟದಲ್ಲಿದ್ದೇವೆ. ನಮ್ಮ ಜೊತೆ ಕೆಪಿಎಸ್ಸಿ ಚೆಲ್ಲಾಟ ಆಡುತ್ತಿದೆ ಎಂದು ಉತ್ತರ ಕರ್ನಾಟಕದ ಅಭ್ಯರ್ಥಿ ಒಬ್ಬರು ಆರೋಪಿಸಿದರು.

### 15 ವರ್ಷಕ್ಕೆ ಇಳಿಸಬೇಕು

ಒಮ್ಮೆ ಒಬ್ಬರು ಸರಕಾರಿ ಉದ್ಯೋಗಕ್ಕೆ ನೇಮಕವಾದರೆ ಅವರಿಗೆ 35 ವರ್ಷ ಸೇವಾವಧಿ ಇರುತ್ತದೆ. ಆದರೆ ಪ್ರತೀ ಕುಟುಂಬಕ್ಕೆ ತಲಾ ಒಂದು ಉದ್ಯೋಗ ಕಲ್ಪಿಸುವ ಉದ್ದೇಶದಿಂದ 35 ವರ್ಷದ ಸೇವಾವಧಿ ಬದಲಿಗೆ 10ರಿಂದ 15 ಅಥವಾ 20 ವರ್ಷಕ್ಕೆ ಇಳಿಸಬೇಕು. ಇಷ್ಟು ಮಿತಿಯನ್ನು ಹಾಕುವ ಮೂಲಕ ಉದ್ಯೋಗಗಳನ್ನು ಎಲ್ಲರಿಗೂ ಕೊಡುವ ಪ್ರಯತ್ನ ಮಾಡಬಹುದು ಎಂದು ಸಚಿವರು ಹೇಳಿದರು. ಕೆಲಸದಿಂದ ನಿವೃತ್ತಿಯಾಗುವ ಉದ್ಯೋಗಿ ನಿವೃತ್ತಿ ಆದ ನಂತರ ದೊರೆಯುವ ಪಿಂಚಣಿ ಸೇರಿದಂತೆ ಎಲ್ಲಾ ಸೌಲಭ್ಯಗಳಿಗೆ ಅರ್ಹನಾಗಿರುತ್ತಾನೆ. ಇದರಿಂದ ಉದ್ಯೋಗ ಸಿಗದೇ ಇರುವವರಿಗೆ ಅವಕಾಶ ದೊರೆಯುತ್ತದೆ ಹಾಗೂ ನಿರುದ್ಯೋಗ ನಿವಾರಣೆಯಲ್ಲಿ ದೊಡ್ಡ ಪ್ರಯತ್ನ ಮಾಡಿದಂತೆ ಆಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಮುಂದಿನ ದಿನಗಳಲ್ಲಿ ಅವಕಾಶ ಸಿಕ್ಕರೆ ನಾನು ಈ ಯೋಜನೆ ಅನುಷ್ಠಾನಕ್ಕೆ ತರುವ ಉದ್ದೇಶ ಹೊಂದಿದ್ದೇನೆ.

ಯುವ ಜನರಿಗೆ ಉದ್ಯೋಗ ಕಲ್ಪಿಸುವ ದೃಷ್ಟಿಯಿಂದ ಇಂಥ ಯೋಚನೆ ಕಾರ್ಯರೂಪಕ್ಕೆ ಬಂದರೆ ಹೇಗೆ ಎಂದು ನಾನು ಆಲೋಚನೆ ಮಾಡುತ್ತಿದ್ದೇನೆ. ನನ್ನ ಪ್ರಕಾರ ಪ್ರತಿ ಮನೆಗೂ ಕನಿಷ್ಠ ಒಂದು ಸರ್ಕಾರಿ ಕೆಲಸವಾದರೂ ದೊರೆಯಬೇಕು. ನನ್ನ ಆಲೋಚನೆಯನ್ನು ಜನರ ಮುಂದೆ ಇರಿಸಿದ್ದೇನೆ. ಇದರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯಲಿ ಎಂದು ಸಚಿವರು ಹೇಳಿದರು.

## ಪರಿಶೀಲನೆ ಇಲ್ಲದೆ ಮತದಾರರ ಹೆಸರು ಡಿಲೀಟ್ ಮಾಡಿಲ್ಲ ಸ್ಪಷ್ಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಪ್ರಸ್ತುತ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮತದಾರರ ಹೆಸರುಗಳನ್ನು ಅಳಿಸಲಾಗುತ್ತಿದೆ ಎಂಬ ಆತಂಕ ಹೆಚ್ಚುತ್ತಿರುವ ಬೆನ್ನಲ್ಲೇ, ಸೂಕ್ತ ದಾಖಲೆಗಳು ಮತ್ತು ಪರಿಶೀಲನೆ ಇಲ್ಲದೆ ಮತದಾರರ ಪಟ್ಟಿಯಿಂದ ಯಾವುದೇ ಹೆಸರನ್ನು ತೆಗೆದುಹಾಕುತ್ತಿಲ್ಲ ಎಂದು ಚುನಾವಣಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಮೃತರು, ನಕಲು ಅಥವಾ ಸ್ಥಳಾಂತರಗೊಂಡ ಮತದಾರರನ್ನು ಮಾತ್ರ ಪಟ್ಟಿಯಿಂದ ತೆಗೆದುಹಾಕಲಾಗುತ್ತಿದೆ. ಸೂಕ್ತ ದಾಖಲೆಗಳು ಮತ್ತು ಸ್ಥಳ ಪರಿಶೀಲನಾ ಮಹಜರು ಇಲ್ಲದೆ ಸಲ್ಲಿಸಲಾದ ನಮೂನೆ-7 ಅರ್ಜಿಗಳನ್ನು ಪರಿಗಣಿಸಲಾಗುತ್ತಿಲ್ಲ ಎಂದು ಹೇಳಿದ್ದಾರೆ.

ಇದೇ ವೇಳೆ ವಿದೇಶಿ ಪ್ರಜೆಗಳ ಹೆಸರುಗಳನ್ನೂ ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗುತ್ತಿದೆ ಎಂದು ಅಧಿಕಾರಿಗಳು ಒಪ್ಪಿಕೊಂಡಿದ್ದು, ಪ್ರತಿಯೊಬ್ಬ ಮತದಾರರ ವಿವರಗಳನ್ನೂ ಈಗ ಕಟ್ಟುನಿಟ್ಟಾಗಿ ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಇದೂವರೆಗೆ ಇದೇ ಪರಿಶೀಲನೆ ಮತ್ತು ದಾಖಲೆಗಳ ಪ್ರಕ್ರಿಯೆಯ ಮೂಲಕ 26 ನೇಪಾಳಿ ಪ್ರಜೆಗಳ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆಗಸ್ಟ್ 24ರಿಂದ ಸೆಪ್ಟೆಂಬರ್ 23ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳ ಅವಧಿಯಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಮಾತ್ರ ಅಕ್ಟೋಬರ್ 27ರಂದು ಪ್ರಕಟವಾಗಲಿರುವ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಅಥವಾ ಹೆಸರು ತೆಗೆದುಹಾಕುವ ಪ್ರಕ್ರಿಯೆಗೆ ಪರಿಗಣಿಸಲಾಗುತ್ತದೆ. ಈ ಅವಧಿಯ ನಂತರ ಸಲ್ಲಿಸಲಾದ ಅರ್ಜಿಗಳನ್ನು 2027ರ ಜನವರಿಯಲ್ಲಿ ಪ್ರಕಟವಾಗಲಿರುವ ಪೂರಕ ಪಟ್ಟಿಯಲ್ಲಿ ಸೇರ್ಪಡೆ ಅಥವಾ ತೆಗೆದುಹಾಕುವ ಪ್ರಕ್ರಿಯೆಗೆ ಪರಿಗಣಿಸಲಾಗುತ್ತದೆ.

# BMTC ಶೇ. 40, , KSRTC ಶೇ. 25ರಷ್ಟು ದರ ಹೆಚ್ಚಳಕ್ಕೆ ಸಮಿತಿ ಶಿಫಾರಸು!

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಕರ್ನಾಟಕದಲ್ಲಿ ಸಾರ್ವಜನಿಕರ ಜೇಬಿಗೆ ಮತ್ತಷ್ಟು ಕತ್ತರಿ ಬೀಳುವ ಸಾಧ್ಯತೆ ದಟ್ಟವಾಗಿದೆ.! ಈಗಾಗಲೇ ನಂದಿನಿ ಹಾಲಿನ ದರ ಹೆಚ್ಚಳವಾಗುವುದು ಪಕ್ಕಾ ಆಗಿರುವ ಬೆನ್ನಲ್ಲೇ, ಇದೀಗ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ ಟಿಕೆಟ್ ದರಗಳೂ ಸಹ ಭಾರೀ ಪ್ರಮಾಣದಲ್ಲಿ ಏರಿಕೆಯಾಗುವ ಮುನ್ಸೂಚನೆ ಸಿಕ್ಕಿದೆ. ಹೌದು, ತೀವ್ರ ಆರ್ಥಿಕ ನಷ್ಟ ಹಾಗೂ ಹೆಚ್ಚುತ್ತಿರುವ ಇಂಧನ ವೆಚ್ಚದ ಹೊರೆಯನ್ನು ಸರಿದೂಗಿಸಲು ಕೆಎಸ್‌ಆರ್‌ಟಿಸಿ ಪ್ರಯಾಣ ದರವನ್ನು ಶೇಕಡಾ 25 ರಷ್ಟು ಹಾಗೂ ಬಿಎಂಟಿಸಿ ಬಸ್ ಪ್ರಯಾಣ ದರವನ್ನು ಶೇಕಡಾ 40 ರಷ್ಟು ಹೆಚ್ಚಿಸಲು ಸಾರಿಗೆ ಸಂಸ್ಥೆಗಳ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ನಿವೃತ್ತ ಐಎಎಸ್ ಅಧಿಕಾರಿ ಅತುಲ್ ತಿವಾರಿ ನೇತೃತ್ವದ ಸಾರ್ವಜನಿಕ ಸಾರಿಗೆ ದರ ಪರಿಷ್ಕರಣೆ ಸಮಿತಿಯು, ಕೆಎಸ್‌ಆರ್‌ಟಿಸಿ ಸೇರಿದಂತೆ ರಾಜ್ಯದ ಎಲ್ಲಾ ರಸ್ತೆ ಸಾರಿಗೆ ನಿಗಮಗಳ ಆರ್ಥಿಕ ಹೊರೆಯನ್ನು ತಗ್ಗಿಸಲು ಬಸ್ ಪ್ರಯಾಣ ದರವನ್ನು ಕನಿಷ್ಠ ಶೇ. 25 ರಷ್ಟು ಹೆಚ್ಚಿಸಬೇಕೆಂದು ಕರ್ನಾಟಕ ಸರ್ಕಾರಕ್ಕೆ ಅಧಿಕೃತ ವರದಿ ಸಲ್ಲಿಸಿದೆ. ಅದರಂತೆ, ಸಮಿತಿಯ ಪ್ರಕಾರ, KSRTC, NWKRTC, KKRTC ಸಾರಿಗೆ ನಿಗಮಗಳ ಪ್ರಯಾಣ ದರವನ್ನು ಶೇಕಡಾ 25 ರಷ್ಟು ಹೆಚ್ಚಿಸಬೇಕು. ಹಾಗೆಯೇ ಸಾರಿಗೆ ನಿಗಮಗಳ ಪೈಕಿ, ಅತಿ ಹೆಚ್ಚು ನಷ್ಟದಲ್ಲಿರುವ ಬಿಎಂಟಿಸಿ ಪ್ರಯಾಣ ದರವನ್ನು ಶೇ 40ರಷ್ಟು ಹೆಚ್ಚಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ಸಮಿತಿಯು ಶೇ. 25 ರಷ್ಟು ಏರಿಕೆಗೆ ಪ್ರಸ್ತಾಪಿಸಿದ್ದರೂ, ಸಾರ್ವಜನಿಕರ ಮೇಲಿನ ನೇರ ಆರ್ಥಿಕ ಹೊರೆಯನ್ನು ತಗ್ಗಿಸಲು ಸರ್ಕಾರವು ಮಿಲನ ಹಾದಿ ಹಿಡಿಯುವ ಸಾಧ್ಯತೆಯಿದೆ.

# ವೈಟ್ ಫೀಲ್ಡ್ ಅಣ್ಣಯ್ಯ ಜಿಬಿಎ ಕಛೇರಿ ಮುಂದೆ ಸಾಂಕೇತಿಕ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಕ್ರೀಡಾಂಗಣದಲ್ಲಿ ಅನಾಧಿಕೃತವಾಗಿ ಖಾಸಗಿ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ಅನುಮತಿ ನೀಡಿರುವವರ ವಿರುದ್ಧ ಉನ್ನತಾಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ವೈಟ್ ಫೀಲ್ಡ್ ಅಣ್ಣಯ್ಯ ಜಿಬಿಎ ಕಛೇರಿ ಮುಂದೆ ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಂಡಿದ್ದರು.

ಇಲ್ಲಿನ ಹಗ್ಗದೂರು ವಾರ್ಡ್ ವೈಟ್ ಫೀಲ್ಡ್ ಇನ್ನರ್ ಸರ್ಕಲ್ ಆಟದ ಕ್ರೀಡಾಂಗಣದಲ್ಲಿ ಅನಾಧಿಕೃತವಾಗಿ ಖಾಸಗಿ ಹಾಗೂ ವಾಣಿಜ್ಯ ಕಾರಣಕ್ಕೆ ಯಾವುದೇ ಅನುಮತಿ ನೀಡಬಾರದೆಂದು ಅವರು ಪ್ರತಿಭಟನೆಯಲ್ಲಿ ಹೇಳಿದರು. ನ್ಯಾಯಾಲಯದ ಆದೇಶವನ್ನು ಗಾಳಿಗೆ ತೂರಿ ಅನಾಧಿಕೃತವಾಗಿ ಜಿಬಿಎ ಮತ್ತಿತರ ಇಲಾಖೆಯ ಅಧಿಕಾರಿಗಳು ಅನುಮತಿ ನೀಡಿ ಪಾರ್ಕ್‌ನಲ್ಲಿ ಆಟೋಪಕರಣಗಳ ಅಮ್ಯೂಸ್‌ಮೆಂಟ್ ಪಾರ್ಕ್ ಮತ್ತು ಮನೊರಂಜನೆ ಕಾರ್ಯಕ್ರಮಗಳಿಗೆ ನೂರಾರು ಮಳಿಗೆಗಳನ್ನು ನೀಡಿರುವವರ ವಿರುದ್ಧ ಕಠಣ ಕ್ರಮಕೈಕೊಳ್ಳಬೇಕೆಂದು ವಿವಿಧ ಇಲಾಖೆಯ ಆಯುಕ್ತರಿಗೆ ಹಾಗೂ ಅಧಿಕಾರಿಗಳಿಗೆ ದೂರು ನೀಡಿದರು ಕ್ರಮಕೈಕೊಳ್ಳುತ್ತಿಲ್ಲ ಎಂದು ಆರೋಪಿಸಿದರು. ಅಧಿಕಾರಿಗಳು ಖಾಸಗಿ ವ್ಯಕ್ತಿ ಸಂಸ್ಥೆಗೊಂದಿಗೆ ಶಮಿಲಾಗಿ ವಾಣಿಜ್ಯ ಚಟುವಟಿಕೆಗಳಿಗೆ ಅನುಮತಿ ನೀಡುವುದರ ಜೊತೆಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಸಹ ಪಡೆದುಕೊಂಡಿರುವುದು ಕಂಡುಬಂದಿದೆ. ಇಲ್ಲಿ ಯಾವುದೇ ಅವಘಡಗಳು ಸಂಭವಿಸಿದರೆ ಇದಕ್ಕೆ ನೇರ ಹೊಣೆ ಬಿಬಿಎ, ಇಲ್ಲಿ ಯಾವುದೇ ಸುರಕ್ಷಿತ ಕ್ರಮಗಳು ಕಂಡಬಂದಿರುವುದಿಲ್ಲ. ಜನರ ಸುರಕ್ಷತೆಗಿಂತ ಅಧಿಕಾರಿಗಳಿಗೆ ದುಡ್ಡು ಮಾಡುವುದೆ ಮುಖ್ಯವೆಂಬುತೆ ಕಾಣುತ್ತಿದೆ. ಕ್ರೀಡಾಂಗಣವಿರುವುದು ವಿಶ್ರಾಂತಿ, ವಾಕಿಂಗ್, ಆಟ, ಕ್ರೀಡಾ, ಚಟುವಟಿಕೆಗಳ ಉಪಯೋಗಕ್ಕೆ ಹೊರತು ಖಾಸಗಿಕಾರಣ ಅಥವಾ ವಾಣಿಜ್ಯ ಕಾರಣಾಕ್ಕಲ್ಲವೆಂಬ ನ್ಯಾಯಲಯದ ನಿರ್ದೇಶನವಿದ್ದರು ಅಕ್ರಮವಾಗಿ ಅನುಮತಿ ನೀಡಿರುವ ಅಧಿಕಾರಿಗಳ ಮೇಲೆ ಸೂಕ್ತ ತನಿಖೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು. ಜಿಬಿಎ ಮನಬಂದಂತೆ ಅಧಿಕಾರವನ್ನು ಮತ್ತು ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಆಟದ ಮೈದನದಲ್ಲಿ ಜಿಬಿಎ ಸರ್ಕಾರಿ ನಾಮಫಲಕವನ್ನು ಅಳವಡಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಆಂದೋಲನ, ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.





ಉದಯವಾಹಿನಿ ಚಿತ್ರ

## ರಾಜ್ಯದ ಸ್ವೀಟ್ ಅಂಗಡಿಗಳ ಮೇಲೆ ಫುಡ್ ಸೇಫ್ಟಿ ಅಧಿಕಾರಿಗಳ ದಾಳಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಾದ್ಯಂತ ಸಿಹಿ ತಿನಿಸುಗಳ ತಯಾರಿಕೆ ಮತ್ತು ಮಾರಾಟ ಮಳಿಗೆಗಳಲ್ಲಿ ನಡೆಸಿದ ವಿಶೇಷ ತಪಾಸಣಾ ಕಾರ್ಯಾಚರಣೆಯ ವೇಳೆ ವ್ಯಾಪಕ ಲೋಪ ಪತ್ತೆಯಾಗಿದ್ದು, ಇದರ ಬೆನ್ನಲ್ಲೇ ನಿಯಮ ಉಲ್ಲಂಘಿಸಿದ 10 ಮಂದಿ ಉದ್ಯಮಿಗಳಿಗೆ ನೋಟಿಸ್ ನೀಡಲಾಗಿದೆ ಎಂದು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ತಿಳಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರ ಸೂಚನೆಯ ಮೇರೆಗೆ ಒಟ್ಟು 80 ಸಿಹಿ ತಿನಿಸುಗಳ ತಯಾರಿಕಾ ಘಟಕಗಳು ಹಾಗೂ ಮಾರಾಟ ಮಳಿಗೆಗಳಲ್ಲಿ ತಪಾಸಣೆ ನಡೆಸಲಾಗಿದೆ. ಹಬ್ಬದ ಸಂದರ್ಭದಲ್ಲಿ ಜನರಿಗೆ ಸುರಕ್ಷಿತ ಮತ್ತು ಗುಣಮಟ್ಟದ ಆಹಾರ ಉತ್ಪನ್ನಗಳು ಲಭ್ಯವಾಗುವುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ, 2006ರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಹಾಗೂ 2011ರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ (ಪರವಾನಗಿ ಮತ್ತು ನೋಂದಣಿ) ನಿಯಮಾವಳಿಗಳ ಅನ್ವಯ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ತಪಾಸಣೆಯ ವೇಳೆ ಒಟ್ಟು 125 ಆಹಾರ ಮಾದರಿಗಳನ್ನು ಸಂಗ್ರಹಿಸಿ, ಅವುಗಳ ಗುಣಮಟ್ಟ ಮತ್ತು ಆಹಾರ ಸುರಕ್ಷತಾ ಮಾನದಂಡಗಳ ಪಾಲನೆಯನ್ನು ಪರಿಶೀಲಿಸಲು ಸಂಬಂಧಪಟ್ಟ ಸರ್ಕಾರಿ ಆಹಾರ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ.

# ವರ್ತೂರು- ಗುಂಜೂರು ಮುಖ್ಯ ರಸ್ತೆ ಶೀಘ್ರ ಲೋಕಾರ್ಪಣೆ

## ಕಿರಿದಾದ ರಸ್ತೆಯಿಂದಾಗಿ ಈ ಭಾಗದಲ್ಲಿ ಪ್ರತಿನಿತ್ಯ ವಾಹನ ಸವಾರರು ಸಂಚಾರ ದಟ್ಟಣೆ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದರು.

• ಉದಯವಾಹಿನಿ, ಕೆ.ಆರ್.ಪುರ

ಮಹದೇವಪುರ ಕ್ಷೇತ್ರದ ವರ್ತೂರು- ಗುಂಜೂರು ಮುಖ್ಯರಸ್ತೆಯ ಕಾಮಗಾರಿಯನ್ನು ಮಾಜಿ ಸಚಿವ ಹಾಗೂ ಮಹದೇವಪುರ ಟಾಸ್ಕ್ ಫೋರ್ಸ್ ಅಧ್ಯಕ್ಷ ಅರವಿಂದ ಲಿಂಬಾವಳಿ ಅವರು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಾರ್ವಜನಿಕರ ಬಹುದಿನಗಳ ಬೇಡಿಕೆಗೆ ಸ್ಪಂದಿಸಿ, ವಾಹನ ಸವಾರರ ಸಂಚಾರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ತಾವು ಶಾಸಕರಾಗಿದ್ದ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ರಸ್ತೆ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲಾಗಿತ್ತು ಎಂದು ತಿಳಿಸಿದರು. ನಂತರ ಸರ್ಕಾರ ಬದಲಾದ ಹಿನ್ನೆಲೆಯಲ್ಲಿ ಅನುದಾನ ಬಿಡುಗಡೆ ವಿಳಂಬವಾಗಿದ್ದರಿಂದ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿತ್ತು. ಇದರಿಂದಾಗಿ ಕಾಮಗಾರಿಗೆ ವೇಗ ನೀಡಲು ಪರಿಶೀಲನೆ ಮಾಡಲಾಗಿದೆ, ಇದೀಗ ಅಂತಿಮ ಹಂತ ತಲುಪಿದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಕಿರಿದಾದ ರಸ್ತೆಯಿಂದಾಗಿ ಈ ಭಾಗದಲ್ಲಿ ಪ್ರತಿನಿತ್ಯ ವಾಹನ ಸವಾರರು ಸಂಚಾರ ದಟ್ಟಣೆ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಇನ್ನು ಕೆಲವೇ ದಿನಗಳಲ್ಲಿ ರಸ್ತೆ ಸಾರ್ವಜನಿಕರ ಬಳಕೆಗೆ ಮುಕ್ತವಾಗಲಿದ್ದು, ಇದರಿಂದ ಸ್ಥಳೀಯ ನಿವಾಸಿಗಳು ಹಾಗೂ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ಬಹುಕಾಲದ ಸಂಚಾರ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದು ಅರವಿಂದ ಲಿಂಬಾವಳಿ ವಿಶ್ವಾಸ ವ್ಯಕ್ತಪಡಿಸಿದರು. ಮೊಬಿಲಿಟಿ ಟಾಸ್ಕ್ ಫೋರ್ಸ್ ಅಧ್ಯಕ್ಷ ನಟರಾಜ್, ನಗರ ಮಂಡಲ ಅಧ್ಯಕ್ಷ ಶ್ರೀಧರ ರೆಡ್ಡಿ, ರಾಜ್ಯ ಬಿಜೆಪಿ ಪರಿಷತ್ ಸದಸ್ಯ ಎಲ್.ರಾಜೇಶ್, ಬೆಂಗಳೂರು ನಗರಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಮೋದಿ, ಅಲ್ಪಸಂಖ್ಯಾತ ಘಟಕದ ಉಸ್ತುವಾರಿ ವರ್ತೂರು ಶ್ರೀಧರ್, ವರ್ತೂರು ಕಾಮಗಾರಿಗಳ ಉಸ್ತುವಾರಿ ವಿ.ಪಿ.ರಕ್ಷಿತ್, ಮುಖಂಡರಾದ ನಾಗರಾಜ್, ವಿವೇಕ್ ಉಪಸ್ಥಿತರಿದ್ದರು.

## ಎ.ಪಿ.ರಂಗನಾಥ್ ಗೆಲ್ಲಿಸಲು ವಿ.ಸೋಮಣ್ಣ ಮನವಿ

• ಉದಯವಾಹಿನಿ, ಬೆಂಗಳೂರು

ಎನ್ ಡಿ ಎ ಅಭ್ಯರ್ಥಿ ಎ.ಪಿ.ರಂಗನಾಥ್ ಅವರನ್ನು ಗೆಲ್ಲಿಸಲು ನಾವು-ನೀವು ಸಂಕಲ್ಪ ಮಾಡಬೇಕೆಂದು ಕೇಂದ್ರ ಮಂತ್ರಿಗಳಾದ ವಿ.ಸೋಮಣ್ಣ ತಿಳಿಸಿದ್ದಾರೆ. ವಿಧಾನ ಪರಿಷತ್ ಚುನಾವಣೆ ಬೆಂಗಳೂರು ಶಿಕ್ಷಕರ ಕ್ಷೇತ್ರದ ಮತದಾರರು ಹಾಗೂ ಕಾರ್ಯಕರ್ತರ ಸಭೆಯು ವಿಜಯನಗರದಲ್ಲಿರುವ ಕದಂಬ ಹೋಟೆಲ್‌ನಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಎರಡು ಚುನಾವಣೆಗಳಲ್ಲಿ ಪರಾಭವಗೊಂಡಿದ್ದರು ಗೆದ್ದೇ ಗೆಲ್ಲುವ ಆತ್ಮ ವಿಶ್ವಾಸದಿಂದ ಅಭ್ಯರ್ಥಿಯಾಗಿ ಎ.ಪಿ.ರಂಗನಾಥ್ ಅಖಾಡದಲ್ಲಿದ್ದಾರೆ. ಜನಾನುರಾಗಿಯಾಗಿ ಎಲ್ಲರ ಜೊತೆ ಆತ್ಮೀಯತೆ ಹೊಂದಿರುವ ಅವರನ್ನು ಗರಿಷ್ಠ ಶ್ರಮ ಹಾಕಿ ಗೆಲ್ಲಿಸಲೇಬೇಕು ಎಂದರು.

ಕಳೆದ 3 ವರ್ಷದಲ್ಲಿ ಕಾಂಗ್ರೆಸ್ ಆಡಳಿತ ವೈಖರಿ ಗಮನಿಸಿದ ಎಲ್ಲರೂ ಇಡೀ ರಾಜ್ಯದಲ್ಲಿ ಇವತ್ತು ಛೀಮಾರಿ ಹಾಕುತ್ತಿದ್ದಾರೆ ಎಂದು ಟೀಕಿಸಿದರು. ಹೆಚ್.ರವೀಂದ್ರ, ಮಾತನಾಡಿ ನಾವು ವಿರಮಿಸದೆ ಮನೆ-ಮನೆಗೆ ಹೋಗಿ ಮತ ಕೇಳಬೇಕು ಎಂದರು. ಎನ್ ಡಿ ಎ ಅಭ್ಯರ್ಥಿ ಎ.ಪಿ.ರಂಗನಾಥ್, ಬಿ ಜೆ ಪಿ ಮುಖಂಡರಾದ ಸಂತೋಷ್ ಹಾಗು ಶಿಕ್ಷಕರು, ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಇಲ್ಲದಿದ್ದರೆ ಆತಂಕಪಡಬೇಡಿ

## ಅರ್ಹ ಮತದಾರರನ್ನು ಪಟ್ಟಿಗೆ ಸೇರಿಸಲು ಚುನಾವಣಾ ಆಯೋಗವು ವಿಶೇಷ ಅಭಿಯಾನವನ್ನು ಆಯೋಜಿಸಲಿದೆ ಎಂದು ಹೇಳಿದರು

• ಉದಯವಾಹಿನಿ, ಬೆಂಗಳೂರು

1 ಕರಡು ಮತದಾರರ ಪಟ್ಟಿಯಲ್ಲಿ 56,99,660
2 ಜನರಿಗೆ ನೋಟಿಸ್ ಜರಿ ಮಾಡಲಾಗುತ್ತಿದೆ.
3 2,468 ಅರ್ಜಿಗಳನ್ನು ಅನುಮೋದಿಸಲಾಗಿದೆ

ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿಲ್ಲದಿದ್ದರೂ ಜನರು ಆತಂಕಪಡುವ ಅಗತ್ಯವಿಲ್ಲ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ.

ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅರ್ಹ ಮತದಾರರನ್ನು ಪಟ್ಟಿಗೆ ಸೇರಿಸಲು ಚುನಾವಣಾ ಆಯೋಗವು ವಿಶೇಷ ಅಭಿಯಾನವನ್ನು ಆಯೋಜಿಸಲಿದೆ ಎಂದು ಹೇಳಿದರು.

ಭಾರತೀಯ ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ, ಮತದಾರರ ಪಟ್ಟಿಯಲ್ಲಿ ಹೊಸ ಹೆಸರುಗಳನ್ನು ಸೇರಿಸಲು ವಿಶೇಷ ಅಭಿಯಾನವನ್ನು ಆಯೋಜಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಲು ಅರ್ಹರಾದವರು 'ನಮೂನೆ 6' ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಅವರು ಹೇಳಿದರು.

ಕರಡು ಮತದಾರರ ಪಟ್ಟಿಯಲ್ಲಿ 56,99,660 ಮತದಾರರಿದ್ದಾರೆ ಎಂದು ಅವರು ಮಾಹಿತಿ ನೀಡಿದರು. 2002ರ ಮತದಾರರ ಪಟ್ಟಿಯಲ್ಲಿ ಹೆಸರುಗಳು ಗುರುತಿಸಲು ಸಾಧ್ಯವಾಗದಿರುವುದು ಮತ್ತು ಇತರ ವ್ಯತ್ಯಾಸಗಳ ಕಾರಣದಿಂದಾಗಿ, 24,06,044 ಜನರಿಗೆ ನೋಟಿಸ್ ಜಾರಿ ಮಾಡಲಾಗುತ್ತಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಲು 2.19 ಲಕ್ಷ ಜನರು 'ನಮೂನೆ 6' ಅನ್ನು ಸಲ್ಲಿಸಿದ್ದಾರೆ. 'ನಮೂನೆ 7' ಮತ್ತು 'ನಮೂನೆ 8' ಸೇರಿದಂತೆ ವಿವಿಧ ಅರ್ಜಿಗಳ ಪರಿಶೀಲನೆ ಮತ್ತು ವಿಲೇವಾರಿಯ ನಂತರ, ಸುಮಾರು 2 ಲಕ್ಷ ಮತದಾರರು ಪಟ್ಟಿಗೆ ಸೇರ್ಪಡೆಯಾಗುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ, ನಗರದಲ್ಲಿ ಒಟ್ಟು ಮತದಾರರ ಸಂಖ್ಯೆ ಸುಮಾರು 59 ಲಕ್ಷಕ್ಕೆ ತಲುಪುವ ಸಾಧ್ಯತೆಯಿದೆ ಎಂದು ಅವರು ತಿಳಿಸಿದರು. ಬೂತ್ ಮಟ್ಟದ ಏಜೆಂಟ್‌ಗಳು 'ನಮೂನೆ 7'ರ ಅಡಿಯಲ್ಲಿ ಗರಿಷ್ಠ 10 ಅರ್ಜಿಗಳನ್ನು ಮಾತ್ರ ಸಲ್ಲಿಸಲು ಅವಕಾಶವಿದೆ ಎಂದು ಅವರು ಹೇಳಿದರು.


ಉದಯವಾಹಿನಿ ಚಿತ್ರ

ಒಂದು ವೇಳೆ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಈ ಮಿತಿಯನ್ನು ಮೀರಿದರೆ, ಅವುಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು ಮತ್ತು ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಈ ಸಂಬಂಧ, ಮಲ್ಲೇಶ್ವರಂನಲ್ಲಿ 'ಫಾರ್ಮ್ 7' ಅಡಿಯಲ್ಲಿ ಸಲ್ಲಿಕೆಯಾದ 1,103 ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ಇತರ ಪ್ರದೇಶಗಳಲ್ಲಿ ಸಲ್ಲಿಕೆಯಾದ ಸಾಮೂಹಿಕ ಅರ್ಜಿಗಳನ್ನು ಸಹ ಪರಿಶೀಲಿಸಲಾಗುತ್ತಿದ್ದು, ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆಯಲ್ಲಿ ನಮೂನೆ 7'ರ ಅಡಿಯಲ್ಲಿ ಒಟ್ಟು 5,549 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಈ ಪೈಕಿ ಇಲ್ಲಿಯವರೆಗೆ 2,468 ಅರ್ಜಿಗಳನ್ನು ಅನುಮೋದಿಸಲಾಗಿದೆ. ಇದು ಒಟ್ಟು ಅರ್ಜಿಗಳ ಪೈಕಿ ಶೇಕಡಾ 44ರಷ್ಟಿದೆ ಎಂದು ಮಾಹಿತಿ ನೀಡಿದರು.
- ಆಯುಕ್ತ ಮಹೇಶ್ವರ್ ರಾವ್

### ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ

ಈ ವಿಚಾರಣೆಗಳಲ್ಲಿ ಬಹುಪಾಲು ಈಗಾಗಲೇ ಪೂರ್ಣಗೊಂಡಿವೆ.

ಕೇವಲ ವಿಚಾರಣೆಗಳನ್ನು ನಡೆಸುವ ಬದಲು, ಬೂತ್ ಮಟ್ಟದ ಅಧಿಕಾರಿಗಳು ನೇರವಾಗಿ ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಚುನಾವಣಾ ಆಯೋಗವು ನಿರ್ದೇಶನ ನೀಡಿದೆ. ಅದರಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.

# ನಮ್ಮ ಬದುಕಿನ ಅತ್ಯಂತ ಹೆಮ್ಮೆಯ ಕ್ಷಣ ಮಾತೃ ಶ್ರೀ ಚುಡಾರತ್ನಮ್ಮ

• ಉದಯವಾಹಿನಿ, ಮೈಸೂರು

ಮೈಸೂರು ವಿಶ್ವವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಜೆಕೆ ಗ್ರೌಂಡ್ಸ್ ನಲ್ಲಿ ಆಯೋಜಿಸಲಾಗಿದ್ದ ಮಹಿಳಾ ಮತ್ತು ಮಕ್ಕಳ ದಸರಾ ಕಾರ್ಯಕ್ರಮದ ವೇದಿಕೆಯಲ್ಲಿ ಒಂದು ಲಕ್ಷ ಕಿಲೋಮೀಟರ್ಗಳ ತೀರ್ಥಯಾತ್ರೆಯನ್ನು ಪೂರೈಸಿರುವ ಮಾತೃ ಶ್ರೀ ಚೂಡಾರತ್ನಮ್ಮ ಹಾಗೂ ಡಿ ಕೃಷ್ಣಕುಮಾರ್‌ರವರನ್ನು ಆತ್ಮೀಯವಾಗಿ ಗುಣಗಾನಗೈದು ಸನ್ಮಾನಿಸಲಾಯಿತು ಇದೇ ವೇಳೆ ಮಾತನಾಡಿದ ಕೃಷ್ಣಕುಮಾರ್ ಬಹಳ ದಿನಗಳಿಂದ ಈ ಅವಕಾಶಕ್ಕಾಗಿ ಕಾಯುತ್ತಿದ್ದೆವು ನಮ್ಮ ತಾಳ್ಮೆ ,ಪರಿಶ್ರಮ ಹಾಗೂ ಮಾತೃ ಸೇವೆಗೆ ಫಲ ಸಿಕ್ಕಿದೆ ,ತಾಯಿ ಸೇವೆಯಲ್ಲಿ ಭಾಗಿಯಾಗುವ ಅವಕಾಶ ದೊರೆತಿರುವುದು ಪೂರ್ವ ಜನ್ಮದ ಪುಣ್ಯ ,ಇದು ನಮ್ಮ ಬದುಕಿನ ಅತ್ಯಂತ ಸಂತೋಷದ ಹಾಗೂ ಹೆಮ್ಮೆಯ ಗಳಿಗೆ ಎಂದು ಭಾವುಕರಾದರು.


ಉದಯವಾಹಿನಿ ಚಿತ್ರ

# ಕವಿಗಳು ಸಮಾಜ ತಿದ್ದುವ ಕೆಲಸ ಮಾಡುತ್ತಿದ್ದಾರೆ

• ಉದಯವಾಹಿನಿ, ಮೈಸೂರು

ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಮೂಲಕ ಸಮಾಜವನ್ನು ತಿದ್ದುವ ಕೆಲಸವನ್ನು ಕವಿಗಳು ಮಾಡುತ್ತಿದ್ದಾರೆ ಎಂದು ಪೌರಾಡಳಿತ ಸಚಿವರಾದ ಹೆಚ್.ಸಿ.ಬಾಲಕೃಷ್ಣ ಅವರು ತಿಳಿಸಿದರು.

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ನಡೆದ ಚಿಗುರು ಕವಿಗೋಷ್ಠಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಹಿರಿಯ ಸಾಹಿತಿಗಳಾದ ದೇವನೂರ ಮಹಾದೇವ ಅವರು ಹಾಗೂ ಸಿದ್ದಲಿಂಗಯ್ಯ ಅವರು ಸ್ವಾಭಿಮಾನದಿಂದ ಕೂಡಿದ ಕವಿತೆಗಳ ರಚಿಸಿ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ ಎಂದರು.ಅದ್ಭುತವಾದ ಪರಿಕಲ್ಪಯಲ್ಲಿ ದಸರಾ ಪ್ರಾರಂಭವಾಗಿದೆ.


ಉದಯವಾಹಿನಿ ಚಿತ್ರ

ದಸರಾದಲ್ಲಿ ಎಲ್ಲಾ ರಂಗದ ಪ್ರತಿಭೆಯನ್ನು ಹೊರತರುವ ಕೆಲಸ ಮಾಡಲಾಗುತ್ತದೆ. ಕವಿಗೆ ಚಿಕ್ಕವರು, ದೊಡ್ಡವರು ಎಂಬ ಬೇದವಿಲ್ಲ. ಪ್ರತಿಯೊಬ್ಬರೂ ಪುಸ್ತಕವನ್ನು ಓದುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಚಿಗುರು ಕವಿಗೋಷ್ಠಿ ಉದ್ಘಾಟಿಸಿದ ಮಕ್ಕಳ ಸಾಹಿತಿ ಬಿಳಿಗೆರೆ ಕೃಷ್ಣಮೂರ್ತಿ ಅವರು ಮಾತನಾಡಿ, ಕವಿತೆ ಬರೆಯುವುದು ಸುಳ್ಳಿನ ವಿರುದ್ಧ ಹೋರಾಟ ಮಾಡಿದಂತೆ. ಮನುಷ್ಯರನ್ನು ವಿಭಜನೆ ಮಾಡುತ್ತಿದ್ದ ಬಗ್ಗೆ ಪಂಪ, ಕುಮಾರವ್ಯಾಸ ಎಚ್ಚರಿಸಿದರು.

# ಯುವಕರ ಭವಿಷ್ಯಕ್ಕೆ ಮಾರಕವಾಗಿರುವ ಕಾಂಗ್ರೆಸ್ ಸರ್ಕಾರ

## ಮೂರೂವರೆ ವರ್ಷಗಳಿಂದ ಯುವಕರಿಗೆ ಉದ್ಯೋಗ ಕಲ್ಪಿಸುವುದಾಗಿ ಭರವಸೆ ನೀಡುತ್ತಾ ಬಂದಿದ್ದರೂ, ಅವರ ಸಬಲೀಕರಣಕ್ಕೆ ಪೂರಕವಾದ ಕೆಲಸಗಳನ್ನು ಮಾಡಿಲ್ಲ

• ಉದಯವಾಹಿನಿ, ಕೋಲಾರ

1 ಪ್ರಕ್ರಿಯೆಯಲ್ಲಿ ಪಾರದರ್ಶಕತೆಯ ಕೊರತೆ
2 ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ
3 ನ್ಯಾಯಯುತ ಅವಕಾಶ ದೊರೆಯಬೇಕು

ಯುವಕರಿಗೆಯು ಉದ್ಯೋಗ ನೀಡುವುದಾಗಿ ಭರವಸೆ ನೀಡುತ್ತಿರುವ ಕಾಂಗ್ರೆಸ್ ಸರ್ಕಾರ, ಅವರ ಸಬಲೀಕರಣಕ್ಕೆ ಅಗತ್ಯವಾದ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ. ರಾಜ್ಯದಲ್ಲಿ ಯುವಕರ ಭವಿಷ್ಯಕ್ಕೆ ಮಾರಕವಾಗಿರುವ ಆಡಳಿತವನ್ನು ಕಾಂಗ್ರೆಸ್ ಸರ್ಕಾರ ನಡೆಸುತ್ತಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಆರೋಪಿಸಿದರು.

ನಗರದ ಹೊರವಲಯದ ನಾರಾಯಣಿ ಕಲ್ಯಾಣ ಮಂಟಪದಲ್ಲಿ ಎನ್.ಡಿ.ಎ. ಸಮನ್ವಯ ಸಮಿತಿ ಆಯೋಜಿಸಿದ್ದ ಆಗ್ನೆಯ ಪದವೀಧರರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಕೆ.ಎಂ. ಸುರೇಶ್ ಪರವಾಗಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಆಡಳಿತ ವೈಖರಿ, ಉದ್ಯೋಗ ನೇಮಕಾತಿ ಪ್ರಕ್ರಿಯೆ ಹಾಗೂ ಯುವಕರ ಭವಿಷ್ಯದ ಕುರಿತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಪಕ್ಷ ಹಿಂದಿನಿಂದಲೂ ಜನವಿರೋಧಿ ಮತ್ತು ಸಮಾಜವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದು ಆರೋಪಿಸಿದ ಅವರು, ಕಳೆದ ಮೂರೂವರೆ ವರ್ಷಗಳಿಂದ ಯುವಕರಿಗೆ ಉದ್ಯೋಗ ಕಲ್ಪಿಸುವುದಾಗಿ ಭರವಸೆ ನೀಡುತ್ತಾ ಬಂದಿದ್ದರೂ, ಅವರ ಸಬಲೀಕರಣಕ್ಕೆ ಪೂರಕವಾದ ಕೆಲಸಗಳನ್ನು ಮಾಡಿಲ್ಲ ಎಂದು ಟೀಕಿಸಿದರು. ಪ್ರತಿಯೊಬ್ಬ ಯುವಕನಿಗೂ ಉತ್ತಮ ಉದ್ಯೋಗ ಪಡೆದು ಬದುಕು ಕಟ್ಟಿಕೊಳ್ಳುವ ಅಥವಾ ಸ್ವಂತ ಉದ್ಯಮ ಆರಂಭಿಸಿ ಉದ್ಯೋಗದಾತನಾಗುವ ಅವಕಾಶ ದೊರಯಬೇಕು. ಆದರೆ, ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ದೂರಿದರು.


ಉದಯವಾಹಿನಿ ಚಿತ್ರ

ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯ ಕೊರತೆ ಇದೆ ಎಂದು ಆರೋಪಿಸಿದ ಅವರು, ವಿವಿಧ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಸೇರಿದಂತೆ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಅಕ್ರಮಗಳ ಆರೋಪಗಳು ಯುವಕರಲ್ಲಿ ಆತಂಕ ಮೂಡಿಸಿವೆ ಎಂದರು. ಅರ್ಹತೆ ಮತ್ತು ಪ್ರತಿಭೆಯ ಆಧಾರದ ಮೇಲೆ ಉದ್ಯೋಗ ಪಡೆಯಲು ಯುವಕರಿಗೆ ನ್ಯಾಯಯುತ ಅವಕಾಶ ದೊರೆಯಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡದಿರುವುದು ಉದ್ಯೋಗಾಕಾಂಕ್ಷಿಗಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿದರು.

ಚಿಕ್ಕಬಳ್ಳಾಪುರದ ಸಂಸದ ಡಾ. ಕೆ. ಸುಧಾಕರ್ ಮಾತನಾಡಿ, ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರ ಪಕ್ಷಗಳಾಗಿದ್ದು, ಕಾರ್ಯಕರ್ತರ ಸಂಕಷ್ಟಗಳಿಗೆ ಸ್ಪಂದಿಸುವ ಗುಣ ಎರಡೂ ಪಕ್ಷಗಳಲ್ಲಿದೆ ಎಂದರು. ಸಾಮಾನ್ಯ ಕಾರ್ಯಕರ್ತನಿಗಾಗಿ ಪಕ್ಷದ ಹಿರಿಯ ನಾಯಕರು ಪೊಲೀಸ್ ಕಮಿಷನರ್ ಕಚೇರಿಗೆ ಕೇಂದ್ರ ಸಚಿವರು ತೆರಳಿ ನೆರವಾಗಲು ಮುಂದಾಗಿರುವುದು ಕಾರ್ಯಕರ್ತರಿಗೆ ನೀಡುವ ಮಹತ್ವವನ್ನು ತೋರಿಸುತ್ತದೆ ಎಂದು ತಿಳಿಸಿದರು. ಜೆಡಿಎಸ್‌ನಲ್ಲಿ ಸುಮಾರು 30 ವರ್ಷಗಳ ಕಾಲ ಸಾಮಾನ್ಯ ಕಾರ್ಯಕರ್ತನಾಗಿ ದುಡಿದಿರುವ ಕೆ.ಎಂ. ಸುರೇಶ್ ಅವರಿಗೆ ಮೊದಲ ಬಾರಿಗೆ ವಿಧಾನ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ದೊರಕಿದೆ. ದೊಡ್ಡ ರಾಜಕೀಯ ಹಿನ್ನೆಲೆ ಅಥವಾ ಶ್ರೀಮಂತ ಕುಟುಂಬದಿಂದ ಬಂದವರಲ್ಲದಿದ್ದರೂ, ಪಕ್ಷಕ್ಕಾಗಿ ಸುದೀರ್ಘ ಕಾಲ ಶಿಸ್ತಿನಿಂದ ದುಡಿದಿರುವುದಕ್ಕೆ ವಿಶೇಷ ಮಾನ್ಯತೆ ನೀಡಲಾಗಿದೆ ಎಂದು ಹೇಳಿದರು.

### ಆಡಳಿತ ಐತಿಹಾಸಿಕ ದಾಖಲೆ

**ರಾಜ್ಯದಲ್ಲಿ ಸ್ಟಿಂಗ್ ಅಪರೇಷನ್, ಸಿಡಿಗಳ ಮೂಲಕ ಬ್ಲಾಕ್ ಮೇಲ್ ಆಡಳಿತ ನಡೆಸಲಾಗುತ್ತಿದೆ. ನೇರವಾಗಿ ಖಜಾನೆ ಲೂಟಿ ಹೊಡೆಯುವ ಮೂಲಕ ಕಾಂಗ್ರೆಸ್ ಆಡಳಿತ ಐತಿಹಾಸಿಕ ದಾಖಲೆ ನಿರ್ಮಿಸಿದೆ. ದಲಿತ ಅಭಿವೃದ್ಧಿ ಅನುದಾನವನ್ನು ಕಬಳಿಸಲಾಗಿದೆ. ಬರಪರಿಹಾರ ರೈತರಿಗೆ ಎಕರೆಗೆ 2,500 ರೂಪಾಯಿಗಳನ್ನು ಭಿಕ್ಷುಕರಿಗೆ ನೀಡಿದ ಮಾದರಿಯಲ್ಲಿ ಅಪಮಾನ ಮಾಡಲಾಗುತ್ತಿದೆ.**

**ರಾಜ್ಯದಲ್ಲಿ ಯುವಕರು, ವರ್ತಕರು ಮತ್ತು ದಲಿತರ ಸಮಸ್ಯೆಗಳಿಗ ಆದ್ಯತೆ ನೀಡುವ ಬದಲು ಕಾಂಗ್ರೆಸ್ ಸರ್ಕಾರ ರಾಜಕೀಯ ವಿವಾದಗಳಲ್ಲಿ ತೊಡಗಿದೆ ಎಂದು ಆರೋಪಿಸಿದ ಅವರು, ಸರ್ಕಾರದ ವಿರುದ್ಧ ಭ್ರಷ್ಟಚಾರ ಮತ್ತು ವಿವಿಧ ಹಗರಣಗಳ ಆರೋಪಗಳು ಕೇಳಿಬರುತ್ತಿವೆ. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು ಸರ್ಕಾರದ ಆದ್ಯತೆಯಾಗಬೇಕು ಎಂದು ಹೇಳಿದರು.** -ಡಾ. ಸಿ.ಎನ್. ಅಶ್ವತ್ಥನಾರಾಯಣ

# ಕೋದಂಡರಾಮಸ್ವಾಮಿ ದೇವಾಲಯದಲ್ಲಿ ಶರನ್ನವರಾತ್ರಿ ಮಹೋತ್ಸವ



• ಉದಯವಾಹಿನಿ, ಮಾಲೂರು

ಮಾಲೂರು ನಗರದ ಶ್ರೀ ಕೋದಂಡರಾಮಸ್ವಾಮಿ ದೇವಾಲಯದಲ್ಲಿ ಜ್ಯೋತಿನಗರ ವೈಶ್ಯ ಗಾಣಿಗ ಸಮುದಾಯದ ವತಿಯಿಂದ ನಡೆಯುತ್ತಿರುವ ಶ್ರೀ ಶರನ್ನವರಾತ್ರಿ ಮಹೇತ್ರದ ಅಂಗವಾಗಿ ಶ್ರೀ ಕೋದಂಡರಾಮಸ್ವಾಮಿಗೆ ವಿಶೇಷ ಆಭರಣ ಸಮೇತ ಭವ್ಯ ಹೂವಿನ ಅಲಂಕಾರ ಮಾಡಲಾಗಿದೆ.

ಪ್ರತಿವರ್ಷದಂತೆ ಈ ವರ್ಷವೂ ದೇವಾಲಯದ ಪ್ರಧಾನ ಅರ್ಚಕ ವಾಸುದೇವಾಚಾರ್ ಅರ್ಚಕತ್ವದಲ್ಲಿ ಶ್ರೀ ಶರಣ ನವರಾತ್ರಿ ಮಹೋತ್ಸವದ ಪೂಜಾ ಕಾರ್ಯಕ್ರಮಗಳು 11 ದಿನಗಳ ಕಾಲ ವೈಶ್ಯ ಗಾಣಿಗ ಸಮಾಜದ ಸದಸ್ಯರ ನೇತೃತ್ವದಲ್ಲಿ ನಡೆಯುತಿವೆ. ಮಹೋತ್ಸವದ ಅಂಗವಾಗಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಆಭರಣ ಹಾಗೂ ಪುಷ್ಪಾಲಂಕಾರದಿಂದ ಅಲಂಕರಿಸಲಾಯಿತು. ಹಬ್ಬದ ಹಿನ್ನೆಲೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಕ್ಕೆ ಆಗಮಿಸಿ ಶ್ರೀ ಕೋದಂಡರಾಮಸ್ವಾಮಿಯ ದರ್ಶನ ಪಡೆದು ತೀರ್ಥ-ಪ್ರಸಾದ ಸ್ವೀಕರಿಸಿದರು. ಶರಣ ನವರಾತ್ರಿ ಮಹೋತ್ಸವ ಸಮಿತಿಯ ಅಧ್ಯಕ್ಷ ಮಂಜುನಾಥ್, ಗೌರವಾಧ್ಯಕ್ಷ ರಾಮಣ್ಣ, ಪ್ರಧಾನ ಕಾರ್ಯದರ್ಶಿ ಎಸ್. ನಾರಾಯಣಸ್ವಾಮಿ, ಖಜಾಂಚಿ ವಿ.ಎನ್. ಮೂರ್ತಿ, ಉಪಾಧ್ಯಕ್ಷರಾದ ಮುನಿ ವೆಂಕಟಪ್ಪ ಹಾಗೂ ತಿಮ್ಮಪ್ಪ ಶೆಟ್ಟಿ, ಸಂಚಾಲಕರಾದ ಮುನಿಶಂಕರ್, ಜಂಟಿ ಕಾರ್ಯದರ್ಶಿ ಪ್ರದೀಪ್, ಕಾರ್ಯದರ್ಶಿ , ಸಂಘಟನಾ ಕಾರ್ಯದರ್ಶಿಗಳಾದ ನಾಗರಾಜ್, ಶಬರೀಶ್ ಮತ್ತು ಅಂಬರೀಶ್ ಸೇರಿದಂತೆ ಸಮುದಾಯದ ಮುಖಂಡರಾದ ರಾಮಣ್ಣ, ಲಕ್ಷ್ಮೀನಾರಾಯಣ, ಮಂಜುನಾಥ್, ಚಂದ್ರಪ್ಪ, ಸುನಿಲ್, ಶ್ರೀ ನಿವಾಸ್ ಹಾಗೂ ಇತರರು ಉಪಸ್ಥಿತರಿದ್ದರು

# ಅ.26 ರಂದು ಅದ್ದೂರಿ ವಾಲ್ಮೀಕಿ ಜಯಂತಿ ಆಚರಣೆಗೆ ನಿರ್ಧಾರ : ಪೂರ್ವಭಾವಿ ಸಭೆಯ ನಡುವೆ ಗೊಂದಲ

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣದ ಗುರು ಭವನದಲ್ಲಿ ಅ.26 ರಂದು ಅದ್ದೂರಿಯಾಗಿ ವಾಲ್ಮೀಕಿ ಜಯಂತಿ ಆಚರಿಸಲು ತಾಲೂಕು ಆಡಳಿತ ನಿರ್ಧರಿಸಿದೆ. ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ನಡೆದ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆಯಲ್ಲಿ ನಾಯಕ ಸಮುದಾಯದ ಮುಖಂಡರ ಅಭಿಪ್ರಾಯ ಸಂಗ್ರಹಿಸಲಾಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ತಹಸೀಲ್ದಾರ್ ತನ್ಮಯ್, ಮುಖಂಡರೊಂದಿಗೆ ಚರ್ಚಿಸಿ ಅ.26 ರಂದು ಗುರು ಭವನದಲ್ಲಿ ಜಯಂತಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ತಿಳಿಸಿದರು.

**ಸಭೆಯಲ್ಲಿ ಗೊಂದಲ :** ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆಗೆ ತಾಲ್ಲೂಕು ಮಟ್ಟದ ಬಹುತೇಕ ಇಲಾಖೆಗಳ ಅಧಿಕಾರಿಗಳು ಗೈರಾಗಿದ್ದರಿಂದ ಸಮುದಾಯದ ಮುಖಂಡರಲ್ಲಿ ಅಸಮಾಧಾನ ವ್ಯಕ್ತವಾಯಿತು. ಅಧಿಕಾರಿಗಳ ಗೈರು ಹಾಜರಿಗೆ ಆಕ್ಷೇಪ ವ್ಯಕ್ತಪಡಿಸಿದ ನಾಯಕ ಸಮುದಾಯದ ಕೆಲವು ಮುಖಂಡರು ಸಭೆಗೆ ಶಾಸಕರು ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಹಾಜರಾಗಬೇಕು. ಅಲ್ಲಿಯವರೆಗೆ ಸಭೆ ನಡೆಸಬಾರದು ಎಂದು ಆಗ್ರಹಿಸಿ ಸಭೆಯನ್ನು ಬಹಿಷ್ಕರಿಸಿ ಹೊರನಡೆದರು. ಇದಕ್ಕೆ ಪ್ರತಿಕ್ರಿಯಿಸಿದ ಮತ್ತೊಂದು ಗುಂಪಿನ ಮುಖಂಡರು, ಸಭೆ ಬಹಿಷ್ಕರಿಸಿ ಹೊರನಡೆದವರ ನಿರ್ಧಾರ ಏಕಪಕ್ಷೀಯವಾಗಿದ್ದು, ಅದಕ್ಕೆ ತಮ್ಮ ಸಹಮತವಿಲ್ಲ. ಜಯಂತಿ ಆಚರಣೆಗೆ ಸಂಬಂಧಿಸಿದಂತೆ ಪೂರ್ವಭಾವಿ ಸಭೆ ನಡೆಸಲೇಬೇಕು ಎಂದು ಒತ್ತಾಯಿಸಿದರು. ಈ ವೇಳೆ ಮುಖಂಡರ ನಡುವೆ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು. ನಂತರ ತಹಸೀಲ್ದಾರ್ ತನ್ಮಯ್ ಸಭೆಯಲ್ಲಿ ಹಾಜರಿದ್ದ ಮುಖಂಡರೊಂದಿಗೆ ಚರ್ಚಿಸಿ, ವಾಲ್ಮೀಕಿ ಜಯಂತಿ ಆಚರಣೆಯ ದಿನಾಂಕವನ್ನು ಅಂತಿಮಗೊಳಿಸಿದರು.


ಉದಯವಾಹಿನಿ ಚಿತ್ರ

### ಜಯಂತಿಗೂ ಮುನ್ನ ವಾಲ್ಮೀಕಿ ಭವನ ಹಸ್ತಾಂತರಕ್ಕೆ ಭರವಸೆ

ಪಟ್ಟಣದ ದುಂದಾಸನಪುರದಲ್ಲಿರುವ ವಾಲ್ಮೀಕಿ ಭವನಕ್ಕೆ ಅಗತ್ಯ ಮೂಲಸೌಕರ್ಯ ಕಲ್ಪಿಸಿ, ಸಮುದಾಯದ ಬಳಕೆಗೆ ಹಸ್ತಾಂತರಿಸಬೇಕು ಎಂದು ಜಾರಕಿಹೊಳಿ ಬ್ರಿಗೇಡ್ ಸಂಸ್ಥಾಪಕ ಗೋವಿನಾಯಕ್ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ವೇಳೆ ಮಧ್ಯಪ್ರವೇಶಿಸಿದ ಪುರಸಭೆ ಮಾಜಿ ಉಪಾಧ್ಯಕ್ಷ ಸುರೇಶ್ ಕಾರ್ಗಳ್ಳಿ, ವಾಲ್ಮೀಕಿ ಭವನವನ್ನು ಜಯಂತಿ ದಿನದೊಳಗೆ ಸಮುದಾಯದ ಬಳಕೆಗೆ ಹಸ್ತಾಂತರಿಸುವ ಜವಾಬ್ದಾರಿ ವಹಿಸಿಕೊಳ್ಳುವುದಾಗಿ ಭರವಸೆ ನೀಡಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ನಾಯಕ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ಜನರ ಪ್ರೀತಿ, ವಿಶ್ವಾಸವೇ ನನ್ನ ಶಕ್ತಿ

• ಉದಯವಾಹಿನಿ, ಮಾಲೂರು

ಕಳೆದ ಹತ್ತಾರು ವರ್ಷಗಳಿಂದ ಮಾಲೂರು ವಿಧಾನಸಭಾ ಕ್ಷೇತ್ರದಲ್ಲಿ ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವ ನನಗೆ ತಮ್ಮ ಗ್ರಾಮದ ಜನತೆಗೆ ಹಾಗೂ ಅಭಿಮಾನಿಗಳಿಗೆ ಪ್ರೀತಿಯಿಂದ ಜನ್ಮದಿನದ ಶುಭಾಶಯಗಳನ್ನು ಕೋರಿರುವುದು ಅಪಾರ ಸಂತಸ ತಂದಿದೆ ಎಂದು ಸಂಜೀವಿನಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಹಾಗೂ ಜೆಡಿಎಸ್ ಮುಖಂಡ ಹೂಡಿ ವಿಜಯ್ ಕುಮಾರ್ ಹೇಳಿದರು. ನಗರದ ಹೊರವಲಯದ ವೈಟ್ ಗಾರ್ಡನ್ ಸಮೀಪದ ತಮ್ಮ ನಿವಾಸದ ಆವರಣದಲ್ಲಿ ಅಭಿಮಾನಿಗಳು ಆಯೋಜಿಸಿದ್ದ ಜನ್ಮದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳಿಂದ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು. ಮಾಲೂರು ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ಜನಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಆರೋಗ್ಯ, ಶಿಕ್ಷಣ ಸೇರಿದಂತೆ ಬಡಜನರಿಗೆ ಆರ್ಥಿಕ ಸಹಾಯ ನೀಡುವ ಮೂಲಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದ್ದೇನೆ ಎಂದು ತಿಳಿಸಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕಡಿಮೆ ಮತಗಳ ಅಂತರದಿಂದ ಸೋತಿದ್ದರೂ, ತಾಲ್ಲೂಕಿನ ಜನರ ಮನಸ್ಸಿನಲ್ಲಿ ಉಳಿದುಕೊಂಡಿದ್ದೇನೆ. ಮುಂದೆಯೂ ಇನ್ನಷ್ಟು ಸಮಾಜಮುಖಿ ಕಾರ್ಯಗಳು ಹಾಗೂ ದಾನಧರ್ಮಗಳನ್ನು ಕೈಗೊಳ್ಳಲು ಜನರ ಆಶೀರ್ವಾದ ಅಗತ್ಯವಾಗಿದೆ ಎಂದು ಹೇಳಿದ್ದಾರೆ. ನನ್ನ ಸೇವಾ ಕಾರ್ಯಗಳನ್ನು ಗುರುತಿಸಿ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಜನ್ಮದಿನದ ಶುಭಾಶಯಗಳನ್ನು ಕೋರಿರುವುದು ನನಗೆ ಮತ್ತಷ್ಟು ಉತ್ಸಾಹ ನೀಡಿದೆ ಎಂದರು.ತಾಲ್ಲೂಕಿನಲ್ಲಿ ಜೆಡಿಎಸ್ ಪಕ್ಷ ಬಲಿಷ್ಠವಾಗಿದೆ. ನನ್ನನ್ನು ನಂಬಿರುವ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರಿಗೆ ಎನ್‌ಡಿಎ ಮೈತ್ರಿಯ ಮೂಲಕ ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಸೂಕ್ತ ಅವಕಾಶಗಳನ್ನು ಕಲ್ಪಿಸಲಾಗುವುದು ಎಂದು ಹೇಳಿದರು.

# ಮಾದಿಗ ಸಮುದಾಯಕ್ಕೆ ಅವಕಾಶ ಕಲ್ಪಿಸದಿದ್ದರೆ ಉಗ್ರ ಹೋರಾಟ

• ಉದಯವಾಹಿನಿ, ಚಾಮರಾಜನಗರ

ಮುಂಬರುವ ಜಿಲ್ಲಾ ತಾಲ್ಲೂಕು ಪಂಚಾಯಿತಿ. ಚುನಾವಣೆಗಳಲ್ಲಿ ಮಾದಿಗ ಸಮುದಾಯ ಸೇರಿದಂತೆ ಪರಿಶಿಷ್ಟ ಜಾತಿಯ 101 ಒಳ ಪಂಗಡಗಳಿಗೆ ಒಳಮೀಸಲಾತಿಯನ್ನು ಜಾರಿಗೊಳಿಸದಿದ್ದರೆ ಚುನಾವಣೆಯ ಸಂದರ್ಭದಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಸಬೇಕಾಗುತ್ತದೆ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆಯ ರಾಜ್ಯಾಧ್ಯಕ್ಷ, ಹಿರಿಯ ವಕೀಲ ಎಸ್.ಅರುಣ್ ಕುಮಾರ್ ಎಚ್ಚರಿಕೆ ನೀಡಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಬರುವ ಜಿ.ಪಂ. ತಾ.ಪಂ. ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿಯನ್ನು ಜಾರಿಗೊಳಿಸುವ ಮೂಲಕ ಮಾದಿಗ ಸಮುದಾಯ ಸೇರಿದಂತೆ ಒಳಮೀಸಲಾತಿಗೆ ಅರ್ಹವಾದ ಸಮುದಾಯಗಳಿಗೆ ನ್ಯಾಯಯುತ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.


ಉದಯವಾಹಿನಿ ಚಿತ್ರ

ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲು ಸರ್ಕಾರ ಈಗಾಗಲೇ ಮೀಸಲಾತಿ ಪಟ್ಟಿಯನ್ನು ಹೊರಡಿಸಿದ್ದು, ಅದರ ವಿರುದ್ಧ ಮಾದಿಗ ಸಮುದಾಯದ ವಕೀಲರು ಹಾಗೂ ಸಂಘ ಸಂಸ್ಥೆಗಳ ಮುಖಂಡರು ಆಕ್ಷೇಪಣೆಯನ್ನು ಸಲ್ಲಿಸಬೇಕು. ಕಾಂಗ್ರೆಸ್ ಸರ್ಕಾರ ಹಿಂದಿನಿಂದಲೂ ಮಾದಿಗ ಸಮುದಾಯಕ್ಕೆ ಅನ್ಯಾಯ ಮಾಡಿಕೊಂಡೆ ಬಂದಿದೆ. ಮುಂಬರುವ ದಿನಗಳಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿ ಕಲ್ಪಿಸದೆ ಅನ್ಯಾಯ ಮಾಡಿದೆ ಎಂದರು.ಜಿಲ್ಲೆಯ ವಿವಿಧ ಜಿಪಂ ಕ್ಷೇತ್ರಗಳಲ್ಲಿ ಮಾದಿಗ ಸಮುದಾಯಕ್ಕೆ 2 ಹಾಗೂ ತಾಪಂ ಕ್ಷೇತ್ರಕ್ಕೆ 8 ಸ್ಥಾನವನ್ನು ನೀಡಬೇಕು. ಈ ನಿಟ್ಟಿನಲ್ಲಿ ಎಲ್ಲಾ ಶಾಸಕರು ಸರ್ಕಾರವನ್ನು ಒತ್ತಾಯ ಮಾಡಬೇಕು. ಇಲ್ಲದಿದ್ದಲ್ಲಿ ಎಲ್ಲಾ ಶಾಸಕರ ಹಾಗೂ ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು.

# ಬರ ಪರಿಸ್ಥಿತಿ ನಿರ್ವಹಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲ

## ರಾಜ್ಯದಲ್ಲಿ ಕೇಪಿಎಸ್ಸಿ ನಡೆಸಿದ ಪರೀಕ್ಷೆಯಲ್ಲಿ ಅಕ್ರಮ ಹಾಗೂ ಹಣದ ಲೂಟಿ ನಡೆದಿದೆ ಮತ್ತು ಸರ್ಕಾರ ಯಶಸ್ವಿಯಾಗಿ ಪರೀಕ್ಷೆ ನಡೆಸಲು ವಿಫಲವಾಗಿದೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

1 ಮೂರು ಲಕ್ಷ ಕೋಟಿ ಹಣಕಾಸಿನ ವಹಿವಾಟು
2 ಹಣದಲ್ಲಿ 25,000 ಕೋಟಿ ಲೂಟಿ ಮಾಡಿ
3 2026ರ ಬರುವಿಕೆಗೆ ಅದು ಪೂರ್ಣಗೊಂಡಿಲ್ಲ

ರಾಜ್ಯದಲ್ಲಿ ತಲೆದೋರಿರುವ ಬರ ಪರಿಸ್ಥಿತಿಯನ್ನು ನಿರ್ವಹಿಸುವಲ್ಲಿ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಕೇಂದ್ರದ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಅವರು ನಗರದ ಅರ್ಶೋದಯ ಕಲ್ಯಾಣ ಮಂಟಪದಲ್ಲಿ ಆಗ್ನೇಯ ಪದವೀಧರ ಕ್ಷೇತ್ರ ಪ್ರಧಾನ ಪರಿಷತ್ತು ಚುನಾವಣಾ ಪ್ರಚಾರ ಮತಯಾಚನೆ ಸಭೆಯಲ್ಲಿ ಎನ್‌ಡಿಎ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ''ರಾಜ್ಯದ ರೈತರು ಆತ್ಮಹತ್ಯೆಗೆ ಹೆಜ್ಜೆಹಾಕಿದ್ದಾರೆ, ಅವರ ಶಾಪ ರಾಜ್ಯ ಸರ್ಕಾರಕ್ಕೆ ತಟ್ಟುತ್ತದೆ,'' ಎಂದರು.

ರಾಜ್ಯದಲ್ಲಿ ಕೇಪಿಎಸ್ಸಿ ನಡೆಸಿದ ಪರೀಕ್ಷೆಯಲ್ಲಿ ಅಕ್ರಮ ಹಾಗೂ ಹಣದ ಲೂಟಿ ನಡೆದಿದೆ ಮತ್ತು ಸರ್ಕಾರ ಯಶಸ್ವಿಯಾಗಿ ಪರೀಕ್ಷೆ ನಡೆಸಲು ವಿಫಲವಾಗಿದೆ ಎಂದು ಆರೋಪಿಸಿದರು. ''ರಾಜ್ಯದಲ್ಲಿ ವಿದ್ಯಾವಂತರು, ಸುಶಿಕ್ಷಿತರು ತಮ್ಮ ವಿದ್ಯೆಗೆ ಅನುಗುಣವಾಗಿ ಉದ್ಯೋಗ ಪಡೆಯುತ್ತಿಲ್ಲ, ನಿರುದ್ಯೋಗ ನಿವಾರಣೆ ಮಾಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ,'' ಎಂದರು.

''ಇಡೀ ದೇಶದಾದ್ಯಂತ ಸುದ್ದಿಯಾಗಿರುವ ಬಿಡದಿ ಟೌನ್ ಶಿಪ್‌ನಲ್ಲಿ ಮೂರು ಲಕ್ಷ ಕೋಟಿ ಹಣಕಾಸಿನ ವಹಿವಾಟು ನಡೆಯಲಿದೆ. ಈ ಭಾರಿ ಹಣದಲ್ಲಿ 25,000 ಕೋಟಿ ಲೂಟಿ ಮಾಡಿ, ಆ ಹಣದಲ್ಲಿ ರಾಹುಲ್ ಗಾಂಧಿಯನ್ನು ಪ್ರಧಾನಿ ಮಾಡಲು ಈ ಸರ್ಕಾರ ಉದ್ದೇಶಿಸಿದೆ,'' ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ತಾಲ್ಲೂಕಿನ ಅನೇಕ ಯುವಕರು ಜೆಡಿಎಸ್ ಸೇರ್ಪಡೆಗೊಂಡರು, ಅವರನ್ನು ಹೆಚ್.ಡಿ. ಕುಮಾರಸ್ವಾಮಿ ಸ್ವಾಗತಿಸಿದರು. ಚಿಕ್ಕಬಳ್ಳಾಪುರ ಲೋಕಸಭಾ ಸದಸ್ಯ ಡಾ.ಕೆ. ಸುಧಾಕರ್ ಅವರು ಮಾತನಾಡಿ, ''ಆಗ್ನೇಯ ಪದವೀಧರ ಕ್ಷೇತ್ರ ಅತ್ಯಂತ ಸುರಕ್ಷಿತ ಕ್ಷೇತ್ರವಾಗಿದ್ದು, ಈ ಕ್ಷೇತ್ರದಲ್ಲಿ ನಡೆದ ಹತ್ತು ಚುನಾವಣೆಗಳಲ್ಲಿ ಎಂಟು ಚುನಾವಣೆಯಲ್ಲಿ ಬಿಜೆಪಿ ಮತ್ತು ಎರಡು ಚುನಾವಣೆಯಲ್ಲಿ ಜೆಡಿಎಸ್ ಗೆದ್ದಿದೆ. ಈ ಬಾರಿಯೂ ಎನ್‌ಡಿಎ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂದು ಕರೆ ನೀಡಿದರು.''

''ರಾಜ್ಯದಲ್ಲಿ ಎಲ್ಲಿಯವರೆಗೂ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಕೂಟ ಇರುತ್ತದೆ. ಅಲ್ಲಿಯವರೆಗೂ ಇನ್ನೂ 20, 30 ವರ್ಷಗಳಾದರೂ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿ ಇರುತ್ತದೆ,'' ಎಂದು ಭಾರಿ ಕರತಾಡನಗಳ ನಡುವೆಯೂ ಹೇಳಿದರು.

ಕಾರ್ಯಕ್ರಮದಲ್ಲಿ ಅಭ್ಯರ್ಥಿ ಕೆ.ಎಂ. ಸುರೇಶ್ ಅವರು ಮಾತನಾಡಿ, ''ನನ್ನ ಮತ ಸಂಖ್ಯೆ 2 ಆಗಿದ್ದು, ಅದರ ಮುಂದೆ ಒಂದು ಸಂಖ್ಯೆಯನ್ನು ಬರೆಯುವ ಮೂಲಕ ಪ್ರಥಮ ಪ್ರಾಶಸ್ತ್ಯದ ಮತ ನೀಡಬೇಕು,'' ಎಂದು ಮನವಿ ಮಾಡಿದರು. ಈ ವೇಳೆ 'ಮೇದಾಂತಿ ಪತ' ಎಂಬ ವೆಬ್‌ಸೈಟನ್ನು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜೆ.ಕೆ. ಕೃಷ್ಣಾರೆಡ್ಡಿ, ವಿಧಾನ ಪರಿಷತ್ ಸದಸ್ಯ ಕೇಶವ ಪ್ರಸಾದ್, ಮಾಜಿ ಉಪಮುಖ್ಯಮಂತ್ರಿ ಅಶ್ವಥ್ ನಾರಾಯಣ್, ಸಂಸದ ಡಾ.ಕೆ. ಸುಧಾಕರ್ ಮತ್ತಿತರರು ಮಾತನಾಡಿ, ಎನ್‌ಡಿಎ ಅಭ್ಯರ್ಥಿ ಪರ ಮತ ನೀಡುವಂತೆ ಮನವಿ ಮಾಡಿದರು.


ಉದಯವಾಹಿನಿ ಚಿತ್ರ

**ನಾನು ನನ್ನ ರಾಜ್ಯದ ಜನರ ಹಾಗೂ ರೈತರ ರಕ್ಷಣೆಗಾಗಿ ಹಾಗೂ ರಾಜ್ಯ ಸರ್ಕಾರದ ಆಡಳಿತದ ದುರುಪಯೋಗವನ್ನು ಜನರ ಮುಂದೆ ಇಡಲು ರಾಜ್ಯಕ್ಕೆ ಬರುತ್ತೇನೆ. ನನಗೆ ಯಾರೊಬ್ಬರ ಅನುಮತಿ ಬೇಕಾಗಿಲ್ಲ, ನನ್ನನ್ನು ತಡೆಯುವ ಅಧಿಕಾರ ಯಾರಿಗೂ ಇಲ್ಲ,'' ಎಂದು ಅವರು ಹೇಳಿದರು.**

-ಎಚ್.ಡಿ. ಕುಮಾರಸ್ವಾಮಿ

### ಸಾರ್ವಜನಿಕರ ಹಣ ದುರುಪಯೋಗ

**ಚಿಕ್ಕಬಳ್ಳಾಪುರ ಜಿಲ್ಲೆ ಸೇರಿದಂತೆ ಬಯಲು ಸೀಮೆ ಜಿಲ್ಲೆಗಳ ಶಾಶ್ವತ ನೀರಾವರಿ ಸಮಸ್ಯೆಯನ್ನು ಪರಿಹರಿಸಲು 'ಎತ್ತಿನಹೊಳೆ ಯೋಜನೆ' 2014ರಲ್ಲಿ ಆರಂಭವಾದರೂ 2026ರ ಬರುವಿಕೆಗೆ ಅದು ಪೂರ್ಣಗೊಂಡಿಲ್ಲ, ಇದರಲ್ಲಿ 23,000 ಕೋಟಿ ಸಾರ್ವಜನಿಕರ ಹಣ ದುರುಪಯೋಗವಾಗಿದೆ ಎಂದರು.**

## ಮಿನಿ ನ್ಯೂಸ್

### ರಾಜಗೋಪುರದ ಮಹಾದ್ವಾರಕ್ಕೆ ವಾಸ್ತು ಪೂಜೆ

• ಉದಯವಾಹಿನಿ, ಬೇತಮಂಗಲ

ಶ್ರೀ ವಿಜಯೇಂದ್ರ ಸ್ವಾಮಿ ದೇವಾಲಯದ ರಾಜಗೋಪುರದ ಮಹಾದ್ವಾರ ನಿರ್ಮಾಣಕ್ಕೆ ಶಾಸ್ತ್ರೋಕ್ತವಾಗಿ ವಾಸ್ತು ಪೂಜಾ ಹೋಮ ಹವನ ನೆರವೇರಿಸಲಾಯಿತು. ಪಾಲಾರ್ ನದಿಯ ದಡದಲ್ಲಿ ನೆಲೆಸಿರುವ ಶ್ರೀ ವಿಜಯೇಂದ್ರ ಸ್ವಾಮಿ ದೇವಾಲಯದ ಶುಭಾರಂಭದಲ್ಲಿ ಪ್ರಧಾನ ಆರ್ಚಕ ಸುದರ್ಶನ್ ಅವರ ನೇತೃತ್ವದಲ್ಲಿ ಪೂಜಾ ವಿಧಿ ವಿಧಾನಗಳು ಭಕ್ತಾದಿಗಳ ಸಮ್ಮುಖದಲ್ಲಿ ನಡೆಯಿತು. ದೇವಾಲಯದ ರಾಜಗೋಪುರ ಮತ್ತು ಮಹಾದ್ವಾರವು ದೇವಾಲಯದ ಪ್ರವೇಶದ್ವಾರ ಮಾತ್ರವಲ್ಲದೆ, ಅದರ ವಾಸ್ತುಶಿಲ್ಪ ಹಾಗೂ ಧಾರ್ಮಿಕ ವೈಭವವನ್ನು ಪ್ರತಿಬಿಂಬಿಸುವ ಪ್ರಮುಖ ಭಾಗಗಳಾಗಿವೆ. ಇವುಗಳ ನಿರ್ಮಾಣ ಮತ್ತು ಅಭಿವೃದ್ಧಿಯ ಕಾರ್ಯಗಳು ಮುಂದಿನ ಪೀಳಿಗೆಗೆ ನಮ್ಮ ಸಂಸ್ಕೃತಿ ಮತ್ತು ಧಾರ್ಮಿಕ ಪರಂಪರೆಯನ್ನು ಪರಿಚಯಿಸುವಲ್ಲಿ ಸಹಕಾರಿಯಾಗುತ್ತವೆ ಎಂದು ದೇಗುಲದ ಕನ್ವೀನರ್ ಅ.ಮು ಲಕ್ಷ್ಮಿ ನಾರಾಯಣ್ ಹೇಳಿದರು. ದೇವಾಲಯದ ಅಭಿವೃದ್ಧಿ ಕಾರ್ಯಗಳು ಯಶಸ್ವಿಯಾಗಿ ಪೂರ್ಣಗೊಳ್ಳಲು ಆಡಳಿತ ಮಂಡಳಿ, ಅರ್ಚಕರು, ಭಕ್ತರು ಹಾಗೂ ಸ್ಥಳೀಯ ಸಾರ್ವಜನಿಕರ ಸಹಕಾರ ಅಗತ್ಯ. ಧಾರ್ಮಿಕ ಕ್ಷೇತ್ರಗಳ ಪಾವಿತ್ರತೆ ಕಾಪಾಡುವುದರ ಜೊತೆಗೆ ಸ್ವಚ್ಛತೆ, ಶಿಸ್ತು ಮತ್ತು ಸಾಮರಸ್ಯಕ್ಕೆ ಆದ್ಯತೆ ನೀಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹೇಳಿದರು. ಪೂಜೆಯಲ್ಲಿ ಹಿರಿಯ ಮುಖಂಡರಾದ ಶಾಂತ ಮೂರ್ತಿ, ಕೃಷ್ಣಪ್ಪ, ಸುರೇಶ್, ಗಂಗೂಲಪ್ಪ ಸೇರಿದಂತೆ ಮುಖಂಡರು ಹಾಗೂ ಭಕ್ತಾದಿಗಳು ಪಾಲ್ಗೊಂಡಿದ್ದರು.

### ದಲಿತ ಕುಟುಂಬದ ಜಮೀನು ಸವರ್ಣೀಯರ ಹೆಸರಿಗೆ ಖಾತೆ

• ಉದಯವಾಹಿನಿ, ಕೆಜಿಎಫ್

ದಲಿತ ಕುಟುಂಬಕ್ಕೆ ಸೇರಿದ ಜಮೀನಿನ ಒಂದು ಭಾಗವನ್ನು ಕಂದಾಯ ಅಧಿಕಾರಿಗಳು ಅಕ್ರಮವಾಗಿ ಬೇರೊಬ್ಬರ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದಾರೆ ಎಂದು ಬೇತಮಂಗಲ ಬ್ಲಾಕ್ ಕಾಂಗ್ರೆಸ್ ಎಸ್‌ಸಿ/ಎಸ್‌ಟಿ ಘಟಕದ ಅಧ್ಯಕ್ಷ ವೆಂಕಟ್ರಾಮ್ ಗಂಭೀರ ಆರೋಪ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಕಳೆದ ಸುಮಾರು 40 ವರ್ಷಗಳಿಂದ ತಮ್ಮ ಕುಟುಂಬದ ಅನುಭವದಲ್ಲಿರುವ ಜಮೀನಿನ ಖಾತೆಯನ್ನು ಬೇರೊಬ್ಬರ ಹೆಸರಿಗೆ ಬದಲಾಯಿಸಿರುವುದು ಹೇಗೆ ಸಾಧ್ಯವಾಯಿತು ಎಂದು ಪ್ರಶ್ನಿಸಿದ್ದಾರೆ.

ಕ್ಯಾಸಂಬಳ್ಳಿ ಹೋಬಳಿಯ ಕಂಗಾಂಡ್ಲಹಳ್ಳಿ ಗ್ರಾಮದ ನಿವಾಸಿಯಾಗಿರುವ ತಮಗೆ ಕಣ್ಣೂರು ಗ್ರಾಮದಲ್ಲಿ ಸರ್ವೆ ನಂಬರ್ 48/25ರಲ್ಲಿ 2.23 ಗುಂಟೆ ಜಮೀನು ಇದೆ. ಈ ಜಮೀನಿನಲ್ಲಿ 1.13 ಗುಂಟೆಯನ್ನು ಕಣ್ಣೂರು ಗ್ರಾಮದ ನಿವಾಸಿ ಸೋಮಶೇಖರ್ ನಾಯ್ಡು ಬಿನ್ ರಂಗಪ್ಪ ನಾಯ್ಡು ಹೆಸರಿಗೆ ಕಂದಾಯ ಅಧಿಕಾರಿಗಳು ಅಕ್ರಮವಾಗಿ ಖಾತೆ ಮಾಡಿಕೊಟ್ಟಿದ್ದಾರೆ ಎಂದು ಆರೋಪಿಸಿದರು. ನಮ್ಮತಂದೆ ಹನುಮಂತಪ್ಪ ಈ ಜಮೀನಿನ ಮೂಲ ಸಾಗುವಳಿದಾರರಾಗಿದ್ದು,ಸರ್ಕಾರದಿಂದ ಜಮೀನು ಮಂಜೂರಾಗಿತ್ತು.ತಂದೆಯವರು 2018ರಲ್ಲಿ ಮೃತಪಟ್ಟ ಬಳಿಕ, 2019ರಲ್ಲಿ ಜಮೀನನ್ನು ನನ್ನ ಹೆಸರಿಗೆ ಪೌತಿ ಖಾತೆ ಮಾಡಲಾಗಿದೆ. ತಂದೆಯವರ ಕಾಲದಿಂದಲೂ ನಮ್ಮ ಕುಟುಂಬ ಈ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿದೆ. ನಮಗೆ ಜೀವನ ನಿರ್ವಹಣೆಗೆ ಬೇರೆ ಯಾವುದೇ ಆಧಾರವಿಲ್ಲ ಎಂದು ವೆಂಕಟ್ರಾಮ್ ತಿಳಿಸಿದರು.ತಮ್ಮ ಕುಟುಂಬಕ್ಕೆ ಸೇರಿದ ಜಮೀನಿನ ವಿಚಾರದಲ್ಲಿ ನ್ಯಾಯ ದೊರಕಿಸಿಕೊಡದಿದ್ದರೆ ಕುಟುಂಬ ಸಮೇತರಾಗಿ ಜಮೀನಿನಲ್ಲೇ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಎಚ್ಚರಿಕೆ ನೀಡಿದರು.

### ವಿದ್ಯಾರ್ಥಿಗಳಲ್ಲಿ ಹೊಸತನ ಮತ್ತು ಸೃಜನಶೀಲತೆ, ಸಾಧನೆಗೆ ಪ್ರೇರಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಾಮರಾಜನಗರ

ಯುವಕರು ಮತ್ತು ವಿದ್ಯಾರ್ಥಿಗಳಲ್ಲಿ ಹೊಸತನ ಮತ್ತು ಸೃಜನಶೀಲತೆ, ಸಾಧನೆಗೆ ಪ್ರೇರಣೆ ಮತ್ತು ಚೈತನ್ಯದ ಶಕ್ತಿಶಾಲಿ ಸಾಧಕರು ಡಾ. ಎಪಿಜೆ ಅಬ್ದುಲ್ ಕಲಾಂ ರವರು. ವಿಶ್ವದ ಅತ್ಯಂತ ಶ್ರೇಷ್ಠ ವಿಜ್ಞಾನಿಗಳಾಗಿ, ಭಾರತದ ರಾಷ್ಟ್ರಪತಿಗಳಾಗಿ, ಭಾರತರತ್ನರಾಗಿ ಭಾರತದ ಕೀರ್ತಿಯನ್ನು ವಿಶ್ವದ ಎಲ್ಲೆಡೆ ಹರಡಿ ಗೌರವ ತಂದುಕೊಟ್ಟ ಮಹಾನ್ ವ್ಯಕ್ತಿ ಎಂದು ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತ, ಸಂಸ್ಕೃತಿ ಚಿಂತಕ ಸುರೇಶ್ ಎನ್ ಋಗ್ವೇದಿ ತಿಳಿಸಿದರು.

ಅವರು ಜೈ ಹಿಂದ್ ಪ್ರತಿಷ್ಠಾಪನ, ಋಗ್ವೇದಿ ಯೂತ್ ಕ್ಲಬ್ ಜೈ ಹಿಂದ್ ಕಟ್ಟೆಯಲ್ಲಿ ಹಮ್ಮಿಕೊಂಡಿದ್ದ ಭಾರತರತ್ನ ಡಾ. ಎಪಿಜೆ ಅಬ್ದುಲ್ ಕಲಾಂ ರವರ ಜನ್ಮದಿನ, ಹಾಗೂ ರಾಷ್ಟ್ರೀಯ ವಿದ್ಯಾರ್ಥಿ ದಿನವನ್ನು ಉದ್ಘಾಟಿಸಿ ಮಾತನಾಡುತ್ತಾ ಇಡೀ ವಿಶ್ವದಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ದೇಶ ಭಾರತ. ಸುಮಾರು 30 ಕೋಟಿಗೂ ಅಧಿಕ ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ದಾಖಲಿಸಿಕೊಂಡಿದ್ದಾರೆ. ಇಷ್ಟು ಸಂಖ್ಯೆಯ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಗುರಿ ಮತ್ತು ಕನಸುಗಳನ್ನು ಸಾಕಾರಗೊಳಿಸಿಕೊಂಡು ಜಗತ್ತಿನಲ್ಲಿ ಭಾರತವನ್ನು ಸದೃಢ, ಶ್ರೇಷ್ಠ ಭಾರತವನ್ನಾಗಿ ರೂಪಿಸಬಹುದು. ಯುವಕರು ಮತ್ತು ವಿದ್ಯಾರ್ಥಿಗಳು ವಿಶೇಷವಾಗಿ ಸಾಧನೆಯ ಹಾದಿಯನ್ನು ಸಾಧಿಸಬೇಕು.

ಕನಸು ಎಂದರೆ ನಿದ್ದೆಯಲ್ಲಿ ಕಾಣುವುದಲ್ಲ. ನಿಮ್ಮನ್ನು ನಿದ್ದೆ ಮಾಡಲು ಬಿಡದಿರುವುದು ಎಂಬ ಸತ್ಯದ ನುಡಿಯನ್ನು ನುಡಿದು ಜಾಗೃತಗೊಳಿಸಿದ ಕಲಾಂ ರವರು ಭಾರತೀಯರೆಲ್ಲರಿಗೂ ಆದರ್ಶಮಯವಾದ ವ್ಯಕ್ತಿತ್ವ ಹೊಂದಿದವರು. ತಮ್ಮ ನಡೆ, ನುಡಿ,ಜ್ಞಾನದ ಮೂಲಕ ಭಾರತೀಯತೆಯನ್ನು ಮೈಗೂಡಿಸಿಕೊಂಡು ವಿಶ್ವಕ್ಕೆ ಮಹಾನ್ ಕೊಡುಗೆಯನ್ನು ವಿಜ್ಞಾನ,ತಂತ್ರಜ್ಞಾನ, ಬಾಹ್ಯಾಕಾಶದಲ್ಲಿ ಅಪಾರ ಸಾಧನೆಯನ್ನು ಮಾಡಿ ವಿಶ್ವಕ್ಕೆ ವಿಶೇಷವಾಗಿ ಭಾರತಕ್ಕೆ ಅಪಾರ ಕೊಡಿಗೆ ನೀಡಿದ್ದಾರೆ.

### ಮೊದಲ ಬಾರಿಗೆ ಮೈಸೂರಿನಲ್ಲಿ 48 ಗಂಟೆಗಳ ಕಂಬಳ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮೈಸೂರು

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ತಾಯಿ ಚಾಮುಂಡೇಶ್ವರಿಯ ಸ್ಮರಣೆಯೊಂದಿಗೆ ಮೈಸೂರು ವಿಜಯದಶಮಿ ಕಂಬಳದ ತಾಲೀಮು ಆರಂಭಗೊಂಡಿದೆ.

ದಸರಾ ಇತಿಹಾಸದಲ್ಲೇ ಮೊದಲ ಬಾರಿಗೆ ಅಕ್ಟೋಬರ್ 17 ರಿಂದ 19 ರವರೆಗೆ ಸತತ 48 ಗಂಟೆಗಳ ಕಾಲ ಕಂಬಳ ಆಯೋಜಿಸಲಾಗಿದ್ದು, ಇದಕ್ಕಾಗಿ ಮೈಸೂರಿನಲ್ಲಿ ವಿಶೇಷ ಟ್ರ್ಯಾಕ್ ನಿರ್ಮಿಸಲಾಗಿದೆ.ಕೆರೆ ಅಥವಾ ಗದ್ದೆಯಲ್ಲಿ ಅಲ್ಲ, ಕರಾವಳಿ ಮಾದರಿಯಲ್ಲೇ ವೈಜ್ಞಾನಿಕವಾಗಿ ಕೆಸರು ನೀರು ತುಂಬಿದ 120 ಮೀಟರ್ ಉದ್ದದ ಟ್ರ್ಯಾಕ್ ಸಿದ್ಧಪಡಿಸಲಾಗಿದೆ. ಇಂದು ನಡೆದ ತಾಲೀಮಿನಲ್ಲಿ ಕಂಬಳದ ಕೋಣಗಳು ನೀರಿನಲ್ಲಿ ಅಬ್ಬರಿಸಿ ಓಡುವ ಮೂಲಕ ನೆರೆದಿದ್ದ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದವು. 48 ಗಂಟೆಗಳ ಕಾಲ ನಡೆಯಲಿರುವ ಈ ಕಂಬಳದಲ್ಲಿ ಕರಾವಳಿಯಿಂದ 100ಕ್ಕೂ ಹೆಚ್ಚು ಜೋಡಿ ಸ್ಪರ್ಧಾ ಕೋಣಗಳು ಭಾಗವಹಿಸಲಿದ್ದು, ಮೈಸೂರು ದಸರಾಗೆ ಇದು ಹೊಸ ಆಕರ್ಷಣೆ ಸೇರ್ಪಡೆಯಾದಂತಾಗಿದೆ

ಅಂತರಾಳದಿಂದ..
EDITORIAL

# ಪಂಚಾಯತ್ ವ್ಯವಸ್ಥೆ ಬಲಪಡಿಸಲು ಬೇಕಿದೆ ಇಚ್ಛಾಶಕ್ತಿ




ರಾಜ್ಯದಲ್ಲಿ ದೀರ್ಘಾವಧಿಯಿಂದ ನನೆಗುದಿಗೆ ಬಿದ್ದಿರುವ ಜಿಲ್ಲಾ ಮತ್ತು ತಾಲೂಕು ಪಂಚಾಯತ್‌ಗಳಿಗೆ ಚುನಾವಣೆ ನಡೆಯಬಹುದು ಎಂಬ ನಿರೀಕ್ಷೆ ಗರಿಗೆದರಿದೆ. ರಾಜ್ಯದ 31 ಜಿಲ್ಲಾ ಪಂಚಾಯತ್‌ಗಳಲ್ಲಿ ಒಟ್ಟು 1,129 ಮತ್ತು ತಾಲೂಕು ಪಂಚಾಯತ್‌ಗಳಲ್ಲಿ ಒಟ್ಟು 3,656 ಸದಸ್ಯ ಸ್ಥಾನಗಳಿಗೆ ರಾಜ್ಯ ಸರಕಾರವು ವರ್ಗವಾರು ಮೀಸಲಾತಿಯನ್ನು ನಿಗದಿಗೊಳಿಸಿ, ಪಟ್ಟಿ ಪ್ರಕಟಿಸಿದೆ. ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. ಹೀಗಾಗಿ ಮುಂದಿನ ವರ್ಷದ ಜನವರಿ ಒಳಗೆ ಚುನಾವಣೆ ನಡೆಯಬಹುದು ಎಂಬ ಮಹದಾಸೆಯು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಅದೃಷ್ಟ ಪರೀಕ್ಷೆಗೆ ಹಂಬಲಿಸುತ್ತಿರುವ ಆಕಾಂಕ್ಷಿಗಳಲ್ಲಿ ಚಿಗುರಿದೆ. ಚುನಾವಣೆಗಳಿಲ್ಲದೆ ಸೊರಗಿದ್ದ ಸ್ಥಳೀಯ ಸಂಸ್ಥೆಗಳು ಪುನಃ ಜೀವಕಳೆ ಪಡೆಯಬಹುದು ಎಂದು ಅಧಿಕಾರ ವಿಕೇಂದ್ರೀಕರಣದಲ್ಲಿ ಆಸ್ಥೆಯುಳ್ಳವರ ಅಭಿಮತ. ನೀತಿ-ನಿರ್ಧಾರಗಳಲ್ಲಿ ಜನಸಮೂಹದ ನೇರ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸುವ ಸ್ಥಳೀಯ ಸಂಸ್ಥೆಗಳು, ಜನತಂತ್ರ ವ್ಯವಸ್ಥೆಯಲ್ಲಿ ಬಹಳ ಮಹತ್ವದ ಪಾತ್ರ ನಿರ್ವಹಿಸುತ್ತವೆ. ಆಡಳಿತ ವಿಕೇಂದ್ರೀಕರಣ ಮಾತ್ರವಲ್ಲದೆ, ರಾಜಕೀಯ ವಿಕೇಂದ್ರೀಕರಣಕ್ಕೂ ಮೆಟ್ಟಿಲುಗಳಾಗಿ ನಿಲ್ಲುತ್ತವೆ. ಇಂತಹ ಮಹತ್ವದ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆ ನಡೆಸಲು ಆಗದೇ ಇರುವುದು ದುರದೃಷ್ಟದ ಸಂಗತಿ. ಪಂಚಾಯತ್ ರಾಜ್ ವ್ಯವಸ್ಥೆ ಅಳವಡಿಕೆಯಲ್ಲಿ ಕರ್ನಾಟಕದ ಹೆಸರು ಮುಂಚೂಣಿಯಲ್ಲಿ ನಿಲ್ಲುವಂತಹದು. ಆದರೆ ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳ ಆಡಳಿತ ಅವಧಿ ಮುಗಿದು ಐದು ವರ್ಷಗಳಾದರೂ ಚುನಾವಣೆ ನಡೆಸಲು ಸಾಧ್ಯವಾಗದ ಸ್ಥಿತಿ ಒದಗಿದೆ. ಆಡಳಿತದ ಚುಕ್ಕಾಣಿ ಹಿಡಿದವರ ಬದ್ಧತೆಯ ಕೊರತೆಯೇ ಇದಕ್ಕೆ ಮುಖ್ಯ ಕಾರಣ. ಈ ವಿಚಾರದಲ್ಲಿ ಪಕ್ಷಭೇದ ಎಂಬುದಿಲ್ಲ. ಅದರ ಮುಂದುವರಿಕೆಯಾಗಿ ಭಾರೀ ಸಿದ್ಧತೆಯೊಂದಿಗೆ 64ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆ ರೂಪುಗೊಂಡಿತು. ರಾಜೀವ್ ಅವರೇ ಆ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದರು. 1989ರಲ್ಲಿ ಮಸೂದೆಗೆ ಲೋಕಸಭೆ ಅನುಮೋದನೆ ನೀಡಿತು. ಆದರೆ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಸಂಖ್ಯಾ ಬಲ ಹೆಚ್ಚಿಗಿದ್ದ ಕಾರಣ ಅಲ್ಲಿ ಮಸೂದೆಗೆ ಸೋಲುಂಟಾಯಿತು. ಪಂಚಾಯತ್ ರಾಜ್ ವ್ಯವಸ್ಥೆ ಬಲಪಡಿಸುವ ಒಂದು ಚಾರಿತ್ರಿಕ ವಿದ್ಯಮಾನದ ಕೀರ್ತಿ ಮುಡಿಗೇರಿಸಿಕೊಳ್ಳುವ ಅವಕಾಶದಿಂದ ರಾಜೀವ್ ಗಾಂಧಿ ವಂಚಿತರಾದರು. ಅವರ ಮರಣಾನಂತರ ಪ್ರಧಾನಿಯಾದ ಪಿ.ವಿ. ನರಸಿಂಹರಾವ್ ಅವರು ರಾಜೀವ್ ಗಾಂಧಿ ಕನಸನ್ನು ನನಸಾಗಿಸಿದರು. ಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಂವಿಧಾನಿಕ ಮಾನ್ಯತೆ ಕಲ್ಪಿಸುವ ಉದ್ದೇಶದ ಎರಡು ಮಹತ್ವದ ತಿದ್ದುಪಡಿ ಮಸೂದೆಗಳು 1992ರ ಡಿಸೆಂಬರ್‌ನಲ್ಲಿ ಸಂಸತ್ತಿನ ಅನುಮೋದನೆ ಪಡೆದವು. ವೈರುಧ್ಯದ ಸಂಗತಿ ಎಂದರೆ ಅವರು ಪ್ರತಿನಿಧಿಸಿದ್ದ ಪಕ್ಷವೇ ರಾಜ್ಯದಲ್ಲಿ ಚುಕ್ಕಾಣಿ ಹಿಡಿದಿದ್ದರೂ ಈ ಸಂಸ್ಥೆಗಳು ಚುನಾವಣೆಗಳಿಲ್ಲದೆ ಸೊರಗಿವೆ! ಪಂಚಾಯತ್ ರಾಜ್ ವ್ಯವಸ್ಥೆಯ ಪರಿಕಲ್ಪನೆಗೆ ರೆಕ್ಕೆ ಮೂಡಿದ ದಿನದಿಂದಲೂ ಅದನ್ನು ಜಾರಿಗೆ ತರಲು ತೊಡರುಗಾಲಾಗಿ ಪರಿಣಮಿಸಿರುವುದು ಶಾಸಕರು ಮತ್ತು ಸಂಸದರು. ಅಧಿಕಾರ ಎಲ್ಲಿ ತಮ್ಮ ಕೈತಪ್ಪಿಹೋಗುವುದೋ ಎಂಬ ಅಭದ್ರತಾಭಾವದಿಂದ ಸ್ಥಳೀಯ ಸಂಸ್ಥೆಗಳ ಶಕ್ತಿ ಕುಂದಿಸುವ ಕೆಲಸಕ್ಕೆ ಅವರು ಪಕ್ಷಭೇದ ಮರೆತು ಕೈಜೋಡಿಸುತ್ತಿರುವುದು ಗುಟ್ಟಿನ ಸಂಗತಿಯೇನಲ್ಲ. ನಗರ ಸ್ಥಳೀಯ ಸಂಸ್ಥೆಗಳು ಕಾಲಕಾಲಕ್ಕೆ ಚುನಾವಣೆ ಎದುರಿಸುವ ಸುಯೋಗದಿಂದ ವಂಚಿತವಾಗುತ್ತಿರುವುದಕ್ಕೂ ಇದೇ ಕಾರಣ. ಬಹುಮುಖ್ಯವಾಗಿ ಶಾಸಕರ ಒತ್ತಡ ಪ್ರಧಾನ ಪಾತ್ರ ಪೋಷಿಸುತ್ತಿದೆ. ಸರಕಾರ ಮುನ್ನಡೆಸುವವರು ಅವರ ಒತ್ತಡಕ್ಕೆ ಮಣಿದು, ನೆಪಗಳ ಮೊರೆಹೋಗುತ್ತಿದ್ದಾರೆ. ನ್ಯಾಯಾಲಯಗಳನ್ನು ಗುರಾಣಿಯನ್ನಾಗಿ ಬಳಸಿಕೊಳ್ಳುವ ಹುನ್ನಾರಗಳು ನಿರಂತರವಾಗಿ ನಡೆದಿವೆ. ವಿಧಾನಸಭೆ ಮತ್ತು ಲೋಕಸಭೆಗೆ ಹೇಗೆ ಕಾಲಕಾಲಕ್ಕೆ ಚುನಾವಣೆಗಳು ನಡೆಯುತ್ತವೋ ಅದೇ ರೀತಿ ಅವಧಿ ಪೂರ್ಣಗೊಳಿಸಿದ ಸ್ಥಳೀಯ ಸಂಸ್ಥೆಗಳಿಗೂ ಸಕಾಲಕ್ಕೆ ಚುನಾವಣೆ ನಡೆಯಬೇಕು. ಅದನ್ನು ಆಗುಮಾಡುವಂತಹ ಒತ್ತಡದ ಗುಂಪುಗಳು ರೂಪುಗೊಳ್ಳಬೇಕು.

**ಸ್ಥಳೀಯ ಸಂಸ್ಥೆಗಳಿಗೆ ಯಾವುದೋ ಒಂದು ಕುಂಟು ನೆಪ ಮುಂದೊಡ್ಡಿ ಚುನಾವಣೆ ಮುಂದೂಡುವುದರಲ್ಲಿ ಎಲ್ಲ ರಾಜಕೀಯ ಪಕ್ಷಗಳ ಆಸಕ್ತಿಯೂ ಒಂದೇ ರೀತಿ ಇರುವಂತಹದು. ಈ ವಿಚಾರದಲ್ಲಿ ಮಾತ್ರ ನಮ್ಮ ಮುಖಂಡರದು ಸಮಾನ ಆಸಕ್ತಿ ಮತ್ತು ಒಂದೇ ಬಗೆಯ ಚಿಂತನೆ. ಜನತಾ ಪಕ್ಷ ನೇತೃತ್ವದ ಸರಕಾರದ ಅವಧಿಯಲ್ಲಿ ಜಾರಿಗೆ ಬಂದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ವ್ಯವಸ್ಥೆಯು ದೇಶದಾದ್ಯಂತ ಗಮನ ಸೆಳೆದಿತ್ತು. ಸ್ಥಳೀಯ ಆಡಳಿತಕ್ಕೆ ಸಾಂವಿಧಾನಿಕ ಮಾನ್ಯತೆಯನ್ನು ನೀಡುವ ನಿಟ್ಟಿನಲ್ಲಿ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ಕಾಲದಲ್ಲಿ ನಡೆದ ಪ್ರಯತ್ನಕ್ಕೂ ಕರ್ನಾಟಕದ ಈ ಪ್ರಯೋಗವು ಸಣ್ಣ ಮಟ್ಟದಲ್ಲಾದರೂ ಪ್ರೇರಣೆಯಾಗಿತ್ತು ಎಂಬುದು ಅತಿಶಯೋಕ್ತಿ ಅಲ್ಲ. ರಾಜೀವ್ ಗಾಂಧಿ ನೇತೃತ್ವದ ಸರಕಾರ ನೇಮಿಸಿದ ಎಲ್.ಎಂ. ಸಿಂಘ್ವಿ ನೇತೃತ್ವದ ಸಮಿತಿಯು ಪಂಚಾಯತ್ ರಾಜ್ ವ್ಯವಸ್ಥೆ ಸುಭದ್ರವಾಗಬೇಕಾದರೆ ಅದಕ್ಕೆ ಸಾಂವಿಧಾನಿಕ ಮಾನ್ಯತೆ ಸಿಗಲೇಬೇಕು ಎಂದು ಹೇಳಿತ್ತು.**

# ಅಶ್ವಜೀತ ದಂಡಿನ ಅವರ ಪ್ರಥಮ ಕವನ ಸಂಕಲನ 'ಚಿಮ್ಮಿದ ಬುಗ್ಗೆ'

ಈ ಪುಸ್ತಕದ ಲೇಖಕರಾದ ಸಹೋದರ ದಂಡಿನ ಅವರ ಪರಿಚಯ ನನಗೆ ಧಾರವಾಡದ ಗಣಕರಂಗ ಸಾಹಿತ್ಯ ಗುಂಪಿನಲ್ಲಿ ಆಯಿತು. ನಾವು ಇನ್ನೂ ಮುಖಾಮುಖಿಯಾಗದಿದ್ದರೂ, 'ಅಕ್ಕ' ಎಂಬ ಅಭಿಮಾನದಿಂದ ಪುಸ್ತಕವನ್ನು ಕಳುಹಿಸಿಕೊಟ್ಟಿರುವುದು ನಿಜಕ್ಕೂ ಸಂತೋಷದ ವಿಷಯ.

ಈ ಕೃತಿಯಲ್ಲಿ ನನಗೆ ಮೊದಲು ಇಷ್ಟವಾದದ್ದು, ಲೇಖಕರು ತಮ್ಮ ಹೊತ್ತಿಗೆಯನ್ನು ಫುಲೆ ದಂಪತಿಗಳಿಗೆ ಅರ್ಪಿಸಿರುವುದು.

ಬಹುಮುಖ ಪ್ರತಿಭೆಯಾದ ಅಶ್ವಜೀತ ಅವರು, ಹಲವು ಕವನಗಳನ್ನು ಅಚ್ಚುಕಟ್ಟಾಗಿ ಪದಗಳಲ್ಲಿ ಪೋಣಿಸಿ ಹಾಡುವಂತೆ ರಚಿಸಿದ್ದಾರೆ. ಕನ್ನಡ ತಾಯಿ, ದೇಶದ ಸ್ಥಿತಿ-ಗತಿ, ಬುದ್ಧ-ಬಸವ-ಅಂಬೇಡ್ಕರ್, ಅಂಗುಲಿಮಾಲ, ಮೊಹರಂ ಹಬ್ಬದ ಕುರಿತ ಕವನಗಳಲ್ಲಿ ಶರಣರ ಬಂಡಾಯ ಮತ್ತು ಕ್ರಾಂತಿಯ ಸನ್ನಿವೇಶಗಳನ್ನು ಕಟ್ಟಿಕೊಟ್ಟಿದ್ದಾರೆ. ಮಾತೆ ರಮಾಬಾಯಿ ಕುರಿತ ಕವನಗಳಲ್ಲಿ ಬಡತನದ ಬೇಗೆ ಜೀವನವನ್ನು ಹೇಗೆ ಹಿಂಸಿಸುತ್ತದೆ ಎಂಬುದನ್ನು ಮನಮುಟ್ಟುವಂತೆ ವ್ಯಕ್ತಪಡಿಸಿದ್ದಾರೆ. ಜಾತಿ-ಧರ್ಮ, ಮೇಲು-ಕೀಳು, ಮೂಢನಂಬಿಕೆಗಳ ವಿರುದ್ಧ ಜಾಗೃತಿ ಮೂಡಿಸಿದ್ದಾರೆ. ದೀಪದ ಕುರಿತ ಕವನದಲ್ಲಿ ಎಂತಹ ಸೊಡರನ್ನು ಹಚ್ಚಬೇಕು ಎಂದು ತಿಳಿಸಿದ್ದಾರೆ.



ಮರದ ಕಿವಿಮಾತುಗಳೇನು? ಮತ್ತು ಈ ಸಮಾಜವನ್ನು ದಿಕ್ಕು ತಪ್ಪಿಸುತ್ತಿರುವ ಜನರ ಕುರಿತು ಎಚ್ಚರಿಸಿದ್ದಾರೆ. ಮಹಾನ್ ನಾಯಕರ ಸಾವು-ನೋವುಗಳ ಕುರಿತು ಮಾರ್ಮಿಕವಾಗಿ ನುಡಿದಿದ್ದಾರೆ. 'ವಿಶ್ವಮಾನವನಾಗು' ಕವನದಲ್ಲಿ ತಮ್ಮ ವಿಚಾರ ಲಹರಿಯಂತೆ ಪದಗಳನ್ನು ಪೋಣಿಸಿದ್ದಾರೆ. ಭಕ್ತಿ, ದೇವರು, ಸುಳ್ಳು, ಸಾರಾಯಿ-ಹೆಂಡದ ಕುರಿತು ಧ್ವನಿ ಎತ್ತಿದ್ದಾರೆ. ಭ್ರಷ್ಟ ರಾಜಕಾರಣಿಗಳನ್ನು ನಾಯಿಗೆ ಹೋಲಿಸಿ ಕವನದ ಸಾಲುಗಳನ್ನು ರಚಿಸಿದ್ದಾರೆ.

ದಲಿತ ಕವಿ ಸಿದ್ಧಲಿಂಗಯ್ಯನವರ 'ನನ್ನ ಜನರ' ಸಾಲುಗಳನ್ನು ಬಳಸಿಕೊಂಡು ಬಂಡಾಯ ಗೀತೆಯನ್ನು ಕಟ್ಟಿದ್ದಾರೆ. ಭಾರತ ಮಾತೆಯ ದುಸ್ಥಿತಿಯ ಕುರಿತು ತಿಳಿಸಿದ್ದಾರೆ. ಚೂರಾದ ಕನ್ನಡಿ' ತತ್ವಪದದಲ್ಲಿ ಅರ್ಥಗರ್ಭಿತವಾದ ಸಾಲುಗಳು ಸೇರಿವೆ.

ಬಾಕೆಟ್ ನ್ಯೂಸ್ ಚಾನೆಲ್' ಕುರಿತು ಮನದ ಮಾತುಗಳನ್ನು ಬರವಣಿಗೆಯ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಹೊಲೆ-ಮಾದಿಗರ ಕಾರ್ಯಗಳ ಕುರಿತು ಉದಾರವಾಗಿ ಬರೆದಿದ್ದಾರೆ. ಮಹಿಷ ಹಬ್ಬದ ಕುರಿತು ಇತಿಹಾಸವನ್ನು ತಿಳಿದುಕೊಳ್ಳಿ ಎಂದು ನೆನಪಿಸಿದ್ದಾರೆ.

ಸಹೋದರ ಅಶ್ವಜೀತ ದಂಡಿನ ಅವರು ಅಪಘಾತದಿಂದ ಕಿವಿಯ ಸಮಸ್ಯೆ ಎದುರಿಸುತ್ತಿದ್ದರೂ, ದೇಹದ ನ್ಯೂನತೆಯನ್ನು ಮರೆತು ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಬೇರೆ ಯುವಕರಿಗೆ ಮಾದರಿಯಾಗಿದ್ದಾರೆ.

ಇತ್ತೀಚಿನ ನಮ್ಮ ಯುವ ಪೀಳಿಗೆ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಕಾಲ ಕಳೆಯುತ್ತಿದ್ದರೆ, ಇವರು ಅದಕ್ಕೆ ತದ್ವಿರುದ್ಧವಾಗಿ ಸಾಹಿತ್ಯದ ಕಡೆ ಒಲವು ತೋರಿಸಿ ಸಮಾಜಕ್ಕೆ ಪ್ರಜ್ಞೆಯ ದಾರಿ ತೋರಿಸುವಲ್ಲಿ ಸಕ್ರಿಯರಾಗಿದ್ದಾರೆ. ಬಂಡಾಯದ ಅನೇಕ ಕವಿತೆಗಳನ್ನು ಕವನದ ಸಾರಾಂಶದಲ್ಲಿ ನಾವು ಕಾಣಬಹುದು.

ಸಹೋದರ ಅಶ್ವಜೀತ ದಂಡಿನ ಅವರು ಇನ್ನೂ ಹೆಚ್ಚಿನ ಪುಸ್ತಕಗಳನ್ನು ಓದಿ, ಹತ್ತಾರು ವಿಷಯಗಳನ್ನು ಕಲಿತು ಸಾಹಿತ್ಯದ ಇನ್ನಿತರ ಪ್ರಕಾರಗಳಲ್ಲಿಯೂ ಅನೇಕ ಪುಸ್ತಕಗಳನ್ನು ಹೊರತಂದು ಸಾಧನೆಯ ಶಿಖರವೇರಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. ಇರಲಿ ಛಲ, ದೊರಕಲಿ ಫಲ

**ಪುಸ್ತಕದ ಬೆಲೆ:150 / - ಮಾತ್ರ**

**ಪ್ರತಿಗಳಿಗಾಗಿ ಸಂಪರ್ಕಿಸಿ: 7676910311**


ಶ್ರೀಮತಿ ಸ್ವಪ್ನ ಆರ್ ಎ
ಶಿಕ್ಷಕಿ ಮತ್ತು ಸಾಹಿತಿಗಳು, ಹಿರಿಯೂರು




ಪರೀಕ್ಷಾ ಸಂಭ್ರಮ


ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381


11

# ವಿಶಾಲ ಪಠ್ಯವನ್ನು ಸಣ್ಣದಾಗಿಸಿ ಗೆಲ್ಲುವ ಕಲೆ

**ಇದಕ್ಕೆ ಸುಲಭೋಪಾಯವೆಂದರೆ ವಿಭಜನಾ ಕಲೆ. ಒಂದು ಅಧ್ಯಾಯವನ್ನು ಐದು ಚಿಕ್ಕ ಖಂಡಗಳಾಗಿ ಒಡೆಯಿರಿ. ಪ್ರತಿ ಖಂಡವನ್ನು ಹತ್ತು ಸೂಕ್ಷ್ಮ ಅಂಶಗಳಾಗಿ ವಿಂಗಡಿಸಿ. ಇಂದು ಈ ಎರಡು ಅಂಶ ಮಾತ್ರ ಎಂದು ಚಿಕ್ಕ ಸಂಕಲ್ಪ ಇಡಿ. ಸಣ್ಣ ಗುರಿ ಈಡೇರಿದಾಗ ಮೆದುಳಿಗೆ ಸಂತಸದ ಮಳೆಯಾಗುತ್ತದೆ. ಆ ಸಂತಸವೇ ಮುಂದಿನ ಓದಿಗೆ ಇಂಧನ.**



ದಪ್ಪ ಗ್ರಂಥ, ನೂರಾರು ಪಾಠಗಳು ಎದುರಿಗೆ ನಿಂತಾಗ ಇದೆಲ್ಲವನ್ನೂ ನುಂಗುವುದು ಹೇಗೆ? ಎಂಬ ಬೆದರಿಕೆ ಸಹಜ. ಇಡೀ ಪಠ್ಯಕ್ರಮವನ್ನು ಒಂದೇ ಬೃಹತ್ ಬೆಟ್ಟದಂತೆ ನೋಡಿದರೆ ಕೈಕಾಲು ಸಡಿಲವಾಗುತ್ತವೆ. ಮನಸ್ಸು ಪ್ರಾರಂಭವೇ ಬೇಡ ಎಂದು ಹಿಂದಕ್ಕೆ ಎಳೆಯುತ್ತದೆ. ದೊಡ್ಡ ತುತ್ತನ್ನು ಒಮ್ಮೆಲೇ ನುಂಗಲು ಹೊರಟರೆ ಜೀರ್ಣವಾಗದು.

ವಿಭಜಿಸುವಾಗ ಜಾಣ್ಮೆ ಬೇಕು. ಸುಲಭ ಮತ್ತು ಅತಿಮುಖ್ಯ ವಿಷಯಗಳಿಗೆ ಮೊದಲ ಆದ್ಯತೆ ಕೊಡಿ, ಕಠಿಣಾಂಶವನ್ನು ಕೊನೆಯಲ್ಲಿ ಇಡಿ. ದಿನಚರಿಯಲ್ಲಿ ಸೋಮವಾರ – ಅಧ್ಯಾಯ 1, ಭಾಗ 1–2 ಎಂದು ಸ್ಪಷ್ಟವಾಗಿ ಬರೆಯಿರಿ. ಮುಗಿದ ಭಾಗದ ಮುಂದೆ ಚುಕ್ಕಿ ಇಡಿ. ಆ ಚುಕ್ಕಿ ನಾನು ಬೆಳೆಯುತ್ತಿದ್ದೇನೆ ಎಂಬ ವಿಶ್ವಾಸ ತುಂಬುತ್ತದೆ.

ಆದ್ದರಿಂದ ಪಠ್ಯಕ್ರಮವನ್ನು ಶತ್ರುವಂತೆ ಕಾಣಬೇಡಿ. ಮಿತ್ರನಂತೆ ಅಪ್ಪಿಕೊಳ್ಳಿ. ಚಿಕ್ಕ ಹೆಜ್ಜೆಗಳ ನಿರಂತರ ನಡಿಗೆಯೇ ದೊಡ್ಡ ದೂರವನ್ನು ಸುಲಭಗೊಳಿಸುತ್ತದೆ. ತುಂಡು ತುಂಡಾಗಿ ತಿಂದರೆ ಇಡೀ ಅಡಿಗೆಯೂ ರುಚಿಸುತ್ತದೆ.




ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು


**ಮಾನವ ಇತಿಹಾಸದಲ್ಲಿ ಒಳಿತು ಮತ್ತು ಕೆಡುಕಿನ ನಡುವಿನ ಹೋರಾಟ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಸತ್ಯ ಮತ್ತು ಅಸತ್ಯ, ನ್ಯಾಯ ಮತ್ತು ಅನ್ಯಾಯ, ವಿನಯ ಮತ್ತು ಅಹಂಕಾರಗಳ ನಡುವಿನ ಸಂಘರ್ಷಕ್ಕೆ ಭಾರತೀಯ ಪುರಾಣಗಳು ಅನೇಕ ಉದಾಹರಣೆಗಳನ್ನು ನೀಡುತ್ತವೆ. ಅಂತಹ ಪೌರಾಣಿಕ ಕಥನಗಳಲ್ಲಿ ಮಹಿಷಾಸುರನ ಮೇಲೆ ಚಾಮುಂಡೇಶ್ವರಿ ದೇವಿಯ ವಿಜಯವು ಅತ್ಯಂತ ಮಹತ್ವದ್ದಾಗಿದೆ. ಇದು ಕೇವಲ ದೇವತೆ ಮತ್ತು ರಾಕ್ಷಸನ ನಡುವಿನ ಯುದ್ಧದ ಕಥೆಯಲ್ಲ. ಅಹಂಕಾರ, ದುರಾಸೆ ಮತ್ತು ದೌರ್ಜನ್ಯದ ವಿರುದ್ಧ ಧರ್ಮ, ಧೈರ್ಯ ಹಾಗೂ ನ್ಯಾಯ ಸಾಧಿಸಿದ ವಿಜಯದ ಸಂಕೇತವಾಗಿದೆ. ಮೈಸೂರಿನ ಸಾಂಸ್ಕೃತಿಕ ಪರಂಪರೆಯಲ್ಲಿ ಚಾಮುಂಡೇಶ್ವರಿ ದೇವಿಗೆ ವಿಶಿಷ್ಟ ಸ್ಥಾನವಿದೆ. ಚಾಮುಂಡಿ ಬೆಟ್ಟದಲ್ಲಿ ನೆಲೆಸಿರುವ ದೇವಿಯು ಮೈಸೂರಿನ ಅಧಿದೇವತೆಯಾಗಿ ಭಕ್ತರ ಆರಾಧನೆಗೆ ಪಾತ್ರಳಾಗಿದ್ದಾಳೆ. ಮೈಸೂರು ದಸರೆಯ ಸಂಭ್ರಮಕ್ಕೂ ಈ ಪೌರಾಣಿಕ ಪರಂಪರೆ ಆಧ್ಯಾತ್ಮಿಕ ಹಿನ್ನೆಲೆಯನ್ನು ಒದಗಿಸುತ್ತದೆ.**

# ಮಹಿಷಾಸುರನ ಸಂಹಾರ: ಅಹಂಕಾರದ ಪತನ, ಧರ್ಮದ ವಿಜಯ

## ಚಾಮುಂಡೇಶ್ವರಿಯ ಮಹಿಮೆ ಸಾರುವ ಒಳಿತು ಮತ್ತು ಕೆಡುಕಿನ ನಡುವಿನ ಶಾಶ್ವತ ಸಂಘರ್ಷ

**ಮಹಿಷಾಸುರನ ಕಥೆ: ಅಹಂಕಾರದ ಅಂತ್ಯ :** ಪುರಾಣಗಳ ಪ್ರಕಾರ, ಮಹಿಷಾಸುರನು ಅಪಾರ ಶಕ್ತಿಯನ್ನು ಪಡೆದು ತನ್ನ ಬಲದ ಮದದಿಂದ ದೇವತೆಗಳಿಗೂ ಜನರಿಗೂ ಕಿರುಕುಳ ನೀಡತೊಡಗಿದನು. ತನ್ನ ಶಕ್ತಿಯೇ ಸರ್ವಶ್ರೇಷ್ಠವೆಂದು ಭಾವಿಸಿದ ಅವನು ನ್ಯಾಯ, ಧರ್ಮ ಮತ್ತು ಇತರರ ಸ್ವಾತಂತ್ರ್ಯವನ್ನು ಕಡೆಗಣಿಸಿದನು. ಅವನ ದೌರ್ಜನ್ಯವನ್ನು ತಡೆಯಲು ದೇವತೆಗಳ ಶಕ್ತಿಗಳ ಸಮನ್ವಯದಿಂದ ಆದಿಶಕ್ತಿಯು ದುರ್ಗೆಯ ರೂಪದಲ್ಲಿ ಅವತರಿಸಿದಳು. ದೀರ್ಘ ಹೋರಾಟದ ಬಳಿಕ ದೇವಿಯು ಮಹಿಷಾಸುರನನ್ನು ಸಂಹರಿಸಿದಳು ಎಂಬುದು ಪೌರಾಣಿಕ ಕಥನ. ಈ ಕಥೆಯ ಒಳಾರ್ಥವನ್ನು ಗಮನಿಸಿದಾಗ, ಮಹಿಷಾಸುರನ ಪತನಕ್ಕೆ ಕಾರಣವಾದದ್ದು ಕೇವಲ ಅವನ ಶಕ್ತಿಯಲ್ಲ; ಆ ಶಕ್ತಿಯನ್ನು ಬಳಸಿದ ರೀತಿಯೂ ಹೌದು ಎಂಬ ಸಂದೇಶ ಸಿಗುತ್ತದೆ. ಸಾಮರ್ಥ್ಯ ಮತ್ತು ಅಧಿಕಾರಗಳು ಸಮಾಜದ ಒಳಿತಿಗೆ ಬಳಕೆಯಾಗಬೇಕೇ ಹೊರತು ಇತರರನ್ನು ಶೋಷಿಸಲು ಅಲ್ಲ. ಅಧಿಕಾರದೊಂದಿಗೆ ವಿನಯ, ಶಕ್ತಿಯೊಂದಿಗೆ ವಿವೇಕ ಮತ್ತು ಸಾಧನೆಯೊಂದಿಗೆ ಮಾನವೀಯತೆ ಇಲ್ಲದಿದ್ದರೆ ಪತನ ಅನಿವಾರ್ಯ ಎಂಬುದನ್ನು ಈ ಕಥೆ ನೆನಪಿಸುತ್ತದೆ.

**ಚಾಮುಂಡೇಶ್ವರಿ: ಶಕ್ತಿ, ಧೈರ್ಯ ಮತ್ತು ನ್ಯಾಯದ ಸಂಕೇತ :** ಚಾಮುಂಡೇಶ್ವರಿ ದೇವಿಯು ದುಷ್ಟಶಕ್ತಿಗಳನ್ನು ಸಂಹರಿಸುವ ಶಕ್ತಿಯ ಪ್ರತಿರೂಪವಾಗಿ ಆರಾಧಿಸಲ್ಪಡುತ್ತಾಳೆ. ಆಕೆಯ ವಿಜಯವು ಅನ್ಯಾಯದ ವಿರುದ್ಧ ಹೋರಾಡಲು ಧೈರ್ಯ ಬೇಕು, ಸಂಕಷ್ಟದ ಎದುರು ಕುಗ್ಗದೆ ನಿಲ್ಲಲು ಆತ್ಮವಿಶ್ವಾಸ ಬೇಕು ಮತ್ತು ನ್ಯಾಯವನ್ನು ಸ್ಥಾಪಿಸಲು ದೃಢಸಂಕಲ್ಪ ಅಗತ್ಯ ಎಂಬ ಸಂದೇಶವನ್ನು ನೀಡುತ್ತದೆ.ಮೈಸೂರು ದಸರೆಯಲ್ಲಿ ಚಾಮುಂಡೇಶ್ವರಿಯ ಆರಾಧನೆಗೆ ವಿಶೇಷ ಮಹತ್ವವಿದೆ. ಅರಮನೆಯ ವೈಭವ, ಜಂಬೂಸವಾರಿ ಮತ್ತು ಸಾಂಸ್ಕೃತಿಕ ಆಚರಣೆಗಳ ನಡುವೆ ದೇವಿಯ ವಿಜಯದ ಕಥೆ ಒಳಿತಿನ ಶಾಶ್ವತ ಶಕ್ತಿಯನ್ನು ನೆನಪಿಸುತ್ತದೆ. ಈ ಪರಂಪರೆಯು ಧಾರ್ಮಿಕ ನಂಬಿಕೆಯಷ್ಟೇ ಅಲ್ಲದೆ, ಕರ್ನಾಟಕದ ಸಾಂಸ್ಕೃತಿಕ ಗುರುತಿನ ಭಾಗವೂ ಆಗಿದೆ. ದೇವಿಯ ಆರಾಧನೆಯ ನಿಜವಾದ ಉದ್ದೇಶವನ್ನು ಅರಿಯಬೇಕಾದರೆ, ಆಕೆ ಪ್ರತಿನಿಧಿಸುವ ಧೈರ್ಯ, ನ್ಯಾಯಪ್ರಜ್ಞೆ, ಸಹನೆ ಮತ್ತು ಪರೋಪಕಾರದಂತಹ ಗುಣಗಳನ್ನು ನಮ್ಮ ಬದುಕಿನಲ್ಲೂ ಬೆಳೆಸಿಕೊಳ್ಳಬೇಕು. ನಮ್ಮೊಳಗಿನ ಮಹಿಷಾಸುರನನ್ನು ಗೆಲ್ಲೋಣ : ಮಹಿಷಾಸುರನ ಕಥೆಯನ್ನು ಕೇವಲ ಪುರಾಣದ ಘಟನೆಯಾಗಿ ನೋಡುವ ಬದಲು, ಇಂದಿನ ಸಮಾಜದೊಂದಿಗೆ ಹೋಲಿಸಿ ನೋಡಬೇಕಾಗಿದೆ.



ಅಹಂಕಾರದಿಂದ ಸಂಬಂಧಗಳು ಹಾಳಾಗುತ್ತವೆ. ದುರಾಸೆಯಿಂದ ಭ್ರಷ್ಟಾಚಾರ ಬೆಳೆಯುತ್ತದೆ ದ್ವೇಷದಿಂದ ಸಮಾಜದಲ್ಲಿ ವಿಭಜನೆ ಉಂಟಾಗುತ್ತದೆ; ಅನ್ಯಾಯದ ಎದುರು ಮೌನ ವಹಿಸುವುದರಿಂದ ದುಷ್ಟಪ್ರವೃತ್ತಿಗಳಿಗೆ ಪ್ರೋತ್ಸಾಹ ಸಿಗುತ್ತದೆ.ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಕೆಲವೊಮ್ಮೆ ಕೋಪ, ಅಸೂಯೆ, ಸ್ವಾರ್ಥ ಮತ್ತು ಪ್ರತೀಕಾರದ ಭಾವನೆಗಳು ಮೂಡಬಹುದು. ಅವುಗಳನ್ನು ವಿವೇಕದಿಂದ ನಿಯಂತ್ರಿಸುವುದೇ ನಮ್ಮೊಳಗಿನ ಕೆಡುಕಿನ ವಿರುದ್ಧದ ಹೋರಾಟವಾಗಿದೆ. ತಪ್ಪನ್ನು ಒಪ್ಪಿಕೊಳ್ಳುವ ಪ್ರಾಮಾಣಿಕತೆ, ಇತರರ ನೋವನ್ನು ಅರ್ಥಮಾಡಿಕೊಳ್ಳುವ ಕರುಣೆ ಮತ್ತು ಅಧಿಕಾರವನ್ನು ನ್ಯಾಯಯುತವಾಗಿ ಬಳಸುವ ಮನೋಭಾವವೇ ವ್ಯಕ್ತಿತ್ವದ ನಿಜವಾದ ಶಕ್ತಿ. ಸಮಾಜದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಬಡವರ ಶೋಷಣೆ, ಜಾತಿ-ಧರ್ಮದ ಹೆಸರಿನ ದ್ವೇಷ ಮತ್ತು ಭ್ರಷ್ಟಾಚಾರದಂತಹ ಅನ್ಯಾಯಗಳನ್ನು ಎದುರಿಸುವುದೂ ಇದೇ ಹೋರಾಟದ ಭಾಗವಾಗಿದೆ. ಅನ್ಯಾಯವನ್ನು ಪ್ರಶ್ನಿಸುವ ಧೈರ್ಯ ಮತ್ತು ಸತ್ಯದ ಪರವಾಗಿ ನಿಲ್ಲುವ ಮನೋಭಾವ ಪ್ರತಿಯೊಬ್ಬ ನಾಗರಿಕನಲ್ಲೂ ಬೆಳೆಯಬೇಕು. ಒಳಿತಿನ ವಿಜಯ ನಮ್ಮ ಸಂಕಲ್ಪವಾಗಲಿ : ಮಹಿಷಾಸುರನ ಮೇಲೆ ಚಾಮುಂಡೇಶ್ವರಿಯ ವಿಜಯವು ಕಾಲಾತೀತ ಸಂದೇಶವನ್ನು ಸಾರುತ್ತದೆ. ಕೆಡುಕು ಎಷ್ಟೇ ಬಲಶಾಲಿಯಾಗಿದ್ದರೂ, ಧರ್ಮ ಮತ್ತು ನ್ಯಾಯದ ಪರವಾಗಿ ಸಂಘಟಿತವಾಗಿ ನಿಂತಾಗ ಅದನ್ನು ಎದುರಿಸಲು ಸಾಧ್ಯವಿದೆ. ಈ ವಿಜಯದ ಸಂದೇಶವನ್ನು ಹಬ್ಬದ ಸಂಭ್ರಮಕ್ಕೆ ಮಾತ್ರ ಸೀಮಿತಗೊಳಿಸದೆ, ನಮ್ಮ ದೈನಂದಿನ ಜೀವನದ ಭಾಗವಾಗಿಸಿಕೊಳ್ಳಬೇಕು. ಮಹಿಷಾಸುರನ ಸಂಹಾರ ಪುರಾಣದ ಕಥೆಯಾಗಿರಬಹುದು; ಆದರೆ ನಮ್ಮೊಳಗಿನ ಅಹಂಕಾರ, ದುರಾಸೆ ಮತ್ತು ದ್ವೇಷವನ್ನು ಸಂಹರಿಸುವುದು ಇಂದಿನ ಬದುಕಿನ ಅಗತ್ಯವಾಗಿದೆ. ಚಾಮುಂಡೇಶ್ವರಿಯ ಶಕ್ತಿ ನಮ್ಮಲ್ಲಿ ಧೈರ್ಯವನ್ನು ತುಂಬಲಿ, ಆಕೆಯ ವಿಜಯ ನಮ್ಮಲ್ಲಿ ನ್ಯಾಯಪ್ರಜ್ಞೆಯನ್ನು ಬೆಳೆಸಲಿ. ಒಳಿತಿನ ಪರವಾಗಿ ನಿಲ್ಲುವ ಪ್ರತಿಯೊಂದು ಮನಸ್ಸಿನಲ್ಲೂ ಚಾಮುಂಡೇಶ್ವರಿಯ ಸಂದೇಶ ಜೀವಂತವಾಗಿರಲಿ.

# ರಾಮಾಯಣ



18. ರಾಮ-ಲಕ್ಷ್ಮಣರನು? ಇಂದಜಿತುವು ಸರ್ಪಾಸದಿಂದ ಕಿ ಹ ಈ ಕಟ್ಟಹಾಕುವುದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಅದನ್ನು ಕೇಳಿದ ದ್ಯುಮಣಿಸುತನು, ''ಸಮುದ್ರವನ್ನು ದಾಟಿ, ಪರ್ವತದ ಮೇಲೆ ಹೋಗಿ ಬೇಗನೇ ಔಷಧಿಗಳನ್ನು ತಂದರೂ ಅಷ್ಟರಲ್ಲಿಯೇ ಮರಳಿ ದಾನವರು ಬಂದರೇನು ಗತಿ' ಎಂದು ಚಿಂತಿಸಿದ.ಆ ಹೊತ್ತಿಗೆ ಸಪ್ತಸಾಗರಗಳು ತುಳುಕಾಡಿದುವು, ಆಕಾಶದಲ್ಲಿ ಮಿಂಚಿನ ಗೊಂಚಲುಗಳು ಹೊಳೆದುವು, ಬೆಟ್ಟಗಳೆಲ್ಲ ಬಳುಕಿ ಬಾಗಿ ಬುಡಮೇಲಾದುವು, ಭೂಮಿಯು ಕಂಪಿಸಿತು, ಕಳವಳಿಸುತ್ತ ಬ್ರಹ್ಮಾಂಡಗಳೆಲ್ಲ ಪರಸ್ಪರ ಡಿಕ್ಕಿ ಹೊಡೆಯುತ್ತ ನೀರಧಿಗೆ ಬೀಳಲಾರಂಭಿಸಿದುವು, ಮಹಾ ಜಂಝಾವಾತವು ಬೀಸಲಾರಂಭಿಸಿತು; ಎಲ್ಲಕ್ಕೂ ರೆಕ್ಕೆಗಳು ಮೂಡಿದುವೋ ಎಂಬಂತೆ ಹೋಗಿ ಶರಧಿಯಲ್ಲಿ ಬೀಳಲಾರಂಭಿಸಿದವು! ಕಪಿವರರೆಲ್ಲರೂ ಬೆಕ್ಕಸ ಬೆರಗಾಗಿ ದಿಕ್ಕುದಿಕ್ಕುಗಳನ್ನೂ ನೋಡುತ್ತಲಿರಲು ಚಂದ್ರನಂತಹ ಮುಖದಿಂದ ಕೂಡಿ ಸರ್ವಾಂಗಸುಂದರನಾಗಿ ಕೈಯಲ್ಲಿ ಅಮೃತಕಳಸವನ್ನು ಹಿಡಿದ ಮೂರ್ತಿಯೊಂದು ಕಾಣಿಸಿಕೊಂಡಿತು! ಅವನನ್ನು ವಿನತಾಪುತ್ರನಾದ ಗರುಡನೆಂಬುದನ್ನು ಗುರುತಿಸಿದ ಕಪಿವರರು ಜಯಕಾರ ಮಾಡಿದರು. ಗರುಡನನ್ನು ಕಂಡ ತಕ್ಷಣವೇ ಹಾವುಗಳೆಲ್ಲ ಸರಸರನೆ ಹರಿದುಹೋಗಿ ಸಮುದ್ರದಲ್ಲಿ ಬೀಳತೊಡಗಿದುವು. ಅವುಗಳ ಜೊತೆಗೆ, ಇನವಂಶಸಂಭೂತರಾದ ರಾಮಲಕ್ಷ್ಮಣರನ್ನು ಬಂಧಿಸಿದ್ದ ನಾಗಗಳು ಸಡಿಲಗೊಂಡು ಓಡಿಹೋದುವು! ಅಷ್ಟರಲ್ಲಿ ಗರುಡನು ರಾಮಲಕ್ಷ್ಮಣರ ಬಳಿ ಬಂದು ವಿನಯದಿಂದ ನಮಸ್ಕರಿಸಿ ಅವರ ಕೈಗಳನ್ನು ನೇವರಿಸಿದ; ತಕ್ಷಣವೇ ಅವರ ಮೈಯಲ್ಲಿದ್ದ ಗಾಯಗಳೆಲ್ಲ ಮಾಯವಾಗಿ ಎಂದಿನ ಸುಂದರಾಕಾರವನ್ನು ಹೊಂದಿದರು; ಮೊದಲಿಗಿಂತ ಹೆಚ್ಚಿನ ಕಾಂತಿ ವೀರ್ಯ ಬಲಗಳು ಪ್ರಾಪ್ತವಾದುವು! ಅವರನ್ನು ಕೈಹಿಡಿದೆತ್ತಿದ ವಿನತಾಪುತ್ರನು ಕಾಕುತ್ಸ್ಥ ರಾಜಪುತ್ರರನ್ನು ಆಲಂಗಿಸಿಕೊಂಡ; ಆಗ ಶ್ರೀರಾಮನು, ''ಸದಯನೇ, ನಿನ್ನ ಕೃಪೆಯಿಂದ ಅಸುರನಿಂದಾದ ತೊಂದರೆಗಳಲ್ಲ ಕೊನೆಗೊಂಡುವು; ನಮ್ಮ ಎಂದಿನ ಬಲ ಪರಾಕ್ರಮಗಳನ್ನು ನಾವು ಮತ್ತೆ ಗಳಿಸಿದೆವು. ಮಹಾತ್ಮ ನೀನು ತಂದೆಯಾದ ದಶರಥನಿಗಿಂತ ಮಿಗಿಲಾದವನೆನಿಸುತ್ತದೆ, ತಾತ ಅಜನಿಗಿಂತ ಅಧಿಕನೆನಿಸುತ್ತದೆ; ದಿವ್ಯಾಂಬರವಿಭೂಷಣನೂ, ದಿವ್ಯಾನುಲೇಪವನ್ನು ಹೊಂದಿದವನೂ, ಕರುಣಾಸದನನೂ, ಭೂತಾನುಕಂಪಿಯೂ ಆದ ನೀನು ಯಾರು) ನಿನ್ನ ಹೆಸರೇನು? ಇಲ್ಲಿಗೆ ಬಂದುದೇತಕ್ಕೆ?'' ಎಂದು ಪ್ರೀತಿಗೌರವಗಳಿಂದ ವಿಚಾರಿಸಿದ. ಆಗ ವಿನತಾಪುತ್ರನು, ''ದೇವ, ನೀನು ಮನುಷ್ಯಸಹಜವಾದ ರೀತಿಯಲ್ಲಿ ವಿಚಾರಿಸಿದರೆ ನಾನೂ ಅದೇ ಧಾಟಿಯಲ್ಲಿ ಉತ್ತರಿಸುತ್ತೇನೆ: ನಾನು ವಿನತಾತನಯನಾದ ಗರುಡ, ರಾವಣಿಯು ನಿಮ್ಮಿಬ್ಬರನ್ನೂ ಉರಗಬಂಧದಿಂದ ಕಟ್ಟಿಹಾಕಿದ್ದ; ದೇವಾಸುರರಿಂದಾಗಲೀ ಅಸ್ತ್ರಗಳಿಂದಾಗಲೀ' ದನ್ನು ಬಿಡಿಸಲಸಾಧ್ಯವಾದುದರಿಂದ ನಾನು ಬಂದೆ, ನಿನ್ನ ಪಾವನಚರಣಗಳನ್ನು ಕರಡು: ಪುನೀತನಾದೆ. 'ಜರಡಾನದ ಬಲದಿಂದಾಗಿ ರಾವಣಿಯರ ತನ್ನ ಶೂಯಾಬಲದ ಅಸ ಸ್ತಗಳ ರೂಪದಲ್ಲಿ ಉರಗಗಳಿಂದ ನಿಮ್ಮನ್ನು ಕಟ್ಟಿಹಾಕಿದ್ದ. ಮತ್ತಾರಿಂದಲೂ ಈ ಉರುಪೆಯು ಮತ್ತೆ ನಿಮ್ಮನ್ನು ತಾಕದು. ನಿಮ್ಮ ಬಂಧನವು ಬಿಚಿದೆ, ಇನ್ನು ಮೇಲೆ ನೀನು ಎಚ್ಚರದಿಂದಿದ್ದು ತಾತೀಗಳಾದ ಅಸುರಯೋನಿಜರನ್ನು ಸಂಹರಿಸಿ ಗೋದ್ವಿಜರನ್ನು ಕಾಪಾಡು'' ಎಂದು ಖಗಪತಿಯು ನುಡಿದ. ''ಪಂಕಿಶಿರನು ನಿಮ್ಮನ್ನು ತನ್ನ ಸಾಮರ್ಥ್ಯದಿಂದ ಎದುರಾಗುತ್ತಾನೆ, ಅವನು ಯಮಪುರಿಯನ್ನು ಸೇರಿ ಜಯವು ನಿಮ್ಮದಾಗುತ್ತದೆ. ಆನಂತರ ನೀನು ಧರಣಿಸುತೆಯ ಜೊತೆಯಲ್ಲಿ ಸಂತೋಷದಿಂದ ನಿಡುಗಾಲ ನಿನ್ನ ನಗರದಲ್ಲಿ ರಾಜ್ಯಭಾರ ಮಾಡುವೆ'' ಎಂದು ಶ್ರೀಕಾಂತನನ್ನು ಎಚ್ಚರಿಸಿ ಪೊಡಮಟ್ಟು ಜಟಟ ಅಪ್ಪಣೆಯನ್ನು ಪಡೆದು ಆಕಾಶಮಾರ್ಗದಲ್ಲಿ ಹೊರ ಟ್ಟು ಹೋದ ಆ ಕಡೆ ವಿನತಾತನಯನು ಹೊರಟು ಹೋಗಲು, ಈ ಕಡೆ ಕಪಿವೃಂದವು ಹರ್ಷೋಲ್ಲಾಸಗಳಿಂದ ಮೇಲೆದ್ದು ಬೆಟ್ಟಗಳನ್ನೂ ಮರಗಳನ್ನೂ ಹಿಡಿದುಕೊಂಡು, ಅಂಬುಧಿಯು ಮೇರೆದಪ್ಪಿದ ಬಗೆಯಲ್ಲಿ ಕೇಕೆಹಾಕಿ ಕಹಗಾಥ ಗದ್ದಲವೆಬ್ಬಿಸುತ್ತ ಆ ಕಗ್ಗತ್ತಲ ರಾತ್ರಿಯಲ್ಲಿಯೇ ಬಂದು ದೈತ್ಯಸೈನ್ಯವನ್ನು ಹಿಡಿದು ಬಡಿದು ಆರ್ಭಟಿಸತೊಡಗಿದರು. ಅವರ ಶೌರ್ಯವು ಮುನ. ಎಚ್ಚರಿನಿಂದ ಇಮ್ಮಡಿಸಿತ್ತು. ಈ ರೀತಿ ಶಂಕರನು ಆ ಪ್ರಸಂಗವನ್ನು ವರ್ಣಿಸಲು ಗಿರಿಜೆಯು ಕೇಳಿ ವಿಸ್ಮಿತಳಾಗಿ. ಈ ಕಾಳೋರಗದ ಬಾಧೆಯು ಪರಬೊಮ್ಮನಿಗೆ ಹೇಗಾಯಿತು? ಈ ಅದ್ಭುತವನ್ನು ಎವರಿಸು'' ಎಂದು ಕೇಳಿದಳು. .ಆಗ ಹರನು ಆ ಪೂರ್ವವೃತ್ತಾಂತವನ್ನು ವಿವರಿಸಿ ಹೇಳಿದ: ''ಇಂದ್ರಜಿತುವು ಕಾಳಗದಲ್ಲಿ ಮೆಚ್ಚಿಸಿ ವರವ ಪಡೆದು ಪ್ರಯೋಗಿಸಿದಾಗ, ನಾಗನು ಬಂದು ತಾನು ಅಣ್ಣತಮ್ಮಂದಿರನ್ನು ಬಂಧಿಸಲೇಬೇಕೆಂದು ಹೇಳಿ ಬಂಧನವನ್ನು ಮಾಡಲು ನಿರಾಳತೆಯಿಂದ ಅದನ್ನು ಅಂಗೀಕರಿಸಿ ತನ್ನ ಮನಸಿನಲ್ಲಿಯೇ ಭಾಳನೇತ್ರನ ಸಖನು ವಿನತಾತ್ಮಸಂಭೂತನನ್ನು ನೆನೆಸಿಕೊಂಡ.


ಮುಂದುವರೆಯುವುದು


# ಕಾಂತಿಯುತ ತ್ವಚೆಗಾಗಿ ತ್ವರಿತ ಪರಿಹಾರ ಅವಲಂಬಿಸುವುದು ಆರೋಗ್ಯಕ್ಕೆ ಅಪಾಯಕಾರಿಯೇ? ತಜ್ಞರು ನೀಡುವ ಸಲಹೆಗಳೇನು?

ಹಬ್ಬಗಳು, ಮದುವೆ ಸಮಾರಂಭಗಳ ಸಂದರ್ಭದಲ್ಲಿ ಪ್ರತಿಯೊಬ್ಬರೂ ಸುಂದರವಾಗಿ ಹಾಗೂ ಆಕರ್ಷಕವಾಗಿ ಕಾಣಲು ಬಯಸುತ್ತಾರೆ. ಇದರಿಂದ ತ್ವರಿತ ಪರಿಹಾರ ನೀಡುವ ಸೌಂದರ್ಯ ವರ್ಧಕ ಚಿಕಿತ್ಸೆಗಳಾದ ತ್ವಚೆಯ ಬಣ್ಣವನ್ನು ಬೆಳ್ಳಗಾಗಿಸುವ ವಿಧಾನಗಳು, ಕೆಮಿಕಲ್ ಪೀಲ್‌ಗಳು, ಕೇಶ ವಿನ್ಯಾಸವನ್ನು ನೇರಗೊಳಿಸುವುದು, ಅತಿಯಾದ ಮೇಕಪ್ ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಐವಿ ಡ್ರಿಪ್ಸ್ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಈ ಎಲ್ಲಾ ವಿಧಾನಗಳು ತಕ್ಷಣದ ಹೊಳಪನ್ನು ನೀಡಬಹುದಾದರೂ ಇವುಗಳ ಸುರಕ್ಷತೆ ಹಾಗೂ ಇದರಿಂದ ಉಂಟಾಗಬಹುದಾದ ಅಪಾಯಗಳ ಬಗ್ಗೆ ತಿಳಿದುಕೊಳ್ಳುವುದು ಅತ್ಯಗತ್ಯ. ಇಂತಹ ಸೌಂದರ್ಯ ಚಿಕಿತ್ಸೆಗಳು ಎಷ್ಟು ಸುರಕ್ಷಿತ ಹಾಗೂ ಇವು ನಮ್ಮ ದೇಹಕ್ಕೆ ದೀರ್ಘಕಾಲೀನವಾಗಿ ಯಾವ ರೀತಿಯ ಹಾನಿಯನ್ನು ಉಂಟುಮಾಡಬಹುದು ಎಂಬುದನ್ನು ಇಲ್ಲಿ ವಿವರವಾಗಿ ಅರಿತುಕೊಳ್ಳೋಣ. ವಡೋದರದ ಭೈಲಾಲ್ ಅಮೀನ್ ಜನರಲ್ ಆಸ್ಪತ್ರೆಯ ಆಂಕೊಪ್ಲಾಸ್ಟಿಕ್ ಸರ್ಜನ್ ಡಾ. ಹೇತಾಂಶು ಪಾರಿಖ್ ಅವರು ಮಾತನಾಡಿ, ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡುವ ಕೆಲಸ ಮಾಡುವಾಗ ಒಂದು ಪ್ರಮುಖ ಪ್ರಶ್ನೆಯನ್ನು ಎತ್ತುತ್ತಾರೆ. ಸೌಂದರ್ಯವನ್ನು ಪಡೆಯುವ ಭರದಲ್ಲಿ ನಾವು ನಮ್ಮ ಆರೋಗ್ಯವನ್ನು ಎಷ್ಟು ಮಟ್ಟಿಗೆ ಪಣಕ್ಕಿಡುತ್ತಿದ್ದೇವೆ?, ಕೇಶ ವಿನ್ಯಾಸವನ್ನು ನೇರಗೊಳಿಸುವ ರಾಸಾಯನಿಕಗಳು ಮತ್ತು ತ್ವಚೆಯನ್ನು ಬೆಳ್ಳಗಾಗಿಸುವ ಕ್ರೀಮ್‌ಗಳಂತಹ ಅನೇಕ ಸೌಂದರ್ಯ ವರ್ಧಕ ಉತ್ಪನ್ನಗಳಲ್ಲಿ ಪ್ಯಾರಾಬೆನ್‌ಗಳು, ಸಲ್ಫೇಟ್‌ಗಳು, ಫಾರ್ಮಾಲ್ಡಿಹೈಡ್, ಭಾರವಾದ ಲೋಹಗಳಂತಹ ಪದಾರ್ಥಗಳು ಇರುತ್ತವೆ. ಇವುಗಳನ್ನು ದೀರ್ಘಕಾಲದವರೆಗೆ ಬಳಸುವುದರಿಂದ ಕ್ಯಾನ್ಸರ್ ಬರುವ ಅಪಾಯ ಹೆಚ್ಚಾಗಬಹುದು. ಸೌಂದರ್ಯಕ್ಕಾಗಿ ನಡೆಯುವ ಈ ಕುರುಡು ಓಟದಲ್ಲಿ ಜನರು ಉತ್ಪನ್ನಗಳ ಸುರಕ್ಷತಾ ಮಾನದಂಡಗಳನ್ನು ಪರಿಶೀಲಿಸದೆಯೇ ಅವುಗಳನ್ನು ಬಳಸುತ್ತಾರೆ. ಇದು ಅವರ ಆರೋಗ್ಯಕ್ಕೆ ಅಪಾಯಕಾರಿಯಾಗಬಹುದು ಎಂದು ಎಚ್ಚರಿಕೆ ನೀಡುತ್ತಾರೆ.

ಡಾ.ಹೇತಾಂಶು ಪಾರಿಖ್ ಅವರು ತಿಳಿಸುವ ಪ್ರಕಾರ, ಮೇಕಪ್ ಮಾಡಿಕೊಳ್ಳುವುದು, ಸಲೂನ್‌ಗೆ ಭೇಟಿ ನೀಡುವುದು ಇಲ್ಲವೇ ಸೌಂದರ್ಯ ಚಿಕಿತ್ಸೆಗಳನ್ನು ಪಡೆಯುವುದರಲ್ಲಿ ಯಾವುದೇ ತಪ್ಪಿಲ್ಲ, ಆದರೆ, ನಾವು ಪಡೆಯುವ ಚಿಕಿತ್ಸೆಗಳು ಮತ್ತು ಬಳಸುವ ಉತ್ಪನ್ನಗಳ ಬಗ್ಗೆ ನಮಗೆ ಸಂಪೂರ್ಣ ಮಾಹಿತಿ ಇದೆಯೇ? ಹಾಗೂ ಇವುಗಳಿಂದ ಉಂಟಾಗಬಹುದಾದ ಅಪಾಯಗಳ ಬಗ್ಗೆ ನಮಗೆ ಅರಿವಿದೆಯೇ? ಎಂಬುದು ಮುಖ್ಯ ಪ್ರಶ್ನೆ ಕಾಡುತ್ತದೆ. ಉದಾಹರಣೆಗೆ, ಕೇಶ ವಿನ್ಯಾಸವನ್ನು ನೇರಗೊಳಿಸುವ ಕೆಲವು ಉತ್ಪನ್ನಗಳು 'ಫಾರ್ಮಾಲ್ಡಿಹೈಡ್' ಎಂಬ ವಸ್ತುವನ್ನು ಬಿಡುಗಡೆ ಮಾಡುತ್ತವೆ. ಇದು ಕ್ಯಾನ್ಸರ್‌ಕಾರಕ ಎಂದು ಗುರುತಿಸಲ್ಪಟ್ಟಿದೆ. ಇದು ಕ್ಯಾನ್ಸರ್



ಗೆ ಕಾರಣವಾಗಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಈ ರಾಸಾಯನಿಕದೊಂದಿಗೆ ಪದೇ ಪದೇ ಸಂಪರ್ಕಕ್ಕೆ ಬರುವುದರಿಂದ ತಲೆನೋವು, ಅಸ್ತಮಾ ಹಾಗೂ ಚರ್ಮದ ಕಿರಿಕಿರಿಯಂತಹ ಸಮಸ್ಯೆಗಳು ಉಂಟಾಗಬಹುದು. ಇದಲ್ಲದೆ, ಕೆಲವು ಸಂದರ್ಭಗಳಲ್ಲಿ, ಇದು ಕ್ಯಾನ್ಸರ್ ಬರುವ ಅಪಾಯವನ್ನೂ ಹೆಚ್ಚಿಸಬಹುದು. ಕೆಲವು ತ್ವಚೆ ಆರೈಕೆ ಉತ್ಪನ್ನಗಳು ಹಾನಿಕಾರಕ ಅಂಶಗಳನ್ನು ಹಾಗೂ ಕಲ್ಮಶಗಳನ್ನು ಹೊಂದಿರಬಹುದು. ಉದಾಹರಣೆಗೆ, ಕ್ಯಾನ್ಸರ್ ಉಂಟುಮಾಡುವ ವಸ್ತುವೆಂದು ಗುರುತಿಸಲ್ಪಟ್ಟ 'ಬೆಂಜೀನ್' ಇದು ತ್ವಚೆ, ಒಟ್ಟಾರೆ ಆರೋಗ್ಯ ಎರಡಕ್ಕೂ ಅತ್ಯಂತ ಅಪಾಯಕಾರಿ ಎಂದು ಪರಿಗಣಿಸಲಾಗಿದೆ. ಬೆಂಜೀನ್ ಅನ್ನು ವಿವಿಧ ಸೌಂದರ್ಯವರ್ಧಕ ಉತ್ಪನ್ನಗಳಲ್ಲಿ ಬಳಸಲಾಗುತ್ತದೆ. ಅಂತೆಯೇ, ಉತ್ಪನ್ನಗಳ ಬಾಳಿಕೆ ಅವಧಿ ಹೆಚ್ಚಿಸಲು ಸಂರಕ್ಷಕಗಳಾಗಿ ಬಳಸಲಾಗುವ 'ಪ್ಯಾರಾಬೆನ್‌ಗಳು'ದೇಹದಲ್ಲಿ ಹಾರ್ಮೋನುಗಳಂತೆ ವರ್ತಿಸಿ, ಅಂತಃಸ್ರಾವಕ ವ್ಯವಸ್ಥೆಯ ಕಾರ್ಯನಿರ್ವಹಣೆಗೆ ಅಡ್ಡಿಪಡಿಸಬಹುದು ಎಂದು ತಿಳಿಸುತ್ತಾರೆ. ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ತಡೆಯಲು ಸೌಂದರ್ಯವರ್ಧಕಗಳು, ವೈಯಕ್ತಿಕ ಆರೈಕೆ ಉತ್ಪನ್ನಗಳು, ಮನೆಯಲ್ಲಿ ಬಳಸುವ ವಿವಿಧ ವಸ್ತುಗಳಲ್ಲಿ 'ಫಾರ್ಮಾಲ್ಡಿಹೈಡ್' ಇಲ್ಲವೇ ಫಾರ್ಮಾಲ್ಡಿಹೈಡ್ ಅನ್ನು ಬಿಡುಗಡೆ ಮಾಡುವ ಸಂರಕ್ಷಕಗಳನ್ನು ಬಳಸಲಾಗುತ್ತದೆ. ಆದರೆ, ಇವು ತ್ವಚೆಗೆ ಹಾಗೂ ವ್ಯಕ್ತಿಯ ಒಟ್ಟಾರೆ ಆರೋಗ್ಯಕ್ಕೆ ಸಾಕಷ್ಟು ಹಾನಿಕಾರಕವಾಗಬಹುದು. ಇಂತಹ ವಸ್ತುಗಳು ತ್ವಚೆಯಲ್ಲಿ ಕಿರಿಕಿರಿ ಹಾಗೂ ಅಲರ್ಜಿಗಳನ್ನು ಉಂಟುಮಾಡಬಹುದು. ಕೃತಕ ಸುಗಂಧ ದ್ರವ್ಯಗಳು ಕೂಡ ತ್ವಚೆಯ ಅಲರ್ಜಿ, ಉರಿಯೂತ, ತಲೆನೋವು ಅಥವಾ ಆಸ್ತಮಾದಂತಹ ಸಮಸ್ಯೆಗಳಿಗೆ ಕಾರಣವಾಗಬಹುದು. ಇಂತಹ ಘಟಕಾಂಶಗಳ ಉಪಸ್ಥಿತಿ, ಅವುಗಳಿಂದ ಉಂಟಾಗುವ ಅಪಾಯಗಳ ಬಗ್ಗೆ ಅರಿವು ಹೊಂದಿರುವುದು ಮುಖ್ಯ. ಇವುಗಳನ್ನು ಒಳಗೊಂಡಿರುವ ಎಲ್ಲಾ ಉತ್ಪನ್ನಗಳು ಒಂದೇ ಮಟ್ಟದ ಅಪಾಯವನ್ನು ಹೊಂದಿರುವುದಿಲ್ಲ ಎಂಬುದನ್ನು ಗಮನಿಸಬೇಕು.ನಾವು ಉಗುರು ಬಣ್ಣ, ಸುಗಂಧ ದ್ರವ್ಯಗಳು, ಕ್ರೀಮ್‌ಗಳು, ಲೋಷನ್‌ಗಳು ಮತ್ತು ಡಿಯೋಡರೆಂಟ್‌ಗಳಂತಹ ದೈನಂದಿನ ಬಳಕೆಯ ವಸ್ತುಗಳ ಬಗ್ಗೆಯೂ ಗಮನ ಹರಿಸಬೇಕು.

# ಕಿಡ್ನಿ ಸ್ಟೋನ್ಸ್ ಉಂಟಾಗಲು ಮೂಲ ಕಾರಣಗಳೇನು? ಆಹಾರ ಕ್ರಮ ಹೇಗಿರಬೇಕು ತಡೆಯಲು ವೈದ್ಯರ ಸರಳ ಸಲಹೆಗಳೇನು?

ಪ್ರತಿನಿತ್ಯ ಸಾಕಷ್ಟು ನೀರು ಕುಡಿಯುವುದರಿಂದ ಕಿಡ್ನಿ ಸ್ಟೋನ್ಸ್ ಉಂಟಾಗುವ ಪ್ರಕ್ರಿಯೆಯನ್ನು ಸ್ವಲ್ಪ ತಡೆಯುತ್ತದೆ ಸಹಾಯವಾಗುತ್ತದೆ. ಕೇವಲ ಸಾಕಷ್ಟು ನೀರು ಕುಡಿಯುವುದು ಒಂದೇ ಪರಿಹಾರವಾಗುವುದಿಲ್ಲ. ಮೂತ್ರದಲ್ಲಿ ಕೆಲವು ನಿರ್ದಿಷ್ಟ ಪದಾರ್ಥಗಳ ಸಾಂದ್ರತೆಯು ಹೆಚ್ಚಾದಾಗ ಇವು ಸಣ್ಣ ಹರಳುಗಳಾಗಿ ರೂಪುಗೊಳ್ಳಲು ಪ್ರಾರಂಭಿಸುತ್ತವೆ. ಸಮಯ ಕಳೆದಂತೆ ಈ ಹರಳುಗಳು ಒಂದಕ್ಕೊಂದು ಸೇರಿ ದೊಡ್ಡದಾಗುತ್ತವೆ, ಇದರೊಂದಿಗೆ ಗಟ್ಟಿಯಾದ ರೂಪ ಪಡೆಯುತ್ತವೆ. ಇವುಗಳನ್ನೇ ಕಿಡ್ನಿ ಸ್ಟೋನ್ಸ್ ಎಂದು ಕರೆಯುತ್ತೇವೆ. ಮನುಷ್ಯನಲ್ಲಿ ಕಂಡುಬರುವ ಕಿಡ್ನಿ ಸ್ಟೋನ್ಸ್ 'ಕ್ಯಾಲ್ಸಿಯಂ ಆಕ್ಸಲೇಟ್ ಸ್ಟೋನ್ಸ್' ಅತ್ಯಂತ ಸಾಮಾನ್ಯವಾಗಿದೆ. ಇವುಗಳ ರಚನೆಗೆ ಪ್ರಮುಖವಾಗಿ ವ್ಯಕ್ತಿಯ ಆಹಾರ ಪದ್ಧತಿ, ಮೂತ್ರದಲ್ಲಿನ ರಾಸಾಯನಿಕ ಸಮತೋಲನ, ಅನುವಂಶೀಯತೆ, ದೇಹದಲ್ಲಿನ ನೀರಿನ ಮಟ್ಟ ಸೇರಿದಂತೆ ವಿವಿಧ ಅಂಶಗಳು ಪ್ರಮುಖವಾಗಿದೆ. ಆಕ್ಸಲೇಟ್ ಎಂಬುದು ಅನೇಕ ಸಸ್ಯಜನ್ಯ ಆಹಾರಗಳಲ್ಲಿ ನೈಸರ್ಗಿಕವಾಗಿ ಕಂಡುಬರುವಂತಹ ಸಂಯುಕ್ತವಾಗಿದೆ. ಪಾಲಕ್ ಸೊಪ್ಪು, ಬೀಟ್‌ರೂಟ್ ಹಾಗೂ ಕೆಲವು ಪ್ರಕಾರದ ನಟ್ಸ್, ಚಾಕೊಲೇಟ್, ಚಹಾ, ಕೆಲವು ಸಸ್ಯಜನ್ಯ ಆಹಾರಗಳಲ್ಲಿ ಆಕ್ಸಲೇಟ್ ಪ್ರಮಾಣ ಅಧಿಕವಾಗಿರುತ್ತದೆ. ಇವುಗಳನ್ನು ನಿಯಮಿತ ಪ್ರಮಾಣಕ್ಕಿಂತ ಹೆಚ್ಚು ಸೇವಿಸುವುದರಿಂದ ಕಿಡ್ನಿ ಸ್ಟೋನ್ಸ್ ರಚನೆಯಾಗಬಹುದು. ಕೆಲವು ಜನರಲ್ಲಿ ಕಿಡ್ನಿ ಸ್ಟೋನ್ಸ್ ಉಂಟಾಗದೆ ಇರಬಹುದು ಎಂದು ವೈದ್ಯರು ತಿಳಿಸುತ್ತಾರೆ. ಹಲವು ಜನರು ತಾವು ಸೇವನೆ ಮಾಡುವಂತಹ ಆಹಾರದಲ್ಲಿ ಆಕ್ಸಲೇಟ್ ಇದೆ ಎನ್ನುವುದನ್ನು ತಿಳಿದ ತಕ್ಷಣವೇ ಪೌಷ್ಟಿಕ ಆಹಾರಗಳನ್ನು ಸೇವಿಸುವುದನ್ನೇ ನಿಲ್ಲಿಸಿಬಿಡುತ್ತಾರೆ. ಈ ರೀತಿ ಮಾಡುವುದರಿಂದ ದೇಹಕ್ಕೆ ಅಗತ್ಯವಾದ ಪೋಷಕಾಂಶಗಳು ಲಭಿಸುವುದಿಲ್ಲ. ಒಂದು ವೇಳೆ ನಿಮಗೆ ಪದೇ ಪದೇ 'ಕ್ಯಾಲ್ಸಿಯಂ ಆಕ್ಸಲೇಟ್ ಸ್ಟೋನ್ಸ್' ರಚನೆಯಾಗುತ್ತಿದ್ದರೆ, ಇಂತಹ ಆಹಾರಗಳನ್ನು ಸಂಪೂರ್ಣವಾಗಿ ತ್ಯಜಿಸುವ ಬದಲು ಇವುಗಳನ್ನು ಮಿತವಾಗಿ ಸೇವಿಸುವುದು ಒಳ್ಳೆಯದು. ಕ್ಯಾಲ್ಸಿಯಂ ಸೇವನೆಯನ್ನು ನಿಲ್ಲಿಸಿದರೆ ಕ್ಯಾಲ್ಸಿಯಂ ಆಕ್ಸಲೇಟ್ ಸ್ಟೋನ್ಸ್ ಉಂಟಾಗುವುದನ್ನು ತಡೆಯಬಹುದು ಎಂದು ಹಲವರು ಭಾವಿಸುತ್ತಾರೆ. ಇದರಿಂದ ವಿರುದ್ಧ ಪರಿಣಾಮ ಬೀರಬಹುದು. ನಮ್ಮ ಆಹಾರದ ಮೂಲಕ ಹಾಲು, ಮೊಸರು ಮತ್ತು ಇತರ ಹಾಲಿನ ಉತ್ಪನ್ನಗಳು ಸಾಕಷ್ಟು ಕ್ಯಾಲ್ಸಿಯಂ ಅನ್ನು ಸೇವಿಸಿದರೆ, ಈ ಕ್ಯಾಲ್ಸಿಯಂ ಕರುಳಿನಲ್ಲಿರುವ ಆಕ್ಸಲೇಟ್‌ನೊಂದಿಗೆ ಸೇರಿಕೊಳ್ಳುತ್ತದೆ ಹಾಗೂ ಇದನ್ನು ದೇಹದಿಂದ ಹೊರಹಾಕಲು ಸಹಾಯ ಮಾಡುತ್ತದೆ. ಆಕ್ಸಲೇಟ್ ಕಿಡ್ನಿ ತಲುಪದಂತೆ ತಡೆಯುತ್ತದೆ. ಇದಕ್ಕೆ ವಿರುದ್ಧವಾಗಿ ಆಹಾರದಲ್ಲಿ ಅನಗತ್ಯವಾಗಿ ಕ್ಯಾಲ್ಸಿಯಂ ಪ್ರಮಾಣ ಕಡಿಮೆ ಮಾಡಿದರೆ, ಕರುಳಿನಲ್ಲಿ ಆಕ್ಸಲೇಟ್ ಹೀರಿಕೊಳ್ಳುವಿಕೆ ಹೆಚ್ಚಾಗುತ್ತದೆ.

ಮುಂಬರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಸೇರಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ನಮ್ಮ ಪಕ್ಷದಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು

# ರೈತ ವಿರೋಧಿ ನೀತಿ ಖಂಡಿಸಿ ಅ.23ರಿಂದ ರಾಜ್ಯಾದ್ಯಂತ ಪ್ರತಿಭಟನೆ

**ಉದಯವಾಹಿನಿ, ಹುಬ್ಬಳ್ಳಿ**

ರಾಜ್ಯ ಸರ್ಕಾರವು ಬರ ಪರಿಸ್ಥಿತಿ ನಿರ್ವಹಿಸುವಲ್ಲಿ ವಿಫಲವಾಗಿದೆ. ರೈತ ವಿರೋಧಿ ನೀತಿ ಹಾಗೂ ರೈತರ ನಿರ್ಲಕ್ಷ್ಯವನ್ನು ಖಂಡಿಸಿ ಶಿವಸೇನಾ ಕರ್ನಾಟಕ ಪಕ್ಷದ ವತಿಯಿಂದ ಅ.23ರಂದು ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ತಿಳಿಸಿದರು.


ಉದಯವಾಹಿನಿ ಚಿತ್ರ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಅನಾವೃಷ್ಟಿಯಿಂದಾಗಿ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸರ್ಕಾರಗಳು ಬೆಳೆಹಾನಿ ಸಮೀಕ್ಷೆ ಸರಿಯಾಗಿ ನಡೆಸಿಲ್ಲ. ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್.ಎಫ್) ನಿಯಮಗಳ ಅನ್ವಯ ಬರ ಪರಿಹಾರ ಘೋಷಿಸಬೇಕು. ಆದರೆ, ರೈತರಿಗೆ ಎಕರೆಗೆ 22,500 ಬರ ಪರಿಹಾರ ಘೋಷಿಸಿರುವುದು ಖಂಡನೀಯ. ಎಕರೆಗೆ ಕನಿಷ್ಠ 125 ಸಾವಿರ ನೀಡಬೇಕು' ಎಂದು ಆಗ್ರಹಿಸಿದರು.

'ಪ್ರತಿ ಟನ್ ಕಬ್ಬಿಗೆ 25,500 ಕನಿಷ್ಠ ಬೆಂಬಲ ಬೆಲೆ ನಿಗದಿ, ಡಾ.ಎಂ.ಎಸ್.ಸ್ವಾಮಿನಾಥನ್ ಆಯೋಗದ ವರದಿ ಜಾರಿ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಹೆದ್ದಾರಿ ತಡೆ ಪ್ರತಿಭಟನೆಗೆ ನಮ್ಮ ಪಕ್ಷದ ಬೆಂಬಲವೂ ಇದೆ' ಎಂದರು.

'ಮುಂಬರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಸೇರಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ನಮ್ಮ ಪಕ್ಷದಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು' ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ ಕುಲಕರ್ಣಿ ತಿಳಿಸಿದರು.

**1.** ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ
**2.** ಬೆಳೆಹಾನಿ ಸಮೀಕ್ಷೆ ಸರಿಯಾಗಿ ನಡೆಸಿಲ್ಲ
**3.** ಪರಿಹಾರ ಘೋಷಿಸಿರುವುದು ಖಂಡನೀಯ

### ರೈತರ ಖಾತೆಗೆ ಜಮಾ ಆಗದ ಪರಿಹಾರ'

'ರಾಜ್ಯದಲ್ಲಿ ಶೇ 82ರಷ್ಟು ಬೆಳೆ ಹಾನಿಯಾಗಿದೆ. ರಾಜ್ಯ ಸರ್ಕಾರ 25 ಸಾವಿರ ಪರಿಹಾರ ನೀಡುವುದು ಬಿಟ್ಟು, ಕೇಂದ್ರದತ್ತ ಬೊಟ್ಟು ಮಾಡುತ್ತಿದೆ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು. 'ಬೆಂಗಳೂರಿಗೆ ಬಂದು ನೆಲಸಿದ ಹಲವು ಶಾಸಕರು ಎರಡು ಮದುವೆಯಾಗಿದ್ದಾರೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಅಂತಹ ಶಾಸಕರ ಪಟ್ಟಿಯನ್ನು ಕೂಡಲೇ ಅವರು ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಕ್ಷೇತ್ರದ ಜನ, ಅವರ ಕುಟುಂಬದ ಸದಸ್ಯರು ಅನುಮಾನದಿಂದ ನೋಡುತ್ತಾರೆ' ಎಂದರು.

**ರಾಜ್ಯದಲ್ಲಿ ತೀವ್ರ ಬರ ಇದ್ದು, ಸಂಕಷ್ಟದಲ್ಲಿರುವ ರೈತರಿಗೆ ಸ್ಪಂದಿಸಬೇಕಾದ ಸರ್ಕಾರ ಅಲ್ಪ ಪರಿಹಾರ ಘೋಷಿಸಿದೆ. ಅದು ಇನ್ನೂ ರೈತರ ಖಾತೆಗೆ ಜಮಾ ಆಗಿಲ್ಲ.**

**– ಛಲವಾದಿ ನಾರಾಯಣಸ್ವಾಮಿ,**
**ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ**

### ಸ್ವಾಮೀಜಿಗಳು ರಾಜಕಾರಣಿಗಳ ಏಜೆಂಟರಲ್ಲ

**ಸ್ವಾಮೀಜಿಗಳು ತಮ್ಮ ರಾಯಭಾರಿಗಳಾಗಿ ಕೆಲಸ ಮಾಡಬೇಕು. ಅದರಿಂದ ಮುಕ್ತಿ ಸಿಗುತ್ತದೆ ಎಂದು ಸಿ.ಎಂ ಹೇಳಿದ್ದಾರೆ. ಸ್ವಾಮೀಜಿಗಳು ರಾಜಕಾರಣಿಗಳ ಏಜೆಂಟರಲ್ಲ. ಈ ರೀತಿ ಕ್ಷುಲ್ಲಕವಾಗಿ ಮಾತುಡುವುದು ಸರಿಯಲ್ಲ. ಅವರಿಗೆ ಅಧಿಕಾರದ ಅಮಲು ತಲೆಗೆ ಏರಿದೆ' ಎಂದು ಹೇಳಿದರು.**

'ಎಸ್‌ಐಆರ್ ಪ್ರಕ್ರಿಯೆ ಸಂವಿಧಾನಾತ್ಮಕವಾಗಿ ನಡೆಯುತ್ತಿದೆ. ಕಾಂಗ್ರೆಸ್ ಹಾಗೂ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಕೇಂದ್ರ ಸರ್ಕಾರ ಹಾಗೂ ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಅನಗತ್ಯವಾಗಿ ಪ್ರತಿಭಟನೆ ನಡೆಸುತ್ತಿರುವುದು ಸರಿಯಲ್ಲ' ಎಂದು ಪಕ್ಷದ ರಾಜ್ಯ ವಕ್ತಾರ ಎಸ್.ಭಾಸ್ಕರನ್ ಹೇಳಿದರು.

ಪ್ರಮುಖರಾದ ರಾ.ಮು.ಸ್ವಾಮಿ, ಅಮರಾನಾಥ್, ಮಹಾಲಿಂಗಣ್ಣ ಗುಂಜಗಾವಿ, ವಿಜಯ ಪಾಟೀಲ, ಮಂಜುನಾಥ ಹಲಾವರ, ಭರತ್ ಸಾವಂತ, ಅಭಿನಂದನ್ ಇದ್ದರು.

## ಮಲ್ಲಣ್ಣ ದೇವರ ಪಲ್ಲಕ್ಕಿ ಉತ್ಸವ 20ರಂದು ಆಯೋಜನೆ

**ಉದಯವಾಹಿನಿ, ಬೀದರ್**

ವಿಜಯ ದಶಮಿ ಅಂಗವಾಗಿ ಭಾಲ್ಕಿ ತಾಲ್ಲೂಕಿನ ಖಾನಾಪುರದಲ್ಲಿ ಅಕ್ಟೋಬರ್ 20 ರಂದು ವೈಭವದ ಮಲ್ಲಣ್ಣ ದೇವರ ಪಲ್ಲಕ್ಕಿ ಉತ್ಸವ ಹಾಗೂ ರಥೋತ್ಸವ ನಡೆಯಲಿದೆ. ರಾತ್ರಿ 11.15ಕ್ಕೆ ಮಲ್ಲಣ್ಣ ದೇವಸ್ಥಾನದಿಂದ ಆರಂಭವಾಗುವ ಪಲ್ಲಕ್ಕಿ ಮೆರವಣಿಗೆಯು ಘತ್ತಮಾರಿ ತುಪ್ಪದ ಮಾಳವ್ವ (ಗುರತ್ ಮಲ್ಲಮ್ಮ) ದೇವಸ್ಥಾನ, ಮುಖ್ಯ ಬೀದಿಗಳ ಮೂಲಕ ಹಾಯ್ದು ಗ್ರಾಮದ ಹನುಮಾನ ಮಂದಿರಕ್ಕೆ ತಲುಪಿ ಸಮಾರೋಪಗೊಳ್ಳಲಿದೆ.


ಉದಯವಾಹಿನಿ ಚಿತ್ರ

ರಾತ್ರಿಯಿಡೀ ಡೊಳ್ಳು ಕುಣಿತ, ವಗ್ಗಯ್ಯ ಕುಣಿತ, ಕಾಟ ಕುಣಿತ ಮೊದಲಾದವು ಕಾರ್ಯಕ್ರಮದ ಮೆರುಗು ಹೆಚ್ಚಿಸಲಿವೆ. ಮಂದಿರದಲ್ಲಿ ವಿಶೇಷ ಪೂಜೆ, ಅಭಿಷೇಕ, ಪ್ರಸಾದ ವಿತರಣೆ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಕರ್ನಾಟಕ, ತೆಲಂಗಾಣ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದ ಸಾವಿರಾರು ಭಕ್ತರು ಪಾಲ್ಗೊಳ್ಳಲಿದ್ದಾರೆ. ರಥೋತ್ಸವವು ಅಕ್ಟೋಬರ್ 21 ರಂದು ಬೆಳಿಗ್ಗೆ 6.30ಕ್ಕೆ ಮಂದಿರದಲ್ಲಿ ಮಹಾಮಂಗಳಾರತಿಯೊಂದಿಗೆ ಕೊನೆಗೊಳ್ಳಲಿದೆ. ಭಕ್ತರು ಉತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಅನಂತರಾವ್ ಕುಲಕರ್ಣಿ ಕೋರಿದ್ದಾರೆ.

## ಪುರಾಣ, ಪ್ರವಚನ ಕೇಳುವುದರಿಂದ ಮನಸ್ಸಿಗೆ ನೆಮ್ಮದಿ

**ಉದಯವಾಹಿನಿ, ಯಲಬುರ್ಗಾ**

ಭಾರತೀಯ ಪರಂಪರೆಯಲ್ಲಿ ಮಹಿಳೆಯರಿಗೆ ಪೂಜ್ಯನೀಯ ಸ್ಥಾನವಿದ್ದು, ಪ್ರತಿಯೊಬ್ಬರೂ ಮಹಿಳೆಯರನ್ನು ಗೌರವದಿಂದ ಕಾಣಬೇಕು. ನವರಾತ್ರಿ ಉತ್ಸವದ ಆಚರಣೆಯಲ್ಲಿ ದುರಾಲೋಚನೆಗಳನ್ನು ಹೊಡೆದೊಡಿಸಿ ಪರಾಶಕ್ತಿಯಾದ ದೇವಿಯನ್ನುಪೂಜಿಸುವ ಮೂಲಕ ಪುನೀತರಾಗಬೇಕು ಎಂದು ಪುರಾಣ ಪ್ರವಚನಕಾರರು ವಿರೂಪಾಕ್ಷಯ್ಯ ಹೊನ್ನಿಗನೂರ ಆಶೀರ್ವಚನ ನೀಡಿದರು.

ತಾಲ್ಲೂಕಿನ ಮುಧೋಳ ಗ್ರಾಮದ ಶ್ರೀ ಹುಲಿಗೆಮ್ಮ ದೇವಿ ಟ್ರಸ್ಟ್ ಕಮಿಟಿ ಹಳ ಪೇಟೆ ದೇವಸ್ಥಾನದ ಸಭಾಮಂಟಪದಲ್ಲಿ ನವರಾತ್ರಿ ಉತ್ಸವದ ಪುರಾಣ ಪ್ರವಚನದಲ್ಲಿ ಮಾತನಾಡಿದ

ಈ ನವರಾತ್ರಿಯ ಸಂದರ್ಭದಲ್ಲಿ ಶ್ರೀ ಹುಲಿಗೆಮ್ಮ ದೇವಿಯು ದುಷ್ಟ ಶಕ್ತಿಗಳ ಸಂಹಾರ ಮಾಡಿ, ಶಿಷ್ಟರ ರಕ್ಷಣೆ ಮೂಲಕ ಧರ್ಮದ ವಿಜಯವನ್ನು ದಯಪಾಲಿಸುತ್ತಾಳೆ. ಈ ಹುಲಿಗೆಮ್ಮ ದೇವಿಯು ಮಹಾನ ಶಕ್ತಿ ದೇವತೆಯಾಗಿದ್ದಾಳೆ ಜಗನ್ಮಾತೆಯ ಕೃಪೆ ಎಲ್ಲರ ಮೇಲಿರಲಿ ಹಾಗೂ ಈ ಪವಿತ್ರ ನವರಾತ್ರಿಯ ದಿನಗಳು ಎಲ್ಲರಿಗೂ ಸುಖ, ಶಾಂತಿ, ಮತ್ತು ಸಮೃದ್ಧಿಯನ್ನು ತರಲಿ. ಜ್ಞಾನ ಪ್ರಸಾದ ಇಂತಹ ಆಧ್ಯಾತ್ಮದಲ್ಲಿ ದೇವರನ್ನು ಹುಡುಕುವ ಕೆಲಸವಾಗಬೇಕು. ಪ್ರತಿಯೊಬ್ಬರು ತಮ್ಮ ಕೆಲಸವನ್ನು


ಉದಯವಾಹಿನಿ ಚಿತ್ರ

ನಿಷ್ಠೆಯಿಂದ ಮಾಡಿದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದರು. ನವರಾತ್ರಿ ಪ್ರಯುಕ್ತ 9ನೇ ದಿನದ ಶ್ರೀ ಹುಲಿಗೆಮ್ಮ ದೇವಿಯ ಪುರಾಣದಲ್ಲಿ ಬರುವ ರಾಕ್ಷಸರ ಸಂಹಾರ ಕುರಿತು ಪ್ರವಚನ ಮಾಡಿದರು. ಸಂಗೀತ ಬಳಗದ ತಬಲಾವಾದಕರು ಹನುಮಂತ ಯರೇಹಂಚಿನಾಳ. ಬಸವರಾಜ್. ಹುಮಾ ಮಹೇಶ್ವರಿ ಎಸ್ ಹೂಗಾರ. ಹುಲಿಗೆಮ್ಮ ದೇವಿ ಪೂಜಾರ್ ಮುತ್ತಪ್ಪ ಪೂಜಾರ್.

ಹುಲಿಗೆಮ್ಮ ದೇವಿ ಸಮಿತಿ ಅಧ್ಯಕ್ಷರು ಹನುಮಪ್ಪ ಕುರಿ. ಶಿವಪ್ಪ ಸೂಡಿ. ರುದ್ರಪ್ಪ ಹುನಗುಂದ. ನಾಗಪ್ಪ ಓಲಿ. ಎಲ್ಲಪ್ಪ ಹುಂಬಿ. ದೇವಪ್ಪ ಕುರಿ. ಎಲ್ಲಪ್ಪ ಹುನಗುಂದ. ಕಳಕಪ್ಪ ತಮಿನಾಳ. ಶಿವಮೂರ್ತಯ್ಯ ಬೀಳಗಿ ಮಠ ವಿಠ್ಠಲ್ ಆರೇರ. ಶಿವರಾಜ್ ಅಡಗುಡಿ. ಆನಂದ ಕುರಿ. ಖಾದಿರಾಬಾಷಾ ತೋಳಗಲ್. ಮಾರುತಿ ಇಳಗೇರ್. ಇನ್ನೂ ಉಪಸ್ಥಿತರಿದ್ದರು.

## ಘೋರಿ(ಸಮಾದಿ)ನೆಲಸಮ: ಪ್ರಕರಣ ದಾಖಲು

**ಉದಯವಾಹಿನಿ, ಚಿಂಚೋಳಿ**

ಮತಕ್ಷೇತ್ರದ ಮೋಘಾ ಗ್ರಾಮದಲ್ಲಿ ಹಜರತ್ ಶೇಕ್ ಮಹ್ಮದ್ ಅಲಾವೋದ್ದೀನ್ ಶಾಹ ಖಾದ್ರಿ ಅವರ ಘೋರಿ (ಸಮಾದಿ) ನೆಲಸಮಗೊಳಿಸಿದ ಬಗ್ಗೆ ರಟಕಲ್ ಪೋಲಿಸ್ ಠಾಣೆಯಲ್ಲಿ ದೂರು ಸಲ್ಲಿಸಲಾಗಿದೆ ಎಂದು ಮಹ್ಮದ್ ಅಕ್ಬರ್ ಖಾದ್ರಿ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

ಮೋಘಾ ಗ್ರಾಮದ ಸರ್ವೆ ನಂ.301/1ರಲ್ಲಿ ಜಮೀನಿನಲ್ಲಿ ನಮ್ಮ ಕುಟುಂಬಸ್ಥರ ಘೋರಿ ಸಮಾದಿವಿದ್ದು 2011ರಿಂದ ಇಲ್ಲಿಯವರೆಗೆ 15ವರ್ಷಗಳಿಂದ ಸತತವಾಗಿ ಭಕ್ತಿಭಾವದಿಂದ ಉರುಸ್ ಮಾಡುತ್ತಾ ಗ್ರಾಮಸ್ಥರು ಕೂಡಿ ಪೂಜೆ ಮಾಡುತ್ತಾ ಬಂದಿರುತ್ತೇವೆ.

ಆದರೆ ಅಕ್ಟೋಬರ್ 07ರಂದು ಮೋಘಾ ಗ್ರಾಮದಲ್ಲಿ ಏಕಾಏಕಿ ಯಾವುದೇ ಮಾಹಿತಿ ನೀಡದೆ ಸಮಾದಿ ಘೋರಿ ನೆಲಸಮಗೊಳಿಸಿ ನಮ್ಮ ಭಾವನೆಗಳಿಗೆ ಧಾರ್ಮಿಕ ಭಾವನೆಗೆ ಧಕ್ಕೆ ತಂದ ಕಿಡಿಗೇಡಿಗಳು ಹೆಸರು ಸಮೇತ ಲಿಖಿತವಾಗಿ ದೂರು ನೀಡಿದ್ದು ಅವರನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮಹ್ಮದ್ ಅಕ್ಬರ್ ಖಾದ್ರಿ ಪತ್ರಿಕಾ ಪ್ರಕಟನೆ ಹೊರಡಿಸಿ ತಿಳಿಸಿದ್ದಾರೆ.ಘೋರಿ ಸಮಾದಿ ನೆಲಸಮಗೊಳಿಸಿದ ತಿಪ್ಪಣ್ಣ ಚಂದ್ರಪ್ಪ ಈತನ ವಿರುದ್ಧ ಮಹ್ಮದ್ ಅಕ್ಬರ್ ಖಾದ್ರಿ ದೂರು ನೀಡಿದ ಹಿನ್ನಲೆಯಲ್ಲಿ ದೂರು ದಾಖಲಿಸಿಕೊಂಡು ಸ್ಥಳಕ್ಕೆ ತೆರಳಿ ಪಂಚನಾಮೆ ಮಾಡಿಕೊಂಡು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪಿಎಸ್‌ಐ ತಿಳಿಸಿದ್ದಾರೆ.

## ಹೆಸರು ತಿದ್ದುಪಡಿ ಜ್ಞಾಪನಾ ಪತ್ರಕ್ಕೆ ಸಿಗದ ಸ್ಪಂದನೆ, ಅರ್ಜಿದಾರರ ಪರದಾಟ

**ಉದಯವಾಹಿನಿ ಸುರಪುರ**

ಶಾಲಾ ದಾಖಲಾತಿಗಳಲ್ಲಿ ಹೆಸರು ತಿದ್ದುಪಡಿಗಾಗಿ ನಿಯಮಾನುಸಾರ ಅರ್ಜಿ ಸಲ್ಲಿಸಿ ತಿಂಗಳು ಕಳೆದರೂ ಸುರಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳ (ಬಿಇಒ) ಕಾರ್ಯಾಲಯದಿಂದ ಅಧಿಕೃತ ಜ್ಞಾಪನಾ ಪತ್ರ ನೀಡದೆ ಅನಗತ್ಯ ವಿಳಂಬ ಮಾಡುತ್ತಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಗಿದೆ. ಅರ್ಜಿದಾರರು ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ್ದು, ತಮ್ಮ ಅಂಕಪಟ್ಟಿಗಳು ಹಾಗೂ ಮೂಲ ಶಾಲಾ ದಾಖಲೆಗಳಲ್ಲಿ ಹೆಸರು ತಿದ್ದುಪಡಿ ಮಾಡಿಸಿಕೊಳ್ಳಲು ಕೋರ್ಟ್ ಇಂದ ಆದೇಶ ಪಡೆದುಕೊಂಡು ಬಂದರು ಅಗತ್ಯವಿರುವ ಎಲ್ಲಾ ಪೂರಕ ದಾಖಲೆಗಳನ್ನು ಲಗತ್ತಿಸಿ ಸುರಪುರ ಬಿಇಒ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಆದರೆ ಅರ್ಜಿ ಸ್ವೀಕರಿಸಿ ಎರಡು ತಿಂಗಳಾದರೂ ಕಡತವನ್ನು ವಿಲೇವಾರಿ ಮಾಡದೆ ಅಧಿಕಾರಿಗಳು ನಿಷ್ಕಾಳಜಿ ತೋರುತ್ತಿದ್ದಾರೆ. ಹಲವು ಬಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಮೌಖಿಕವಾಗಿ ಕರೆ ಮಾಡಿದರು. ಮಿಸ್ ಕಾಲ್ ಜಿ ವಹಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಉದ್ಯೋಗಾವಕಾಶ ಹಾಗೂ ದಾಖಲೆಗಳ ನವೀಕರಣಕ್ಕೆ ಅಡ್ಡ ಹೆಸರು ತಿದ್ದುಪಡಿಯ ಅಧಿಕೃತ ಜ್ಞಾಪನಾ ಪತ್ರ ಸಿಗದಿರುವುದರಿಂದ ಉದ್ಯೋಗದ ಅರ್ಜಿ ಸಲ್ಲಿಕೆ, ಸ್ಪರ್ಧಾತ್ಮಕ ಪರೀಕ್ಷೆಗಳ ನೇಮಕಾತಿ ಪರಿಶೀಲನೆ ಹಾಗೂ ಅಧಿಕೃತ ದಾಖಲಾತಿಗಳ ನವೀಕರಣಕ್ಕೆ ಅರ್ಜಿದಾರರು ತೀವ್ರ ಪರದಾಡುವಂತಾಗಿದೆ.


ಉದಯವಾಹಿನಿ ಚಿತ್ರ

**ಕಚೇರಿ ಅಲೆದಾಟ, ಹಾರಿಕೆ ಉತ್ತರ:** ಸಮಸ್ಯೆಯ ಬಗ್ಗೆ ಮಾಹಿತಿ ಪಡೆಯಲು ಕಚೇರಿಗೆ ಪದೇಪದೇ ಅಲೆದಾಡಿದರೂ ಸಿಬ್ಬಂದಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸಮರ್ಪ ಕ ಕಾರಣ ನೀಡದೆ ಬೇಜವಾಬ್ದಾರಿಯ ಉತ್ತರ ನೀಡುತ್ತಿದ್ದಾರೆ. ಸಕಾಲ ನಿಯಮ ಉಲ್ಲಂಘನೆ ಸರ್ಕಾರಿ ಸೇವೆಗಳನ್ನು ಕಾಲಮಿತಿಯೊಳಗೆ ಒದಗಿಸಬೇಕೆಂಬ ನಿಯಮವಿದ್ದರೂ, ಕಚೇರಿಯ ಧೋರಣೆಯಿಂದಾಗಿ ಸಾರ್ವಜನಿಕರ ಕಡತಗಳು ಧೂಳು ತಿನ್ನುತ್ತಿವೆ. ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಈ ಕೂಡಲೇ ಮಧ್ಯಪ್ರವೇಶಿಸಿ ಬಾಕಿ ಇರುವ ಕಡತವನ್ನು ವಿಲೇವಾರಿ ಮಾಡಿಸಿ, ಅರ್ಜಿದಾರರಿಗೆ ತಕ್ಷಣ ಜ್ಞಾಪನಾ ಪತ್ರ ದೊರಕಿಸಿಕೊಡಬೇಕು ಹಾಗೂ ಸಾರ್ವಜನಿಕರನ್ನು ಸತಾಯಿಸುತ್ತಿರುವ ಸಿಬ್ಬಂದಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ನಾಗರಿಕರು ಒತ್ತಾಯಿಸಿದ್ದಾರೆ.

# ಕಬ್ಬು ಬೆಳೆಗಾರರ ಬೆಂಬಲಕ್ಕೆ ನಿಂತು, ಸಮಸ್ಯೆ ಪರಿಹರಿಸಿ

**ಉದಯವಾಹಿನಿ, ಧಾರವಾಡ**

ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ರಾಜ್ಯ ಸರ್ಕಾರವೂ ಜವಾಬ್ದಾರಿ ವಹಿಸಿ, ರೈತರ ಬೆಂಬಲಕ್ಕೆ ನಿಲ್ಲಬೇಕು ಎಂದು ಬಿಜೆಪಿ ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ. ಧಾರವಾಡದಲ್ಲಿ ಕಬ್ಬು ಬೆಳೆಗಾರರ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ರೈತರೊಂದಿಗೆ ಮಾತುಕತೆ ನಡೆಸಿದ ಅವರು, ಕಬ್ಬಿನ ಬೆಲೆ ಪರಿಷ್ಕರಣೆ ಸೇರಿದಂತೆ ರೈತರ ಬೇಡಿಕೆಗಳ ಈಡೇರಿಕೆಗೆ ರಾಜ್ಯ ಸರ್ಕಾರವೂ ಸಹಕರಿಸಬೇಕು ಎಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

ಕಬ್ಬಿನ ಉಪ ಉತ್ಪನ್ನಗಳಿಂದ ಸಂಗ್ರಹವಾಗುವ ಜಿಎಸ್‌ಟಿ ಆದಾಯ ರಾಜ್ಯ ಸರ್ಕಾರಕ್ಕೆ ದೊರೆಯುವುದರಿಂದ, ರೈತರ ಸಮಸ್ಯೆ ಪರಿಹರಿಸುವಲ್ಲಿ ರಾಜ್ಯವೂ ತನ್ನ ಪಾಲಿನ ಜವಾಬ್ದಾರಿ ನಿರ್ವಹಿಸಬೇಕು ಎಂದು ಹೇಳಿದರು. ಕಳೆದ ಹಲವು ವರ್ಷಗಳಿಂದ ಕಬ್ಬಿನ ಬೆಲೆ ಪರಿಷ್ಕರಣೆ ನಿಯಮಿತವಾಗಿ ನಡೆಯದಿರುವುದರಿಂದ ಈಗ ಏಕಾಏಕಿ ಬೆಲೆ ಹೆಚ್ಚಳ ಜಾರಿಗೊಳಿಸುವುದು ಕಷ್ಟಕರವಾಗಿದೆ. ಆದರೆ, ಈ ಸಮಸ್ಯೆಯನ್ನು ಪರಿಶೀಲಿಸಿ ವರದಿ ಸಲ್ಲಿಸಲು ಕೇಂದ್ರ ಸರ್ಕಾರ ಮತ್ತು ಸಂಬಂಧಪಟ್ಟ ಸಚಿವಾಲಯ ಸಮಿತಿಯೊಂದನ್ನು ರಚಿಸಿವೆ. ವಿವಿಧ ರಾಜ್ಯಗಳಲ್ಲಿ ಬೇಡಿಕೆಗಳು ವಿಭಿನ್ನವಾಗಿರುವುದರಿಂದ, ಆಯಾ ರಾಜ್ಯಗಳ ಪರಿಸ್ಥಿತಿಗೆ ಅನುಗುಣವಾಗಿ ಈ ವಿಷಯವನ್ನು ಪರಿಹರಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

**ಕಬ್ಬಿನಿಂದ ಉತ್ಪಾದಿಸುವ ಉಪ ಉತ್ಪನ್ನಗಳ ಮೇಲಿನ ಜಿಎಸ್‌ಟಿ ಆದಾಯ ರಾಜ್ಯ ಸರ್ಕಾರಕ್ಕೆ ದೊರೆಯುತ್ತದೆ. ಹೀಗಾಗಿ, ಈ ವಿಚಾರದಲ್ಲಿ ರಾಜ್ಯ ಸರ್ಕಾರವೂ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕು. ಕಬ್ಬಿನ ಬೆಲೆ ಪರಿಷ್ಕರಣೆ ದೇಶಾದ್ಯಂತ ಜಾರಿಯಾಗಬೇಕಿರುವುದರಿಂದ, ಸಮಿತಿಯ ವರದಿಗಾಗಿ ಕಾಯಲಾಗುತ್ತಿದೆ.**

**– ಬೊಮ್ಮಾಯಿ, ಸಂಸದ**

ಇದೇ ವೇಳೆ ರೈತರ ಪಾದಯಾತ್ರೆ ಹುಬ್ಬಳ್ಳಿ ತಲುಪುವ ವೇಳೆಗೆ ಅವರ ಬೇಡಿಕೆಗಳ ಕುರಿತು ಸಕಾರಾತ್ಮಕ ಸುದ್ದಿ ಹೊರಬೀಳಬಹುದು ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

ಕಬ್ಬು ಬೆಳೆಗಾರರು ಕಬ್ಬಿನ ತೂಕ ಮಾಡುವ ವಿಧಾನ, ಬಿಲ್ಲಿಂಗ್ ಪ್ರಕ್ರಿಯೆ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ಹೇಳಿದರು.

ಕದಂಬ ನಡೆಯುತ್ತಿರುವ ಮೂಲಸೌಕರ್ಯ ಅಭಿವೃದ್ಧಿಯು ಭಾರತದ ನೌಕಾಪಡೆಯ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸುವ ಗುರಿ ಹೊಂದಿದೆ

# ಐಎನ್‌ಎಸ್ ಸಮರ್ಥಕ್ ನೌಕಾಸೇನೆಗೆ ಸೇರ್ಪಡೆ

**ಉದಯವಾಹಿನಿ, ಕಾರವಾರ**

ಬಹುಉಪಯೋಗಿ ಯುದ್ಧನೌಕೆ ಐಎನ್‌ಎಸ್ ಸಮರ್ಥಕ್ ಶುಕ್ರವಾರ ಇಲ್ಲಿನ ಕದಂಬ ನೌಕಾನೆಲೆಯಲ್ಲಿ ಭಾರತೀಯ ನೌಕಾದಳಕ್ಕೆ ಸೇರ್ಪಡೆಗೊಂಡಿತು. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ನೌಕಾದಳದ ನಾಲ್ಕು ಬಹುಪಯೋಗಿ ನೌಕೆಗಳ ಪೈಕಿ ಮೊದಲನೇಯದಾಗಿರುವ ಸಮರ್ಥಕ್ ಕಾರ್ಯಾರಂಭಕ್ಕೆ ಚಾಲನೆ ನೀಡಲಾಯಿತು. ನೌಕೆಯ ಮೇಲೆ ನೌಕಾದಳದ ಲಾಂಛನ ಹೊಂದಿರುವ ತ್ರಿವರ್ಣ ಧ್ವಜ ಆರೋಹಣ ಮಾಡುವ ಮೂಲಕ ನೌಕೆಯ ಕಾರ್ಯಾರಂಭಕ್ಕೆ ಚಾಲನೆ ನೀಡಲಾಯಿತು.

**1.** ಈಗ ಸುಧಾರಿತ ಯುದ್ಧ ಸಾಮಗ್ರಿ
**2.** ಕೃತಕ ಬುದ್ಧಿಮತ್ತೆ ರಕ್ಷಣಾ ಕ್ಷೇತ್ರ
**3.** ಹಡಗುಗಳ ನಿರ್ವಹಣಾ ಸೌಲಭ್ಯಗಳು

ಕದಂಬ ನೌಕಾನಲೆಯಲ್ಲಿ ನಡೆಯುತ್ತಿರುವ ಮೂಲಸೌಕರ್ಯ ಅಭಿವೃದ್ಧಿಯು ಭಾರತದ ನೌಕಾಪಡೆಯ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸುವ ಗುರಿ ಹೊಂದಿದೆ. ಹಡಗುಗಳ ನಿರ್ವಹಣಾ ಸೌಲಭ್ಯಗಳು, ನೌಕಾ ವಾಯುನರಗಳು ಮತ್ತು ಸಂಪೂರ್ಣ ನೌಕಾ ಡಾಕ್‌ಯಾರ್ಡ್ ಸೇರಿದಂತೆ ಆಧುನಿಕ ನೌಕಾ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಯೋಜನೆ ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬಂದಾಗ ಹೆಚ್ಚಿನ ಸಂಖ್ಯೆಯ ಯುದ್ಧನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ನೆಲೆಗೊಳಿಸಲು ಹಾಗೂ ಅವುಗಳ ನಿರ್ವಹಣೆ ಮಾಡಲು ಭಾರತೀಯ ನೌಕಾಪಡೆಗೆ ಹೆಚ್ಚಿನ ಸಾಮರ್ಥ್ಯ ದೊರೆಯಲಿದೆ. ಇದರ ಜೊತೆಗೆ ಈ ಪ್ರದೇಶದಲ್ಲಿ ಆರ್ಥಿಕ ಅವಕಾಶಗಳೂ ಹೆಚ್ಚಾಗಲಿವೆ ಎಂದರು.

ಐಎನ್‌ಎಸ್ ಸಮರ್ಥಕ್ ನೌಕೆಯನ್ನು ಭಾರತೀಯ ನೌಕಾಪಡೆಗೆ ಸೇರ್ಪಡೆಗೊಳಿಸುವುದು ಭಾರತದ ಕೈಗಾರಿಕೆ, ತಾಂತ್ರಿಕ ಮತ್ತು ಹಡಗು ನಿರ್ಮಾಣ ಸಾಮರ್ಥ್ಯದ ಮೇಲಿನ ಹೆಚ್ಚುತ್ತಿರುವ ವಿಶ್ವಾಸದ ಪ್ರತೀಕವಾಗಿದೆ ಎಂದರು. ಐಎನ್‌ಎಸ್ ಸಮರ್ಥಕ್ ಮುಂದಿನ ಪೀಳಿಗೆಯ ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಪರೀಕ್ಷೆಗೆ ಪ್ರಮುಖ ವೇದಿಕೆಯಾಗಲಿದೆ.


ಉದಯವಾಹಿನಿ ಚಿತ್ರ

**ದೇಶದ ರಕ್ಷಣೆಯಲ್ಲಿ ನೌಕಾದಳ ಅತ್ಯುತ್ತಮ ಕಾರ್ಯನಿರ್ವಹಣೆ ಮಾಡುತ್ತಿದೆ. ಅತ್ಯಾಧುನಿಕ ಯುದ್ಧನೌಕೆ, ಜಲಾಂತರ್ಗಾಮಿ ಇಲ್ಲದ ಸಮಯದಲ್ಲೇ ಭಾರತೀಯ ನೌಕಾದಳ ಶತ್ರು ರಾಷ್ಟ್ರಗಳಿಗೆ ಸೋಲುಣಿಸಿತ್ತು. ಈಗ ಸುಧಾರಿತ ಯುದ್ಧ ಸಾಮಗ್ರಿ, ಅತ್ಯಾಧುನಿಕ ಯುದ್ಧನೌಕೆಗಳನ್ನು ಒಳಗೊಂಡು ಬಲಗೊಂಡಿದೆ.**

**– ಸಿ.ಪಿ.ರಾಧಾಕೃಷ್ಣನ್**

### ವ್ಯವಸ್ಥೆ ಸುಧಾರಿಸಲು ಅನುಕೂಲ

**ಚೋಳರು, ಶಿವಾಜಿ ಮಹಾರಾಜ ಬಲಿಷ್ಠ ನೌಕಾಪಡೆಯನ್ನು ಕಟ್ಟಿದ್ದರು. ಸಾಗರ ತಂತ್ರಜ್ಞಾನ ಸಾಕಷ್ಟು ಬದಲಾಗುತ್ತಿದೆ. ಕೃತಕ ಬುದ್ಧಿಮತ್ತೆ ರಕ್ಷಣಾ ಕ್ಷೇತ್ರದಲ್ಲಿ ತಂತ್ರಜ್ಞಾನ ಆಧಾರಿತ ವ್ಯವಸ್ಥೆ ಸುಧಾರಿಸಲು ಅನುಕೂಲವಾಗಿದೆ ಎಂದರು.**

ಸಮುದ್ರದ ಮೇಲ್ವಿಚಾರಣೆ, ಕರಾವಳಿ ಗಸ್ತು, ಗುರಿ ವ್ಯವಸ್ಥೆಗಳ ಉಡಾವಣೆ ಮತ್ತು ಮರುಪಡೆಯುವಿಕೆ, ಮಾನವರಹಿತ ವ್ಯವಸ್ಥೆಗಳ ಕಾರ್ಯಾಚರಣೆ, ಮಾನವೀಯ ನೆರವು, ವಿಪತ್ತು ನಿರ್ವಹಣೆ ಹಾಗೂ ಇತರ ತುರ್ತು ನೌಕಾ 'ಸಮರ್ಥಕ್' ಎಂಬ ಹೆಸರೇ ಬೆಂಬಲ ಮತ್ತು ಸಹಕಾರದ ಅರ್ಥವನ್ನು ಪ್ರತಿಬಿಂಬಿಸುತ್ತದೆ. ನಾವೀನ್ಯತೆ, ಪ್ರಯೋಗ ಮತ್ತು ವಿವಿಧ ನೌಕಾ ಕಾರ್ಯಾಚರಣೆಗಳಿಗೆ ನೆರವಾಗುವ ಸಾಮರ್ಥ್ಯವನ್ನು ಈನೌಕೆ ಹೊಂದಿರಲಿದೆ ಎಂದೂ ಹೇಳಿದರು.

ಸ್ವದೇಶಿ ಉತ್ಪನ್ನಗಳ ಮಹತ್ವವು ಅವುಗಳ ಸಂಖ್ಯೆಯಲ್ಲಿ ಮಾತ್ರ ಇರುವುದಿಲ್ಲ. ದೇಶದಲ್ಲೇ ತಯಾರಾಗುವ ಪ್ರತಿಯೊಂದು ಬಿಡಿಭಾಗದ ಹಿಂದೆ ಭಾರತೀಯ ವಿನ್ಯಾಸಕರು, ಇಂಜಿನಿಯರ್‌ಗಳು, ತಂತ್ರಜ್ಞರು, ಉತ್ಪಾದಕರು ಮತ್ತು ಸಂಶೋಧನಾ ಸಂಸ್ಥೆಗಳ ಪರಿಶ್ರಮವಿದೆ. ದೇಶೀಯವಾಗಿ ನಿರ್ಮಿಸಲಾದ ಪ್ರತಿಯೊಂದು ಸಾಮರ್ಥ್ಯವೂ ನಮ್ಮ ಕಾರ್ಯತಂತ್ರದ ಭದ್ರತೆ, ಆರ್ಥಿಕ ಭದ್ರತೆ ಮತ್ತು ಕೈಗಾರಿಕಾ ಬೆಳವಣಿಗೆಯನ್ನು ಬಲಪಡಿಸುತ್ತದೆ ಎಂದರು.

ಕಳೆದ ಹಲವು ವರ್ಷಗಳಲ್ಲಿ ಭಾರತವು ವಿದೇಶಗಳಿಂದ ರಕ್ಷಣಾ ವೇದಿಕೆಗಳನ್ನು ಖರೀದಿಸುವ ರಾಷ್ಟ್ರದಿಂದ, ಅತ್ಯಾಧುನಿಕ ಕಡಲ ರಕ್ಷಣಾ ವ್ಯವಸ್ಥೆಗಳನ್ನು ಸ್ವತಃ ನಿರ್ಮಿಸುವ, ಸಂಯೋಜಿಸುವ ಮತ್ತು ಅಭಿವೃದ್ಧಿಪಡಿಸುವ ರಾಷ್ಟ್ರವಾಗಿ ಹೊಮ್ಮಲಿದೆ ಎಂದರು.

ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಮಾತನಾಡಿ, ಖಾಸಗಿ ಹಡಗುಕಟ್ಟೆಯಲ್ಲಿ ನಿರ್ಮಾಣಗೊಂಡಿರುವ ಬಹುಪಯೋಗಿ ಯುದ್ಧನೌಕೆಯಾಗಿದೆ. ಕಡಲ ಗಸ್ತು ಚಟವಟಿಕೆಗೆ ಬಲ ತುಂಬಲಿದೆ. ಹೊಸ ತಂತ್ರಜ್ಞಾನ, ಸುಧಾರಿತ ಉಪಕರಣಗಳನ್ನು ಒಳಗೊಂಡಿರುವ ಯುದ್ಧನೌಕೆಯು ರಕ್ಷಣಾ ಕ್ಷೇತ್ರದ ಸಮರ್ಥ ಯುದ್ಧನೌಕ ಆಗಲಿದೆ. ಸಮರ್ಥಕ್ ನೌಕೆಯ ಸಿಬ್ಬಂದಿಗೆ ಮಾತ್ರವಲ್ಲದೆ, ಭಾರತದ ಕಡಲ ಭದ್ರತೆ ಮತ್ತು ನೌಕಾಪಡೆಯ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸಲು ಶ್ರಮಿಸುತ್ತಿರುವ ಎಲ್ಲರಿಗೂ ಸ್ಫೂರ್ತಿಯಾಗಿದೆ ಎಂದರು.

# ಮಿನಿ ನ್ಯೂಸ್

## ಶರಣಪ್ಪ ಮಟ್ಟೂರು ಬಳ್ಳಾರಿಯಲ್ಲಿ ಮತ ಯಾಚನೆ

**ಉದಯವಾಹಿನಿ, ಬಳ್ಳಾರಿ**

ವಿಧಾನ ಪರಿಷತ್ತಿನ ಈಶಾನ್ಯ ಕರ್ನಾಟಕ ಶಿಕ್ಷಕರ ಕ್ಷೇತ್ರದ ಚುನಾವಣೆಯ ಅಂಗವಾಗಿ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶರಣಪ್ಪ ಮಟ್ಟೂರು ಅವರು ನಿನ್ನೆ ನಗರದ ಹಲವು ಶಾಲಾ ಕಾಲೇಜು, ವಿವಿಗಳಿಗೆ ನಗರ ಡಿಸಿಸಿ ಅಧ್ಯಕ್ಷ ಅಲ್ಲಂ ಪ್ರಶಾಂತ್ ನೇತೃತ್ವದಲ್ಲಿ ತೆರಳಿ ಮತಯಾಚನೆ ಮಾಡಿದ್ದಾರೆ. ನಗರದಬಿ.ಐ.ಟಿ.ಎಂ. ಕಾಲೇಜು, ವಿ.ಎಸ್.ಕೆ. ವಿಶ್ವವಿದ್ಯಾಲಯ ಕಾಲೇಜು, ಬಿ.ಪಿ.ಎಸ್.ಸಿ. ಕಾಲೇಜು, ಆರ್ಮೇ ವೈ ಎಂಸಿ ಕಾಲೇಜು ಹಾಗೂ ಬೆಸ್ಟ್ ಕಾಲೇಜುಗಳಿಗೆ ಭೇಟಿ ನೀಡಿ, ಶಿಕ್ಷಕರು, ಉಪನ್ಯಾಸಕರನ್ನು ಭೇಟಿಯಾಗಿ ಮತ ಯಾಚಿಸಲಾಯಿತು. ಈ ಸಂದರ್ಭದಲ್ಲಿ ಅಭ್ಯರ್ಥಿ ಶ ಶರಣಪ್ಪ ಮಟ್ಟೂರು ತಮ್ಮನ್ನು ಬೆಂಬಲಿಸುವಂತೆ ಮನವಿಮಾಡಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ನಮ್ಮಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಮತ್ತು ಭೋದಕರ ಸೌಲಭ್ಯಗಳನ್ನು ಪಡೆಯಲು ಹೆಚ್ಚಿನ ಸಹಕಾರಿಯಾಗಲಿದೆಂದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಚಂದ್ರಶೇಖರ್ ಪಾಟೀಲ್, ನಾಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಜೆ.ಎಸ್. ಆಂಜನೇಯಲು, ಜಿಲ್ಲಾ ಶಿಕ್ಷಕರ ಘಟಕದ ಅಧ್ಯಕ್ಷ ಬಳ್ಳಾರಿ ಜಿಲ್ಲಾ ವೀಕ್ಷಕರುಗಳಾದ ಅಖಿಲ್ ಅಹಮ್ಮದ್, ಎ.ಮಾನಯ್ಯ, ಅಖಿಲ್ ಅಹಮ್ಮದ್, ಸತೀಶ್ ಖಾಂಡ್ರ, ಶೋಭಾ ಕಾಳಿಂಗ ಮತ್ತು ಇತರರು ಇದ್ದರು.

## HDK ದೇವಸ್ಥಾನಕ್ಕೆ ಬರಲಿ, ಪ್ರಮಾಣ ಮಾಡ್ತೀನಿ

**ಉದಯವಾಹಿನಿ, ಹಾಸನ**

ನಾನು ಪ್ರಧಾನಿ ನರೇಂದ್ರ ಮೋದಿಯವರಿಗೆ ಕಂಪ್ಲೇಂಟ್ ಮಾಡ್ತೀನಿ ಕುಮಾರಸ್ವಾಮಿ ಅವರನ್ನು ಕೇಂದ್ರ ಸಂಪುಟದಿಂದ ವಜಾ ಮಾಡಿ ಎಂದು ದೂರು ನೀಡುತ್ತೇನೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವೇಗೌಡರ ಕುಟುಂಬಕ್ಕೆ ಸಂಬಂಧಿಸಿದ ವಿವಾದಾತ್ಮಕ 'ಪೆನ್ ಡ್ರೈವ್' ಪ್ರಕರಣಕ್ಕೆ ಸಂಬಂಧಿಸಿದ ಆರೋಪಗಳನ್ನು ಇತ್ಯರ್ಥಪಡಿಸಿಕೊಳ್ಳಲು, ಹಾಸನ ಜಿಲ್ಲೆಯ ಲಕ್ಷ್ಮೀ ರಂಗನಾಥ ಸ್ವಾಮಿ ದೇವಾಲಯದಲ್ಲಿ ಸಾರ್ವಜನಿಕವಾಗಿ ಪ್ರಮಾಣ ಮಾಡುವಂತೆ ಅವರು ಕುಮಾರಸ್ವಾಮಿ ಅವರಿಗೆ ಸವಾಲು ಹಾಕಿದ್ದಾರೆ. ತಾವು ನಿರ್ದೋಷಿ ಎಂದು ಸಾಬೀತುಪಡಿಸಲು ದೇವಾಲಯದಲ್ಲಿ ಪ್ರಮಾಣ ವಚನ ಸ್ವೀಕರಿಸಲು ಸಿದ್ಧವಿರುವುದಾಗಿ ತಿಳಿಸಿದರು. ಈ ಸವಾಲನ್ನು ಸ್ವೀಕರಿಸಿ, ದಿನಾಂಕ ಮತ್ತು ಸಮಯವನ್ನು ನಿಗದಿಪಡಿಸುವಂತೆ ಅವರು ಕುಮಾರಸ್ವಾಮಿ ಅವರಿಗೆ ಹೇಳಿದರು. ಜೆಡಿ(ಎಸ್) ನಾಯಕತ್ವವು ಸಾಕ್ಷ್ಯಾಧಾರಗಳನ್ನು ಮಂಡಿಸುವ ಬದಲು, ಆಧಾರರಹಿತ ಹೇಳಿಕೆಗಳನ್ನು ನೀಡುತ್ತಾ ವೈಯಕ್ತಿಕ ದಾಳಿಗಳಲ್ಲಿ ತೊಡಗಿದೆ ಎಂದು ಅವರು ಆರೋಪಿಸಿದರು. ಹಾಸನದಲ್ಲಿ ಜೆಡಿ(ಎಸ್) ಅನುಭವಿಸಿದ ಚುನಾವಣಾ ಸೋಲಿನಿಂದಲೇ ತಮ್ಮನ್ನು ಗುರಿಯಾಗಿಸಲಾಗುತ್ತಿದೆ ಎಂದು ಪಟೇಲ್ ಆರೋಪಿಸಿದರು. ಈ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವು ಬಲವರ್ಧನೆಗೊಂಡ ನಂತರ, ತಮ್ಮ ವರ್ಚಸ್ಸಿಗೆ ಧಕ್ಕೆ ತರಲು ಜೆಡಿ(ಎಸ್) ಪ್ರಯತ್ನಿಸುತ್ತಿದೆ ಎಂದು ಅವರು ದೂರಿದರು. ಜಿಲ್ಲೆಯಲ್ಲಿ ದೀರ್ಘಕಾಲದಿಂದ ಒಂದೇ ಕುಟುಂಬದ ರಾಜಕೀಯ ಪ್ರಾಬಲ್ಯವಿರುವುದನ್ನು ಪ್ರಶ್ನಿಸಿದ ಅವರು, ಅಧಿಕಾರವು ಕೇವಲ ಒಂದು ವಂಶಕ್ಕೆ ಸೀಮಿತವಾಗಬಾರದು. ಇತರರಿಗೂ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವ ಅವಕಾಶ ಸಿಗಬೇಕು ಎಂದು ಪ್ರತಿಪಾದಿಸಿದರು.


ಪೆನ್ ಡ್ರೈವ್ ಹಂಚಿ ಗೆದ್ದಿದ್ದೀನಾ?

## ಗರ್ಭಿಣಿಯರ ಸಾವು ಕಡಿಮೆಗೆ ಎಐ ಸಹಕಾರಿಯಾಯ್ತು

**ಉದಯವಾಹಿನಿ, ಬಳ್ಳಾರಿ**

ಇಲ್ಲಿನ ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯದದಲ್ಲಿ ವಿವಿಯ ಗಣಕ ವಿಜ್ಞಾನ ವಿಭಾಗ ಹಾಗೂ ವಿಶನ್ ಡಿಜಿಟಲ್ ಇಂಡಿಯಾ, ಗ್ಲೋಬಲ್ ಡಿಜಿಟಲ್ ಯುನಿವರ್ಸಿಟಿ ಹಾಗೂ ಗ್ಲೋಬಲ್ ಎಐ ಸೊಸೈಟಿ ಜಂಟಿ ಸಹಭಾಗಿತ್ವದಲ್ಲಿ 'ಶೈಕ್ಷಣಿಕ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಬಹುಶೀಸ್ತೀಯ ಶಿಕ್ಷಣ, ಸಂಶೋಧನೆ ಮತ್ತು ನಾವಿನ್ಯತೆ' ಎಂಬ ಎರಡು ದಿನಗಳ ಅಂತರಾಷ್ಟೀಯ ವಿಚಾರ ಸಂಕಿರಣ ಆರಂಭಗೊಂಡಿದೆ.

ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಇಂದು ಕೃತಕಬುದ್ಧಿಮತ್ತೆ ಎನ್ನುವುದು ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಹರಡಿಕೊಂಡಿದೆ. ಇದನ್ನು ಸಮರ್ಪಕವಾಗಿ ಅರಿತುಕೊಂಡು ನಮ್ಮ ಅಗತ್ಯತೆಗೆ ತಕ್ಕಂತೆ ಬಳಸಿಕೊಂಡಲ್ಲಿ ಅನುಕೂಲತೆಗಳು ಹೆಚ್ಚು ಎಂದರು. ಬಳ್ಳಾರಿಯಲ್ಲಿ ಕಳೆದ 2 ವರ್ಷ ಅವಧಿಯಲ್ಲಿ 48 ಬಾಣಂತಿಯರ ಸಾವು ಸಂಭವಿಸಿ ವೈದ್ಯಕೀಯ ಕ್ಷೇತ್ರದಲ್ಲಿ ಆತಂಕ ಮೂಡಿಸಿತ್ತು. ಇದನ್ನು ತಡೆಗಟ್ಟಲು ಜಿಲ್ಲಾಡಳಿತವು ಕೃತಕ ಬುದ್ಧಿಮತ್ತೆ ಸಹಾಯದಿಂದ ಪೋಷಕಾಂಶಗಳ ಕೊರತೆಯಿಂದ ಬಳಲುವ ಗರ್ಭಿಣಿ ಸ್ತ್ರೀಯರನ್ನು ಗುರುತಿಸಿ ಅವರಿಗೆ ಪ್ರಸವದ ನಂತರ ಒದಗಬಹುದಾದ ಆಪತ್ತುಗಳನ್ನು ಎಐ ಟ್ರಾಕರ್ ಮೂಲಕ ನಿಭಾಯಿಸಿದೆವು. ಇದರಿಂದ ಈ ವರ್ಷ ಬಾಣಂತಿಯರ ಸಾವಿನ ಪ್ರಮಾಣ 4 ಕ್ಕೆ ಇಳಿದಿದೆ.ಎಐ ಯುಗದಲ್ಲಿ ಕೃತಕ ಬುದ್ಧಿಮತ್ತೆ ಕುರಿತು ಕೇವಲ ತಿಳಿದುಕೊಂಡರೆ ಸಾಲದು ಅದನ್ನು ನಮ್ಮ ಸ್ವಜ್ಞಾನಕ್ಕೆ ಅನುಗುಣವಾಗಿ ಬಳಸಿಕೊಳ್ಳುವ ಚಾಕಚಕ್ಯತೆ ಹೊಂದಬೇಕು ಎಂದರು. ವಿವಿಯ ಕುಲಪತಿ ಪ್ರೊ.ಎಂ ಮುನಿರಾಜು ಮಾತನಾಡಿ, ಎಐ ತಂತ್ರಜ್ಞಾನ ಎಷ್ಟೇ ಅಭಿವೃದ್ಧಿ ಹೊಂದಿದರೂ ಮಾನವನ ಸಹಾಯವಿಲ್ಲದೆ ಅದು ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ.

## ಕಾರವಾರ ನೌಕಾನೆಲೆಯಲ್ಲಿ ಸ್ವದೇಶಿ ನಿರ್ಮಿತ ಬೃಹತ್ ನೌಕೆ ಲೋಕಾರ್ಪಣೆ..!

**ಉದಯವಾಹಿನಿ, ಕಾರವಾರ**

ಭಾರತೀಯ ನೌಕಾಪಡೆ ಸಾಮರ್ಥ್ಯಕ್ಕೆ ಮತ್ತೊಂದು ಅತ್ಯಾಧುನಿಕ ಗರಿ ಸೇರ್ಪಡೆಯಾಗಿದೆ. ಸಮುದ್ರ ಕಣ್ಗಾವಲಿನಿಂದ ಹಿಡಿದು ವಿಪತ್ತು ಪರಿಹಾರ, ರಕ್ಷಣಾ ಕಾರ್ಯಾಚರಣೆ ಹಾಗೂ ಮಾನವರಹಿತ ತಂತ್ರಜ್ಞಾನಗಳ ಪ್ರಯೋಗದ ವರೆಗೆ ಹಲವು ಜವಾಬ್ದಾರಿಗಳನ್ನು ನಿಭಾಯಿಸಬಲ್ಲ ಭಾರತದ ಸ್ವದೇಶಿ ಬಹುಪಯೋಗಿ ಯುದ್ಧನೌಕೆ 'ಐಎನ್‌ಎಸ್ ಸಮರ್ಥಕ್' ಅನ್ನು ಕಾರವಾರದ ನೌಕಾನೆಲೆಯಲ್ಲಿ ಲೋಕಾರ್ಪಣೆಗೊಳಿಸಲಾಗಿದೆ.


ಉದಯವಾಹಿನಿ ಚಿತ್ರ

ಭಾರತದ ಗೌರವಾನ್ವಿತ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಯುದ್ಧ ನೌಕೆಯನ್ನು ದೇಶಕ್ಕೆ ಸಮರ್ಪಿಸಿದರು. ಭಾರತೀಯ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್, ಹಿರಿಯ ನೌಕಾಪಡೆ ಮತ್ತು ರಕ್ಷಣಾ ಅಧಿಕಾರಿಗಳು, ರಕ್ಷಣಾ ಸಚಿವಾಲಯದ ಗಣ್ಯರು, ಲಾರ್ಸನ್ ಆಂಡ್ ಟೂಬ್ರೊ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಸಂಬಂಧಿತ ಮೂಲ ಉಪಕರಣ ತಯಾರಿಕಾ ಸಂಸ್ಥೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ನೌಕೆಯನ್ನು ನೌಕಾಪಡೆಗೆ ಸೇರ್ಪಡೆಗೊಳಿಸಲಾಯಿತು.

ಎಲ್‌ಆಂಡ್‌ಟಿ ಸಂಸ್ಥೆಯೇ ಐಎನ್‌ಎಸ್ ಸಮರ್ಥಕ್ ಅನ್ನು ವಿನ್ಯಾಸಗೊಳಿಸಿ ನಿರ್ಮಿಸಿದೆ. ಈ ನೌಕೆಯ ಸೇರ್ಪಡೆ 'ಆತ್ಮನಿರ್ಭರ ಭಾರತ' ಉಪಕ್ರಮದಡಿ ರಕ್ಷಣಾ ಉತ್ಪಾದನಾ ಕ್ಷೇತ್ರದಲ್ಲಿ ಭಾರತದ ಸ್ವಾವಲಂಬನೆ ಹೆಚ್ಚುತ್ತಿರುವುದನ್ನು ಪ್ರತಿಬಿಂಬಿಸುತ್ತದೆ. ನೌಕೆಯ ಒಟ್ಟು ಬಿಡಿಭಾಗಗಳು ಮತ್ತು ತಂತ್ರಜ್ಞಾನದಲ್ಲಿ ಶೇ.70ಕ್ಕೂ ಹೆಚ್ಚು ಪಾಲು ಸ್ವದೇಶಿ ಉತ್ಪನ್ನಗಳಾಗಿದ್ದು, ಭಾರತೀಯ ರಕ್ಷಣಾ ಸಂಸ್ಥೆಗಳು ಮತ್ತು ಸಣ್ಣ, ಅತಿ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಸಹಯೋಗದಲ್ಲಿ ಅವುಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಕಳೆದ ಕೆಲವು ದಿನಗಳಿಂದ ದೆಹಲಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಹಲವು ಗಂಭೀರ ಪ್ರಶ್ನೆಗಳನ್ನು ಮೂಡಿಸುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ ರಾಜನಾಥ ಸಿಂಗ್

# ಬಾಂಗ್ಲಾದಂತೆ ಅರಾಜಕತೆ ಮೂಲಕ ಆಡಳಿತ ಬದಲಾವಣೆಗೆ ಕಾಂಗ್ರೆಸ್ ಯತ್ನ

**ಲಕ್ನೋ:** ದೆಹಲಿಯಲ್ಲಿನ ಪ್ರಸ್ತುತ ಪರಿಸ್ಥಿತಿಯು ಸಾಂವಿಧಾನಿಕ ಮಾರ್ಗಗಳ ಬದಲಾಗಿ, ಅರಾಜಕತೆಯ ಸೃಷ್ಟಿಸುವ ಪ್ರಯತ್ನವಾಗಿದೆ. ಇದು ಖಂಡನೀಯ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಆರೋಪಿಸಿದ್ದಾರೆ.

**1.** ಶಾಂತಿ ಕದಡಲು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಯತ್ನಿಸುತ್ತಿವೆ
**2.** ವಿಪಕ್ಷಗಳು ದೇಶದ ಯುವಜನತೆಯನ್ನು ದಾಳಗಳಾಗಿ ಬಳಕೆ ಮಾಡುತ್ತಿದೆ
**3.** ರಾಜಕೀಯ ಸಂಘರ್ಷ, ಅರಾಜಕತೆ ಸೃಷ್ಟಿಗೆ ಬಳಸುವ ಪ್ರಯತ್ನ ನಡೆದಿದೆ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಂಗ್ಲಾದೇಶದಲ್ಲಿ ನಡೆದಂತೆ ಇಲ್ಲೂ ಸರ್ಕಾರ ಬದಲಾವಣೆ ಮಾಡುವ ಪ್ರಯತ್ನವನ್ನು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಯತ್ನಿಸುತ್ತಿದೆ. ವಿಪಕ್ಷಗಳು ದೇಶದ ಯುವಜನತೆಯನ್ನು ದಾಳಗಳಾಗಿ ಬಳಕೆ ಮಾಡುತ್ತಿದೆ ಎಂದು ಟೀಕಿಸಿದ್ದಾರೆ.

ಕಳೆದ ಕೆಲವು ದಿನಗಳಿಂದ ದೆಹಲಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಹಲವು ಗಂಭೀರ ಪ್ರಶ್ನೆಗಳನ್ನು ಮೂಡಿಸುತ್ತಿದೆ. ಕಾಂಗ್ರೆಸ್ ಮತ್ತು ಅದರ ರಾಜಕೀಯ ಮೈತ್ರಿ ಪಕ್ಷಗಳು ನೇರವಾಗಿ ಮತ್ತು ತಮ್ಮ ಅಂಗಸಂಸ್ಥೆಗಳ ಮೂಲಕ ಯುವಜನರ ಶಕ್ತಿಯನ್ನು ರಚನಾತ್ಮಕ ಚಟುವಟಿಕೆಗಳು ಮತ್ತು ರಾಷ್ಟ್ರ ನಿರ್ಮಾಣದ ಕಡೆಗೆ ಬಳಸುವ ಬದಲು, ರಾಜಕೀಯ ಸಂಘರ್ಷ ಮತ್ತು ಅರಾಜಕತೆ ಸೃಷ್ಟಿಗೆ ಬಳಸುವ ಪ್ರಯತ್ನ ನಡೆಯುತ್ತಿದೆ ಎಂದಿದ್ದಾರೆ.



## ಕೈ ಪಕ್ಷದ ಕರಾಳ ಅಧ್ಯಾಯ

**ಕಾಂಗ್ರೆಸ್ ಪಕ್ಷದ ಕರಾಳ ಅಧ್ಯಾಯ ಎಂದು ಬಣ್ಣಿಸಿದ ಅವರು, ಕಾಂಗ್ರೆಸ್ ಆಡಳಿತಾವಧಿಯಲ್ಲಿ ನಡೆದ ನಾಲ್ಕು ಪ್ರಮುಖ ಘಟನೆಗಳನ್ನು ಉಲ್ಲೇಖಿಸಿದ್ದಾರೆ. ಮೊದಲನೆಯದು 1975ರಲ್ಲಿ ಇಂದಿರಾ ಗಾಂಧಿ ಅವರು ಹೇರಿದ ತುರ್ತು ಪರಿಸ್ಥಿತಿ. ಎರಡನೇಯದು, ಕಾಂಗ್ರೆಸ್‌ನ ಬೆಂಬಲದೊಂದಿಗೆ 1984ರಲ್ಲಿ ಸಿಖ್ ಸಹೋದರ-ಸಹೋದರಿಯರ ಮೇಲೆ ನಡೆದ ಹತ್ಯಾಕಾಂಡ. ಮೂರನೇಯದು 1990ರಲ್ಲಿ, ರಾಮ ಭಕ್ತ ಕರ ಸೇವಕರ ರಕ್ತದ ನದಿಯನ್ನೇ ಹರಿಸಿದವರ ಸರ್ಕಾರಕ್ಕೆ ಬೆಂಬಲ ನೀಡಿ, ಆ ಸರ್ಕಾರವನ್ನು ಉಳಿಸಿದ್ದು. ನಾಲ್ಕನೇಯದು ಇಂದು ಕಾಂಗ್ರೆಸ್ ಪಕ್ಷವು ಸಂವಿಧಾನ, ಸಾಂವಿಧಾನಿಕ ಮೌಲ್ಯಗಳು ಮತ್ತು ಸಾಂವಿಧಾನಿಕ ಸಂಸ್ಥೆಗಳ ಮೇಲೆ ದಾಳಿ ನಡೆಸುವ ಮೂಲಕ ತಪ್ಪು ಎಸಗುತ್ತಿದೆ ಎಂದಿದ್ದಾರೆ.**

ದೇಶದ ಯುವಜನರನ್ನು ಅರಾಜಕತೆಯ ರಾಜಕಾರಣದ ದಾಳವಾಗಿ ಬಳಸುವ ಪ್ರಯತ್ನ ಸಾಗಿದೆ. ಕೆಲವರು ಬಾಂಗ್ಲಾದೇಶದಲ್ಲಿ ನಡೆದ ಘಟನೆಗಳಿಂದ ಸ್ಫೂರ್ತಿ ಪಡೆದಿರುವುದಾಗಿ ಬಹಿರಂಗವಾಗಿಯೇ ಒಪ್ಪಿಕೊಂಡು, ಅಲ್ಲಿನ ಮಾದರಿಯಲ್ಲೇ ಇಲ್ಲಿಯೂ ಆಡಳಿತ ಬದಲಾವಣೆ ಬಯಸುತ್ತಿದ್ದಾರೆ. ಇನ್ನು ಕೆಲವರು ಸರ್ಕಾರವನ್ನು ಉರುಳಿಸುವಂತೆ ಬಹಿರಂಗವಾಗಿಯೇ ಕರೆ ನೀಡುತ್ತಿದ್ದಾರೆ. ಪ್ರಜಾಪ್ರಭುತ್ವ ಸಂಸ್ಥೆಗಳನ್ನು ನಾಶಪಡಿಸುವುದು. ದೇಶದಲ್ಲಿ ಅರಾಜಕತೆಯನ್ನು ಸೃಷ್ಟಿಸುವುದು ಮಾತ್ರ ಇವರ ಏಕೈಕ ಕಾರ್ಯಸೂಚಿಯಾಗಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಆಡಳಿತ ಬದಲಾವಣೆಯಂತಹ ಪದಗಳನ್ನು ಬಳಸುತ್ತಿರುವುದರಿಂದ ತಿಳಿಯುತ್ತಿದೆ, ಅವರ ಹೋರಾಟವು ಚುನಾವಣಾ ಸುಧಾರಣೆಗಾಗಿ ಅಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇದು ದೇಶದ ಯುವಜನತೆಯ ಉಜ್ವಲ ಭವಿಷ್ಯಕ್ಕಾಗಿ ಅಲ್ಲ. ಬದಲಾಗಿ, ದೇಶದಲ್ಲಿ ಅರಾಜಕತೆಯನ್ನು ಸೃಷ್ಟಿಸುವ ಮೂಲಕ ಅಧಿಕಾರವನ್ನು ವಶಪಡಿಸಿಕೊಳ್ಳಲು ನಡೆಸುತ್ತಿರುವ ಒಂದು ಪಿತೂರಿಯಾಗಿದೆ ಎಂದು ಆರೋಪಿಸಿದ್ದಾರೆ.

# 'ನಾವು ಯಾರಿಗೂ ಹೆದರಲ್ಲ, ಕಾನೂನು ಎಲ್ಲರಿಗೂ ಒಂದೇ!' ಎಲಾನ್ ಮಸ್ಕ್ ವ್ಯಂಗ್ಯಕ್ಕೆ ಕೊನೆಗೂ ಮೌನ ಮುರಿದ ಅಂಬಾನಿ!

**ಮುಂಬೈ:** ವಿಶ್ವದ ನಂಬರ್ 1 ಶ್ರೀಮಂತ, ಸ್ಪೇಸ್‌ಎಕ್ಸ್ ಮತ್ತು ಸ್ಟಾರ್‌ಲಿಂಕ್ ಮಾಲೀಕ ಎಲಾನ್ ಮಸ್ಕ್ ಹಾಗೂ ಭಾರತದ ಉದ್ಯಮ ದೈತ್ಯ ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಸಂಸ್ಥೆಯ ನಡುವಿನ ಬಿಜಿನೆಸ್ ವಾರ್ ಈಗ ಜಾಗತಿಕ ಮಟ್ಟದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ಭಾರತದಲ್ಲಿ ಸ್ಟಾರ್‌ಲಿಂಕ್ ಸ್ಯಾಟಲೈಟ್ ಇಂಟರ್ನೆಟ್ ಸೇವೆಗಳ ಲಾಂಚ್ ವಿಳಂಬವಾಗುತ್ತಿರುವುದಕ್ಕೆ ಎಲಾನ್ ಮಸ್ಕ್ ಇತ್ತೀಚೆಗೆ ಮುಕೇಶ್ ಅಂಬಾನಿ ಅವರನ್ನೇ ನೇರವಾಗಿ ಹೊಣೆ ಮಾಡಿ ತೀವ್ರ ವಾಗ್ದಾಳಿ ನಡೆಸಿದ್ದರು. ಇದಕ್ಕೆ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಶುಕ್ರವಾರ ಅಧಿಕೃತ ಪ್ರಕಟಣೆ ಹೊರಡಿಸುವ ಮೂಲಕ ಅತ್ಯಂತ ಖಡಕ್ ಆಗಿ ತಿರುಗೇಟು ನೀಡಿದೆ. "ರಿಲಯನ್ಸ್ ಸಂಸ್ಥೆಯು ಎಂದಿಗೂ ಸ್ಪರ್ಧೆಗೆ ಹೆದರುವುದಿಲ್ಲ. ಆದರೆ ಭಾರತದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಕಂಪನಿಗಳು ಇಲ್ಲಿನ ಕಾನೂನು ಮತ್ತು ನೀತಿಗಳನ್ನು ಪಾಲಿಸಲೇಬೇಕು" ಎಂದು ಸ್ಪಷ್ಟಪಡಿಸಿದೆ.



**ಪ್ರಧಾನಿ ಅಂಬಾನಿ ಎಂದು ವ್ಯಂಗ್ಯವಾಡಿದ್ದ ಮಸ್ಕ್!:** ಕಳೆದ ಶನಿವಾರ ಎಲೋನ್ ಮಸ್ಕ್ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ರಿಲಯನ್ಸ್ ಹಾಗೂ ಭಾರತದ ರಾಜಕೀಯ ಪಕ್ಷಗಳ ದೇಣಿಗೆಗೆ ಸಂಬಂಧಿಸಿದ ಮಾಧ್ಯಮ ವರದಿಗಳ ಸ್ಕ್ರೀನ್‌ಶಾಟ್‌ಗಳನ್ನು ಹಂಚಿಕೊಂಡಿದ್ದರು. ಅಷ್ಟೇ ಅಲ್ಲದೆ, ಮುಕೇಶ್ ಅಂಬಾನಿ ಅವರನ್ನು ಜಾರಕವಾಗಿ "ಪ್ರಧಾನ ಮಂತ್ರಿ ಅಂಬಾನಿ" ಎಂದು ಸಂಬೋಧಿಸಿ, ಸ್ಟಾರ್‌ಲಿಂಕ್ ಭಾರತಕ್ಕೆ ಬರದಂತೆ ತಡೆಯಲು ಈ ಕಾರ್ಪೊರೇಟ್ ದೈತ್ಯ ತನ್ನ ಪ್ರಭಾವ ಬಳಸುತ್ತಿದೆ ಎಂದು ಗಂಭೀರ ಆರೋಪ ಮಾಡಿದ್ದರು. ಅದಕ್ಕೂ ಮುನ್ನ ಅಂಬಾನಿ ಅವರು ಭಾರತೀಯ ಸ್ಯಾಟಲೈಟ್ ಮಾರುಕಟ್ಟೆಯಲ್ಲಿ ತಮ್ಮ ಏಕಸ್ವಾಮ್ಯವನ್ನು ರಕ್ಷಿಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ಮಸ್ಕ್ ದೂರಿದ್ದರು.

**ಕಾನೂನು ಎಲ್ಲರಿಗೂ ಒಂದೇ ಎಂದ ರಿಲಯನ್ಸ್!:** ಮಸ್ಕ್ ಅವರ ಈ ಸರಣಿ ಟೀಕೆಗಳಿಗೆ ಉತ್ತರಿಸಿರುವ ರಿಲಯನ್ಸ್, ಇತ್ತೀಚೆಗೆ ರಿಲಯನ್ಸ್ ಮತ್ತು ಭಾರತೀಯ ಮಾರುಕಟ್ಟೆಯ ಬಗ್ಗೆ ಬಂದಿರುವ ಕೆಲವು ಹೇಳಿಕೆಗಳ ಹಿನ್ನೆಲೆಯಲ್ಲಿ ನಾವು ಸತ್ಯವನ್ನು ಜನರ ಮುಂದೆ ಇಡಲು ಬಯಸುತ್ತೇವೆ. ಪ್ರತಿಯೊಂದು ಭಾರತೀಯ ಉದ್ಯಮದಂತೆ, ರಿಲಯನ್ಸ್ ಕೂಡ ದೇಶೀಯ ಮತ್ತು ಅಂತರರಾಷ್ಟ್ರೀಯ ಹೂಡಿಕೆಯನ್ನು ಮುಕ್ತವಾಗಿ ಸ್ವಾಗತಿಸುವ ಭಾರತದಲ್ಲೇ ಬೆಳೆದಿದೆ ಎಂದಿದೆ. ಆದರೆ ಈ ಮುಕ್ತತೆಯು ಕಾನೂನಿನ ಆಡಳಿತಕ್ಕೆ ಒಳಪಟ್ಟಿರಬೇಕು. ಭಾರತ ಸರ್ಕಾರ ಈಗಾಗಲೇ ಹೇಳಿರುವಂತೆ, ನಿಯಂತ್ರಕ ಪ್ರಕ್ರಿಯೆಗಳು ಭಾರತೀಯ ಅಥವಾ ವಿದೇಶಿ ಯಾವುದೇ ಅರ್ಜಿದಾರರಿಗೂ ಒಂದೇ ಆಗಿರುತ್ತವೆ. ಸ್ವತಃ ಜಿಯೋದ ಸ್ಯಾಟಲೈಟ್ ಇಂಟರ್ನೆಟ್ ಸೇವೆಗಳು ಕೂಡ ಇಂದಿಗೂ ಸರ್ಕಾರದ ಅಧಿಕೃತ ಅನುಮತಿಗಾಗಿ ಕಾಯುತ್ತಿವೆ" ಎಂದು ತಿಳಿಸಿದೆ.

# ನಾನೇ ನಿನ್ನ ಬಾಸ್: ಮಹಿಳಾ ಸಹೋದ್ಯೋಗಿಗೆ IAS ಅಧಿಕಾರಿ ಕಿರಿಕ್!

**ಶ್ರೀನಗರ:** ಸರ್ಕಾರಿ ವರ್ಚುವಲ್ ಸಭೆಯೊಂದರಲ್ಲಿ ಮಹಿಳಾ ಅಧಿಕಾರಿಯೊಬ್ಬರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎನ್ನಲಾದ ಹಿರಿಯ ಐಎಎಸ್ ಅಧಿಕಾರಿಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಭಾರೀ ಆಕ್ರೋಶಕ್ಕೆ ಕಾರಣವಾಗಿದೆ. ಜಮ್ಮು-ಕಾಶ್ಮೀರದ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ ಕಾರ್ಯದರ್ಶಿ ಕುಮಾರ್ ರಾಜೀವ್ ರಂಜನ್ ಅವರು, ಜಮ್ಮು-ಕಾಶ್ಮೀರ ಆಡಳಿತ ಸೇವೆ ಅಧಿಕಾರಿ ಹಾಗೂ ಉದ್ಯೋಗ ವಿಭಾಗದ ಸಹಾಯಕ ನಿರ್ದೇಶಕಿ ಬೀನಿಶ್ ವಾನಿ ಅವರೊಂದಿಗೆ ವಾಗ್ವಾದ ನಡೆಸಿರುವುದು ವಿಡಿಯೋದಲ್ಲಿ ಕಂಡುಬಂದಿದೆ. ಮಿಷನ್ ಯುವಾ ಯೋಜನೆಯ ಪ್ರಗತಿ ಪರಿಶೀಲನೆಗಾಗಿ ಆಯೋಜಿಸಿದ್ದ ಸಭೆಯಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದೆ. ಗ್ರಾಮೀಣ ಜೀವನೋಪಾಯಕ್ಕೆ ಸಂಬಂಧಿಸಿದ ರಾಷ್ಟ್ರೀಯ ಯೋಜನೆಯ ಪ್ರಗತಿ ಪರಿಶೀಲನೆ ವೇಳೆ ಇಬ್ಬರು ಅಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆದಿದೆ ಎಂದು ಮೂಲಗಳು ತಿಳಿಸಿವೆ.

**'ನಾನೇ ನಿನ್ನ ಬಾಸ್' ಎಂದು ಗದರಿಸಿದ ಅಧಿಕಾರಿ?:** ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೋದಲ್ಲಿ ರಾಜೀವ್ ರಂಜನ್ ಅವರು ಕೋಪದಿಂದ ಮಾತನಾಡುತ್ತಾ ಬೀನಿಶ್ ವಾನಿ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎನ್ನಲಾದ ದೃಶ್ಯಗಳಿವೆ. ಅಲ್ಲದೆ, 'ನಾನೇ ನಿನ್ನ ಬಾಸ್' ಎಂದು ಹೇಳಿರುವುದೂ ವಿಡಿಯೋದಲ್ಲಿ ಕೇಳಿಬರುತ್ತದೆ.

ಈ ಕುರಿತು ಪ್ರತಿಕ್ರಿಯಿಸಿರುವ ಬೀನಿಶ್ ವಾನಿ, ಸಭೆಯಲ್ಲಿ ಇಂತಹ ಘಟನೆ ನಡೆದಿರುವುದನ್ನು ದೃಢಪಡಿಸಿದ್ದಾರೆ. ವೈರಲ್ ಆಗಿರುವ ವಿಡಿಯೋ ತಿರುಚಿದದ್ದಲ್ಲ ಅಥವಾ ಕೃತಕ ಬುದ್ಧಿಮತ್ತೆ ಬಳಸಿ ಸೃಷ್ಟಿಸಿದ್ದಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕಾಲಿನ ಮೂಳೆ ಮುರಿತದಿಂದ ರಜೆಯಲ್ಲಿದ್ದರೂ, ಮನೆಯಲ್ಲಿದ್ದುಕೊಂಡೇ ವರ್ಚುವಲ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದಾಗಿ ಅವರು ತಿಳಿಸಿದ್ದಾರೆ. "ಮಹಿಳೆಯ ಘನತೆಯನ್ನು ಕಾಪಾಡಬೇಕು. ಯಾರೂ ನಮ್ಮನ್ನು ಹೀಗೆ ನಡೆಸಿಕೊಳ್ಳಲು ಸಾಧ್ಯವಿಲ್ಲ" ಎಂದು ಬೀನಿಶ್ ವಾನಿ ಹೇಳಿದ್ದಾರೆ.

**'ಕೋಪದ ಭರದಲ್ಲಿ ಹೇಳಿದ್ದರೆ ಕ್ಷಮೆ ಕೇಳುತ್ತೇನೆ:** ಮತ್ತೊಂದೆಡೆ, ಈ ಆರೋಪಕ್ಕೆ ಪ್ರತಿಕ್ರಿಯಿಸಿರುವ ರಾಜೀವ್ ರಂಜನ್, ಮಾತಿನ ಭರದಲ್ಲಿ ಏನಾದರೂ ಹೇಳಿದ್ದರೆ ಕ್ಷಮೆಯಾಚಿಸುವುದಾಗಿ ತಿಳಿಸಿದ್ದಾರೆ. ಮಹಿಳಾ ಅಧಿಕಾರಿಗೆ ಮೌನವಾಗಿರುವಂತೆ ಹಲವು ಬಾರಿ ಸೂಚಿಸಿದರೂ, ಅವರು ತಮ್ಮನ್ನು ಪ್ರಚೋದಿಸುತ್ತಲೇ ಇದ್ದರು ಎಂದು ರಂಜನ್ ಆರೋಪಿಸಿದ್ದಾರೆ. "ಅಧಿಕಾರಿಗಳನ್ನು ಪ್ರಶ್ನಿಸದಿದ್ದರೆ ಪರಿಶೀಲನಾ ಸಭೆಗಳನ್ನು ಹೇಗೆ ನಡೆಸುವುದು? ಅವರ ಜವಾಬ್ದಾರಿಯನ್ನು ಹೇಗೆ ನಿಗದಿಪಡಿಸುವುದು?" ಎಂದು ಅವರು ಪ್ರಶ್ನಿಸಿದ್ದಾರೆ. ತಮ್ಮೊಂದಿಗೆ ಮಾತನಾಡುವಾಗ ಬೀನಿಶ್ ವಾನಿ ಕೂಡ 'ಹೆಲ್ ವಿತ್ ಯು' ಎಂಬ ಪದಗಳನ್ನು ಬಳಸಿದ್ದಾರೆ ಎಂದು ರಂಜನ್ ಆರೋಪಿಸಿದ್ದಾರೆ.

# ಡಿ.11, 12ಕ್ಕೆ ಕೆನಡಾಗೆ ಪ್ರಧಾನಿ ನರೇಂದ್ರ ಮೋದಿ

**ನವದೆಹಲಿ:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಡಿಸೆಂಬರ್ 11 ಮತ್ತು 12 ರಂದು ಕೆನಡಾಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ. ಕೆನಡಾದ ಪ್ರಧಾನಿ ಮಾರ್ಕ್ ಕಾರ್ನೆ ಹಾಗೂ ಪಿಎಂ ಮೋದಿ ಅವರ ನಡುವೆ ನಡೆದ ಸುದೀರ್ಘ ದೂರವಾಣಿ ಸಂಭಾಷಣೆಯ ಬೆನ್ನಲ್ಲೇ, ಒಟ್ಟಾವಾದಲ್ಲಿರುವ ಭಾರತೀಯ ಹೈಕಮಿಷನ್ ಈ ಮಹತ್ವದ ಪ್ರವಾಸವನ್ನು ಅಧಿಕೃತವಾಗಿ ಪ್ರಕಟಿಸಿದೆ. ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಕೂಡ ಗುರುವಾರ ಬೆಳಗ್ಗೆ ಕ್ಯಾಲ್ಗರಿಯ ಸ್ಥಳೀಯ ರೆಸ್ಟೋರೆಂಟ್‌ನಲ್ಲಿ ಭೇಟಿಯಾದವರೊಂದಿಗೆ ಮಾತನಾಡುವಾಗ ಮೋದಿ ಅವರ ಭೇಟಿಯ ದಿನಾಂಕವನ್ನು ಖಚಿತಪಡಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಉಭಯ ದೇಶಗಳ ನಡುವೆ ಉಂಟಾಗಿದ್ದ ರಾಜತಾಂತ್ರಿಕ ಉದ್ವಿಗ್ನತೆಯ ಬಳಿಕ ಭಾರತ ಮತ್ತು ಕೆನಡಾ ನಡುವಿನ ಸಂಬಂಧಗಳನ್ನು ಬಲಪಡಿಸುವುದು ಈ ಭೇಟಿಯ ಪ್ರಮುಖ ಉದ್ದೇಶವಾಗುವ ನಿರೀಕ್ಷೆಯಿದೆ. ಉಭಯ ನಾಯಕರ ನಡುವಿನ ಮಾತುಕತೆಯಲ್ಲಿ ಪರಸ್ಪರ ವಿಶ್ವಾಸ ಮರುಸ್ಥಾಪನೆ, ಆರ್ಥಿಕ ಸಹಕಾರ ವಿಸ್ತರಣೆ ಹಾಗೂ ಹೊಸ ಪರಸ್ಪರ ಹಿತಾಸಕ್ತಿಯ ಕ್ಷೇತ್ರಗಳನ್ನು ಗುರುತಿಸುವ ಕುರಿತು ಚರ್ಚೆ ನಡೆಯುವ ಸಾಧ್ಯತೆಯಿದೆ.

ವ್ಯಾಪಾರವು ಮಾತುಕತೆಯ ಪ್ರಮುಖ ವಿಷಯವಾಗುವ ನಿರೀಕ್ಷೆಯಿದ್ದು, ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ (ಸಿಇಪಿಎ) ಕುರಿತ ಮಾತುಕತೆಗಳನ್ನು ಮುಂದುವರಿಸಲು ಎರಡೂ ದೇಶಗಳು ಆಸಕ್ತಿ ಹೊಂದಿವೆ. ಈ ಪ್ರಸ್ತಾವಿತ ಒಪ್ಪಂದವು ಆರ್ಥಿಕ ಸಂಬಂಧಗಳನ್ನು ಮತ್ತಷ್ಟು ಆಳಗೊಳಿಸುವುದರ ಜೊತೆಗೆ ಎರಡೂ ದೇಶಗಳ ಉದ್ಯಮಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುವ ಗುರಿ ಹೊಂದಿದೆ. ಇಂಧನ, ತಂತ್ರಜ್ಞಾನ, ಭದ್ರತೆ ಮತ್ತು ಜನರ ನಡುವಿನ ಸಂಪರ್ಕ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿನ ಸಹಕಾರದ ಬಗ್ಗೆಯೂ ಚರ್ಚೆ ನಡೆಯುವ ಸಾಧ್ಯತೆಯಿದೆ. ಈ ಕ್ಷೇತ್ರಗಳಲ್ಲಿ ಹೆಚ್ಚಿನ ಸಹಕಾರವು ಭಾರತ-ಕೆನಡಾ ಪಾಲುದಾರಿಕೆಯ ವ್ಯಾಪ್ತಿಯನ್ನು ವಿಸ್ತರಿಸಲು ನೆರವಾಗಬಹುದು.

# ತಿರಂಗಾ ಯಾತ್ರೆಗೂ ಮುನ್ನ ಸಿಜೆಪಿ ಸಂಸ್ಥಾಪಕ ದಿಪ್ಕೆಗೆ ದೆಹಲಿ ಪೊಲೀಸರಿಂದ ನೋಟಿಸ್: ನಿಯಮ ಉಲ್ಲಂಘಿಸದಂತೆ ಎಚ್ಚರಿಕೆ

**ನವದೆಹಲಿ:** ಕಾಕ್ರೋಚ್ ಜನತಾ ಪಕ್ಷ ಕನ್ನಾಟ್ ಪ್ಲೇಸ್‌ನ ಸೆಂಟ್ರಲ್ ಪಾರ್ಕ್‌ನಲ್ಲಿ ತ್ರಿವರ್ಣ ಧ್ವಜ ಹಾರಿಸುವ ಕಾರ್ಯಕ್ರಮ ಹಮ್ಮಿಕೊಂಡಿರುವ ಬೆನ್ನಲ್ಲೇ, ದೆಹಲಿ ಪೊಲೀಸರು ಸಿಜೆಪಿ ಸಂಸ್ಥಾಪಕ ಅಭಿಜೀತ್ ದಿಪ್ಕೆ ಅವರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ದೆಹಲಿಯಲ್ಲಿ ದಿಪ್ಕೆ ವಾಸವಿರುವ ನಿವಾಸಕ್ಕೆ ದೆಹಲಿ ಪೊಲೀಸ್ ಸಿಬ್ಬಂದಿ ಆಗಮಿಸಿ ನೋಟಿಸ್ ನೀಡಿದ್ದಾರೆ. ಕನ್ನಾಟ್ ಪ್ಲೇಸ್ ಪ್ರದೇಶದಲ್ಲಿ ಬಿಎನ್‌ಎಸ್ ಸೆಕ್ಷನ್ 163 ಅಡಿ ನಿಷೇಧಾಜ್ಞೆ ಜಾರಿಯಲ್ಲಿದೆ. ಅಲ್ಲದೆ, ಸಂಜೆ ನಡೆಯಲಿರುವ ತಿರಂಗಾ ಯಾತ್ರೆಗೆ ಎನ್‌ಡಿಎಂಸಿ ಅನುಮತಿ ನೀಡಿಲ್ಲ. ಒಂದು ವೇಳೆ ಸಿಜೆಪಿ ಈ ಯಾತ್ರೆಯನ್ನು ಕನ್ನಾಟ್ ಪ್ಲೇಸ್‌ನಲ್ಲಿ ನಡೆಸಲು ನಿರ್ಧರಿಸಿದರೆ, ಅದು ಬಿಎನ್‌ಎಸ್ ಸೆಕ್ಷನ್ 163ರ ಉಲ್ಲಂಘನೆಯಾಗುತ್ತದೆ. ಈ ವೇಳೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ತ್ರಿವರ್ಣ ಧ್ವಜ ಹಾರಿಸುವುದು ಕಾನೂನು ಪ್ರಕಾರ ತಪ್ಪಲ್ಲ. ಆದರೆ, ಅನುಮತಿಯಿಲ್ಲದೆ ಮೆರವಣಿಗೆ ನಡೆಸುವುದು ಮತ್ತು ಜನರನ್ನು ಸೇರಿಸುವುದು ನಿರ್ಬಂಧಗಳ ಉಲ್ಲಂಘನೆಯಾಗುತ್ತದೆ. ಆಗ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿರುವ ಪೊಲೀಸರು, ಧ್ವಜ ಸಂಹಿತೆಯ ಪ್ರಕಾರ ರಾಷ್ಟ್ರಧ್ವಜವನ್ನು ಸೂಕ್ತ ಗೌರವದೊಂದಿಗೆ ನಡೆಸಿಕೊಳ್ಳಬೇಕೆಂಬ ನಿಯಮಗಳ ಬಗ್ಗೆಯೂ ಮಾಹಿತಿ ನೀಡಿದ್ದಾರೆ.





ಇನ್ನೊಂದೆಡೆ, ರಾಷ್ಟ್ರ ರಾಜಧಾನಿಯಲ್ಲಿ ಅರಾಜಕತೆಯನ್ನು ಉತ್ತೇಜಿಸುತ್ತಿದ್ದಾರೆಂಬ ಆರೋಪಗಳನ್ನು ತಳ್ಳಿಹಾಕಿರುವ ಅಭಿಜೀತ್ ದಿಪ್ಕೆ, ಅಲ್ಲಿ ಹೇರಲಾಗಿರುವ ವ್ಯಾಪಕ ಆಡಳಿತಾತ್ಮಕ ನಿರ್ಬಂಧಗಳಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಅಧಿಕಾರದಲ್ಲಿರುವವರಿಂದ ಹೊಣೆಗಾರಿಕೆಯನ್ನು ಕೇಳುವುದು ಅರಾಜಕತೆಯಲ್ಲ, ಬದಲಾಗಿ ಪ್ರಜಾಪ್ರಭುತ್ವದ ಅತ್ಯಂತ ಮೂಲಭೂತ ಅಭಿವ್ಯಕ್ತಿಯಾಗಿದೆ ಎಂದು ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರತಿಭಟನೆಗಳು ಆರ್ಥಿಕ ಚಟುವಟಿಕೆಗಳಿಗೆ ಅಡ್ಡಿಪಡಿಸುತ್ತವೆ. ಅಲ್ಲದೆ, ಆಡಳಿತದ ಕಠಿಣ ಕ್ರಮಗಳು ಮತ್ತು ಹಠಾತ್ ಸಾರಿಗೆ ಸಂಪರ್ಕ ತಡೆಗಳು ಸಾರ್ವಜನಿಕರು ಹಾಗೂ ವ್ಯಾಪಾರಿಗಳಿಗೆ ಸಂಕಷ್ಟವನ್ನುಂಟು ಮಾಡುತ್ತವೆ ಎಂಬ ವಾದವನ್ನು ದಿಪ್ಕೆ ತಳ್ಳಿಹಾಕಿದ್ದಾರೆ.

ಇದೇ ವೇಳೆ, ಪ್ರತಿಭಟನಾಕಾರರನ್ನು ಗೊಂದಲ ಸೃಷ್ಟಿಸುವವರು ಎಂಬ ಹೇಳಿಕೆಯನ್ನು ಖಂಡಿಸಿದ ದಿಪ್ಕೆ, ಬೀದಿ ಪ್ರತಿಭಟನೆಗಳ ವಿಚಾರದಲ್ಲಿ ರಾಜಕೀಯ ದ್ವಿಮುಖ ನೀತಿ ಇದೆ. ಅನ್ಯಾಯದ ವಿರುದ್ಧ ಬೀದಿಗಿಳಿದು ಪ್ರತಿಭಟಿಸುವುದು ಅರಾಜಕತೆಯಲ್ಲ. ಮತ್ತು ಸಾರ್ವಜನಿಕ ಹುದ್ದೆಗಳಲ್ಲಿರುವವರನ್ನು ಪ್ರಶ್ನಿಸುವುದು ಖಂಡಿತವಾಗಿಯೂ ಅರಾಜಕತೆಯಲ್ಲ ಎಂದಿದ್ದಾರೆ.

ಕನ್ನಾಟ್ ಪ್ಲೇಸ್‌ನಲ್ಲಿ ಪ್ರತಿಭಟನೆ ನಡೆಸದಂತೆ ನೋಟಿಸ್ ಮೂಲಕ ನಿರ್ಬಂಧ ವಿಧಿಸಲಾಗಿದೆ. ಸಿಜೆಪಿ ಸಂಜೆ ಐದು ಗಂಟೆಗೆ ಪ್ರತಿಭಟನಾ ಮೆರವಣಿಗೆಗೆ ಕರೆ ನೀಡಿದ್ದು, ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಉಂಟಾಗದಂತೆ ತಡೆಯಲು, 6,000ಕ್ಕೂ ಹೆಚ್ಚು ದೆಹಲಿ ಪೊಲೀಸ್ ಸಿಬ್ಬಂದಿ ಹಾಗೂ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ 220 ತುಕಡಿಗಳನ್ನು ನಿಯೋಜಿಸಲಾಗಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತದ ಖಾಯಂ ಪ್ರತಿನಿಧಿ ರಾಯಭಾರಿ ಹರೀಶ್ ಪರ್ವತನೇನಿ ವಿಷಾದ

# ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಉಲ್ಬಣದ ಬಗ್ಗೆ ಭಾರತ ಕಳವಳ; ನೌಕೆಗಳ ದಾಳಿಗೆ ಖಂಡನೆ

**ಹೈದರಾಬಾದ್:** ಮಧ್ಯಪ್ರಾಚ್ಯದಲ್ಲಿ ಉಲ್ಬಣಗೊಂಡಿರುವ ಸಂಘರ್ಷವು ತೀವ್ರ ಕಳವಳಕಾರಿಯಾಗಿದೆ ಎಂದು ವಿಶ್ವಸಂಸ್ಥೆಯಲ್ಲಿ ಭಾರತ ತಿಳಿಸಿದೆ.

ಗುರುವಾರ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮಧ್ಯಪ್ರಾಚ್ಯದ ಪರಿಸ್ಥಿತಿಯ ಕುರಿತಾದ ಚರ್ಚೆಯ ಸಂದರ್ಭದಲ್ಲಿ ವಿಶ್ವಸಂಸ್ಥೆಯಲ್ಲಿನ ಭಾರತದ ಖಾಯಂ ಪ್ರತಿನಿಧಿ ರಾಯಭಾರಿ ಹರೀಶ್ ಪರ್ವತನೇನಿ ಈ ಕುರಿತು ಮಾತನಾಡಿದರು. ಮಧ್ಯಪ್ರಾಚ್ಯದ ಸುರಕ್ಷತೆ, ಭದ್ರತೆ ಮತ್ತು ಸ್ಥಿರತೆಯಲ್ಲಿ ಭಾರತ ಅತ್ಯಂತ ಹೆಚ್ಚಿನ ಹಿತಾಸಕ್ತಿ ಹೊಂದಿದೆ ಎಂದರು.

**1.** ಮಧ್ಯಪ್ರಾಚ್ಯದ ಭದ್ರತೆಗೆ ಭಾರತ ಹಿತಾಸಕ್ತಿ ಹೊಂದಿದೆ
**2.** ಈ ಜನರಿಗೆ ಸ್ಥಿರತೆ, ಭದ್ರತೆ ಬಲಪಡಿಸುವುದು ಅತ್ಯಗತ್ಯ.
**3.** ಉದ್ವಿಗ್ನತೆ ಹೆಚ್ಚಾಗುತ್ತಿರುವುದು ತೀವ್ರ ಕಳವಳಕಾರಿ

ಮಧ್ಯಪ್ರಾಚ್ಯದ ಜನರಿಗೆ ಸಾಮಾನ್ಯ ಸ್ಥಿತಿ ಮತ್ತು ಶಾಶ್ವತ ಶಾಂತಿ ಬೇಕು. ಶಾಂತಿ ಎಂದರೆ ಯುದ್ಧದ ಅನುಪಸ್ಥಿತಿ ಮಾತ್ರವಲ್ಲ. ಈ ಪ್ರದೇಶದ ಜನರಿಗೆ ಸ್ಥಿರತೆ ಮತ್ತು ಭದ್ರತೆಯನ್ನು ಬಲಪಡಿಸುವುದು ಅತ್ಯಗತ್ಯ. ಹೆಚ್ಚು ಸುರಕ್ಷಿತ, ಸ್ಥಿರ ಮತ್ತು ಸಮೃದ್ಧ ಜಗತ್ತಿಗೆ ಕಾರಣವಾಗುವ ಅವರ ಯೋಗಕ್ಷೇಮಕ್ಕೆ ಭಾರತ ಬದ್ಧವಾಗಿದೆ ಎಂದು ಪ್ರತಿಪಾದಿಸಿದ್ದಾರೆ..

ಈ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚಾಗುತ್ತಿರುವುದು ತೀವ್ರ ಕಳವಳಕಾರಿ ಎಂದ ಅವರು, ಇಂದು ಅಂತಾರಾಷ್ಟ್ರೀಯ ಸಮುದಾಯ ಎದುರಿಸುತ್ತಿರುವ ಪ್ರಮುಖ ಸವಾಲಾಗಿ ಪರಿಣಮಿಸಿರುವ ಈ ಪರಿಸ್ಥಿತಿಯಲ್ಲಿ, ಸಂಯಮ ಪಾಲಿಸುವಂತೆ ಮತ್ತು ಉದ್ವಿಗ್ನತೆಯನ್ನು ತಗ್ಗಿಸುವ ಬದ್ಧತೆಯನ್ನು ತಿಳಿಸಿದ್ದಾರೆ.

ಕಳೆದ ಕೆಲವು ದಿನಗಳಲ್ಲಿ ಸೌದಿ ವಿಮಾನ ನಿಲ್ದಾಣಗಳು ಸೇರಿದಂತೆ ನಾಗರಿಕ ಮೂಲಸೌಕರ್ಯಗಳ ಮೇಲೆ ನಡೆದ ದಾಳಿಗಳನ್ನು ಭಾರತ ಬಲವಾಗಿ ಖಂಡಿಸಿದೆ. ಈ ದಾಳಿಗಳಿಂದಾಗಿ ಜೀವಹಾನಿ ಸಂಭವಿಸಿದ್ದು, ರಿಯಾದ್‌ನಲ್ಲಿ ಭಾರತೀಯ ಪ್ರಜೆ ಮೊಹಮ್ಮದ್ ಯೂಸುಫ್ ಅಲಿ ಕೂಡ ಮೃತಪಟ್ಟಿದ್ದಾರೆ.



ಹರೀಶ್ ಪರ್ವತನೇನಿ

ಸೌದಿ ಅರೇಬಿಯಾದ ಸಾರ್ವಭೌಮತ್ವವನ್ನು ರಕ್ಷಿಸುವ ವಿಚಾರದಲ್ಲಿ ಆ ದೇಶದ ಸರ್ಕಾರ ಮತ್ತು ಜನರೊಂದಿಗೆ ಭಾರತವು ಸಂಪೂರ್ಣವಾಗಿ ಒಗ್ಗಟ್ಟಿನಿಂದ ನಿಲ್ಲುತ್ತದೆ. ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಸಂಘರ್ಷವನ್ನು ಪರಿಹರಿಸುವ ಅಗತ್ಯವನ್ನು ಪುನರುಚ್ಚರಿಸಿದ್ದಾರೆ.

## ವಾಣಿಜ್ಯ ನೌಕೆಗಳು, ನಾವಿಕರ ಮೇಲಿನ ಎಲ್ಲಾ ದಾಳಿಗಳು ಕಾನೂನುಬಾಹಿರ

ಭಾರತದ ಧ್ವಜ ಹೊಂದಿದ್ದ ಎಂಬಿ ಡಿಪಿ ವರ್ಲ್ಡ್ ಕಾವೇರಿ, ಕಳೆದ ವಾರ ಎಂಟಿ ಪೆಟ್ರೋ ಡಾಲ್ಫಿನ್ ಮತ್ತು ಎಂಟಿ ವಾಲ್ಥೆರಾ ಮತ್ತು ಹಿಂದಿನ ವಾರ ಎಂಟಿ ಆನ್ ಪೀಸ್ ಮತ್ತು ಎಂಟಿ ಕಾಜಿಮಾ III ನಂತಹ ವಾಣಿಜ್ಯ ಸಾಗಣೆಯ ಮೇಲಿನ ಇತ್ತೀಚಿನ ದಾಳಿಗಳು ತೀವ್ರ ಕಳವಳಕಾರಿಯಾಗಿದೆ. ವಾಣಿಜ್ಯ ನೌಕೆಗಳು ಮತ್ತು ನಾವಿಕರ ಮೇಲಿನ ಎಲ್ಲಾ ದಾಳಿಗಳು ಕಾನೂನುಬಾಹಿರ ಮತ್ತು ನೈತಿಕವಾಗಿ ಸಮರ್ಥಿಸಿಕೊಳ್ಳಲಾಗದಂತಹವು. ಇಂತಹ ಹಲವು ಹಡಗುಗಳಲ್ಲಿ ಭಾರತೀಯ ನಾವಿಕರಿದ್ದಾರೆ. ಅವರ ಸುರಕ್ಷತೆ ಮತ್ತು ಭದ್ರತೆಯು ನಮ್ಮ ನೇರ ಜವಾಬ್ದಾರಿಯಾಗಿದೆ ಎಂದರು. ಈ ದಾಳಿಗಳ ಸಂದರ್ಭದಲ್ಲಿ ಭಾರತೀಯ ನಾವಿಕರ ಸುರಕ್ಷತೆ ಯನ್ನು ಖಚಿತಪಡಿಸಿಕೊಳ್ಳಲು ಅಮೂಲ್ಯವಾದ ಬೆಂಬಲ ನೀಡಿದ ಓಮನ್ ಮತ್ತು ಯುಎಇ ಅಧಿಕಾರಿಗಳಿಗೆ ಅವರು ಧನ್ಯವಾದ ತಿಳಿಸಿದ್ದಾರೆ.

ವಾಣಿಜ್ಯ ನೌಕೆಗಳು, ನಾವಿಕರು ಮತ್ತು ನಾಗರಿಕ ಮೂಲಸೌಕರ್ಯಗಳ ಮೇಲಿನ ದಾಳಿಗಳು ನಿಲ್ಲಬೇಕು. ಅಂತಾರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ, ಅಂತಾರಾಷ್ಟ್ರೀಯ ಜಲಮಾರ್ಗಗಳಲ್ಲಿ ಸಂಚಾರ ಸ್ವಾತಂತ್ರ್ಯ ಹಾಗೂ ಕಡಲ ವಾಣಿಜ್ಯದ ಸುರಕ್ಷಿತ ಮತ್ತು ಅಡೆತಡೆಯಿಲ್ಲದ ಸಂಚಾರ, ನಾವಿಕರ ಸುರಕ್ಷತೆ ಮತ್ತು ಭದ್ರತೆಯು ಭಾರತ ಸರ್ಕಾರಕ್ಕೆ ಆದ್ಯತೆಯ ವಿಷಯವಾಗಿದೆ. ಪದೇ ಪದೇ ನಡೆಯುತ್ತಿರುವ ಇಂತಹ ದಾಳಿಗಳು, ಈಗಾಗಲೇ ಅತ್ಯಂತ ಸೂಕ್ಷ್ಮವಾಗಿರುವ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸುವ ಅಪಾಯವನ್ನು ಉಂಟುಮಾಡುತ್ತವೆ ಎಂದರು.

## ಮಿನಿ ನ್ಯೂಸ್

### ಭಾರತ ವಿರೋಧಿ ದ್ವೇಷ ಹಿಂಸಾಚಾರಕ್ಕೆ ತಿರುಗುತ್ತಿದೆ

**ವಾಷಿಂಗ್ಟನ್:** ಅಮೆರಿಕದ ಇಲಿನಾಯ್ಸ್‌ನ ಹಿಂದೂ ದೇವಾಲಯವೊಂದರಲ್ಲಿ ಗುಂಡಿನ ದಾಳಿ ನಡೆಸಲು ಯತ್ನಿಸಿದ 19 ವರ್ಷದ ಯುವಕನನ್ನು ಚಿಕಾಗೋ ಸಮೀಪದ ಪ್ಯಾಲಟೈನ್‌ನಲ್ಲಿ ಬಂಧಿಸಲಾಗಿದೆ. ಘಟನೆಗೆ ಅಮೆರಿಕದ ಅನೇಕ ಜನಪ್ರತಿನಿಧಿಗಳು ಆಘಾತ ವ್ಯಕ್ತಪಡಿಸಿದ್ದು, ಭಾರತ ವಿರೋಧಿ ದ್ವೇಷವು ಹಿಂಸಾಚಾರಕ್ಕೆ ತಿರುಗುತ್ತಿದೆ ಎಂದಿದ್ದಾರೆ. ದಾಳಿ ಆರೋಪಿ ಪ್ಯಾಲಟೈನ್‌ನ ಅಲೆಕ್ಸಾಂಡ್ರೋಸ್ ಪಾಪೊರಾಕಿಸ್ (19) ಎಂಬಾತನನ್ನು ಅಕ್ಟೋಬರ್ 11 ರಂದು ಬಂಧಿಸಲಾಗಿದೆ. ಯುವಕನ ವಿರುದ್ಧ ಭಯೋತ್ಪಾದಕ ಬೆದರಿಕೆ ಹಾಕಿದ ಆರೋಪ ಹಾಗೂ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಆರೋಪವನ್ನು ಹೊರಿಸಲಾಯಿತು. ಗುಂಡಿನ ದಾಳಿ ಸಂದರ್ಭದಲ್ಲಿ ಯುವಕನ ಬಳಿಯಿದ್ದ ಬಂದೂಕು ಜಾಮ್ ಆಗಿ ಗುಂಡು ಹಾರಿಸಲು ಸಾಧ್ಯವಾಗಿರಲಿಲ್ಲ. ಇದರಿಂದ, ಆತನ ಸ್ಕೆಚ್ ವಿಫಲವಾಗಿತ್ತು. ಘಟನೆ ಕುರಿತು ಆಘಾತ ವ್ಯಕ್ತಪಡಿಸಿ ಮಾತನಾಡಿರುವ ನ್ಯೂಯಾರ್ಕ್‌ನ ಡೆಮಾಕ್ರಟಿಕ್ ಸೆನೆಟರ್ ಶುಮರ್, ಅಮೆರಿಕದಲ್ಲಿ ಭಾರತ ವಿರೋಧಿ ಮತ್ತು ಹಿಂದೂ ವಿರೋಧಿ ಹೇಳಿಕೆಗಳು ಆತಂಕಕಾರಿ ಮಟ್ಟದಲ್ಲಿವೆ. ಈಗ ಆ ದ್ವೇಷವು ಹಿಂಸಾಚಾರವಾಗಿ ಪರಿವರ್ತನೆಗೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ ಎಂದಿದ್ದಾರೆ. ದೇವಾಲಯವೊಂದರಲ್ಲಿ ಸಾಮೂಹಿಕ ಗುಂಡಿನ ದಾಳಿ ನಡೆಸುವ ಸಂಚನ್ನು ವಿಫಲಗೊಳಿಸುವಲ್ಲಿ ಪೊಲೀಸರು ಕೈಗೊಂಡ ಸಮಯೋಚಿತ ಕ್ರಮವನ್ನು ಸೆನೆಟರ್‌ಗಳಾದ ಚಕ್ ಶುಮರ್, ಜಾನ್ ಕಾರ್ನಿನ್ ಮತ್ತು ಜಾಕಿ ರೋಸೆನ್ ಶ್ಲಾಘಿಸಿದ್ದಾರೆ.

### 17 ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಂಕ್ಷಿಪ್ತ ಪರಿಷ್ಕರಣೆ

**ನವದೆಹಲಿ:** 17 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಗಳ 'ವಿಶೇಷ ಸಂಕ್ಷಿಪ್ತ ಪರಿಷ್ಕರಣೆ'ಯನ್ನು ನಡೆಸುವುದಾಗಿ ಭಾರತೀಯ ಚುನಾವಣಾ ಆಯೋಗವು ಘೋಷಿಸಿದೆ. ಚುನಾವಣಾ ಆಯೋಗದ ಅಕ್ರಮ ಆರೋಪ ಮತ್ತು ಎಸ್‌ಐಆರ್ ವಿರುದ್ಧ ಸಿಜೆಪಿ ಮತ್ತು ಇಂಡಿಯಾ ಮೈತ್ರಿಕೂಟದ ಪ್ರತಿಭಟನೆಯ ಮಧ್ಯೆ ಚುನಾವಣಾ ಆಯೋಗವು ಎಸ್‌ಎಸ್‌ಆರ್ ಪ್ರಕಟಿಸಿದೆ. 17 ರಾಜ್ಯಗಳ ಪೈಕಿ ಮುಂದಿನ ವರ್ಷ ವಿಧಾನಸಭೆ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್ ಮತ್ತು ಮಣಿಪುರ ಕೂಡ ಸೇರಿದೆ. ಈ ಪ್ರಕ್ರಿಯೆಗೆ ಜನವರಿ 1, 2027 ಅನ್ನು ಅರ್ಹತಾ ದಿನಾಂಕವನ್ನಾಗಿ ನಿಗದಿಪಡಿಸಲಾಗಿದೆ. ಯುವ ಮತದಾರರು ಮತ್ತು ಮೊದಲ ಬಾರಿಗೆ ಮತ ಚಲಾಯಿಸುವವರು ಸೇರಿದಂತೆ, ಅರ್ಹರಾದ ಎಲ್ಲಾ ಮತದಾರರನ್ನು ನೋಂದಾಯಿಸಲು ಅನುಕೂಲವಾಗುವಂತೆ ಚುನಾವಣಾ ಆಯೋಗವು ಈ ನಿರ್ಧಾರವನ್ನು ಕೈಗೊಂಡಿದೆ. ಯಾವ ರಾಜ್ಯಗಳು ಮತ್ತು ಕೇಂದ್ರಾಳಿದ ಪ್ರದೇಶಗಳಲ್ಲಿ 'ವಿಶೇಷ ತೀವ್ರ ಪರಿಷ್ಕರಣೆ' ಪ್ರಕ್ರಿಯೆ ಈಗಾಗಲೇ ನಡೆಯುತ್ತಿದೆಯೋ ಅಥವಾ ಇತ್ತೀಚೆಗಷ್ಟೇ ಪೂರ್ಣಗೊಂಡಿದೆಯೋ, ಅಂತಹ ಕಡೆಗಳಲ್ಲಿ ಪರಿಷ್ಕರಣೆಯ ವೇಳಾಪಟ್ಟಿಯನ್ನು ನಂತರ ಪ್ರಕಟಿಸುವುದಾಗಿ ಚುನಾವಣಾ ಆಯೋಗ ಪ್ರಕಟಿಸಿದೆ.

### ಆಕೆಗೆ 30, ಆತನಿಗೆ 75: ಲವ್ ನಲ್ಲಿ ಬಿದ್ದ ಯುವತಿ!

**ಲಖನೌ:** ಉತ್ತರ ಪ್ರದೇಶದ ಔರೈಯಾ ಜಿಲ್ಲೆಯ 30 ವರ್ಷದ ಬ್ಲಾಗರ್ ಒಬ್ಬರು, 75 ವರ್ಷದ ವ್ಯಕ್ತಿಯೊಬ್ಬರನ್ನು ಮದುವೆಯಾಗಲು ಸಿದ್ಧರಾಗಿದ್ದಾರೆ. ಇವರಿಬ್ಬರ ನಡುವಿನ 45 ವರ್ಷಗಳ ವಯಸ್ಸಿನ ಅಂತರ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ. ಇವರ ನಿಶ್ಚಿತಾರ್ಥ ಸಮಾರಂಭದ ಫೋಟೋಗಳು ಮತ್ತು ವಿಡಿಯೋಗಳು ಆನ್‌ಲೈನ್‌ನಲ್ಲಿ ಹರಿದಾಡುತ್ತಿದ್ದು, ಇವರ ಸಂಬಂಧವು ಎಲ್ಲರ ಗಮನ ಸೆಳೆಯುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕಂಟೆಂಟ್ ರಚಿಸುವ ರೀನಾ ಎಂಬುವವರು, 75 ವರ್ಷದ ರಾಮ್ ಸಾಗರ್ ಅವರೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ. ಸುಮಾರು ಆರು ದಿನಗಳ ಹಿಂದೆ ಇವರ ನಿಶ್ಚಿತಾರ್ಥ ನಡೆದಿದೆ ಎಂದು ವರದಿಯಾಗಿದೆ. ಆದರೆ ಸಮಾರಂಭದ ಫೋಟೋಗಳು ಹೊರಬಂದ ನಂತರವೇ ಇವರ ಕಥೆ ಬೆಳಕಿಗೆ ಬಂದಿದೆ. ಆನ್‌ಲೈನ್‌ನಲ್ಲಿ ಅನೇಕರು ಪ್ರಶ್ನೆಗಳನ್ನು ಕೇಳುತ್ತಿದ್ದು, ಪ್ರತಿಕ್ರಿಯೆಗಳನ್ನು ನೀಡುತ್ತಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ರೀನಾ, ತಾವು ತೆಗೆದುಕೊಂಡ ನಿರ್ಧಾರದ ಬಗ್ಗೆ ಸಂತೋಷವಾಗಿದ್ದು, ವಯಸ್ಸಿನ ಅಂತರವು ತಮಗೆ ಯಾವುದೇ ಸಮಸ್ಯೆಯಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ನಿಶ್ಚಿತಾರ್ಥದ ಫೋಟೋಗಳು ವೈರಲ್ ಆಗುತ್ತಿರುವ ಬೆನ್ನಲ್ಲೇ, ತಾವು ಮದುವೆಯಾಗಲು ನಿರ್ಧರಿಸಿರುವುದಾಗಿ ರೀನಾ ಖಚಿತಪಡಿಸಿದ್ದಾರೆ. ರಾಮ್ ಸಾಗರ್ ಜೊತೆಗೆ ಸಂತೋಷವಾಗಿ ಇರಲಿದ್ದು, 45 ವರ್ಷಗಳ ವಯಸ್ಸಿನ ಅಂತರವು ತಮ್ಮ ಸಂಬಂಧಕ್ಕೆ ಯಾವುದೇ ಅಡ್ಡಿಯಲ್ಲ ಎಂದು ಅವರು ಹೇಳಿದ್ದಾರೆ. ಈ ಜೋಡಿಯ ಕಥೆಯು ಮುಖ್ಯವಾಗಿ ಅವರ ನಡುವಿನ ವಯಸ್ಸಿನ ಅಂತರದಿಂದಾಗಿ ಎಲ್ಲರ ಗಮನ ಸೆಳೆದಿದೆ. ಆನ್‌ಲೈನ್‌ನಲ್ಲಿ ಏನೇ ಚರ್ಚೆಗಳು ನಡೆದರೂ, ರೀನಾ ಈ ಸಂಬಂಧದಲ್ಲಿ ತಮಗೆ ಯಾವುದೇ ಮುಜುಗರವಿಲ್ಲ ಅವರನ್ನು ಮದುವೆಯಾಗಲು ದೃಢ ನಿರ್ಧಾರ ಮಾಡಿರುವುದಾಗಿ ತಿಳಿಸಿದ್ದಾರೆ.



### ಡಿಜಿಟಲ್ ಮಾಧ್ಯಮಗಳ ಹಾವಳಿಗೆ ಸುಪ್ರೀಂ ಕೋರ್ಟ್ ಗರಂ!

**ನವದೆಹಲಿ:** ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠವು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಡಿಜಿಟಲ್ ಯುಗದ ಪತ್ರಿಕೋದ್ಯಮದ ಗಡಿಗಳ ಕುರಿತು ಅತ್ಯಂತ ಮಹತ್ವದ ಮೌಖಿಕ ಅವಲೋಕನವನ್ನು ಮಾಡಿದ್ದು, ದೇಶದ ಪ್ರತಿಯೊಬ್ಬ ನಾಗರಿಕನೂ ಕೇವಲ ಮೊಬೈಲ್ ಫೋನ್ ಹಿಡಿದುಕೊಂಡು ತಾನು ಪತ್ರಕರ್ತ ಎಂದು ಹೇಳಿಕೊಳ್ಳಲು ಆರಂಭಿಸಿದರೆ, ಅದು ಎಲ್ಲರಿಗೂ ದೊಡ್ಡ ಸಮಸ್ಯೆಯನ್ನು ಸೃಷ್ಟಿಸಬಹುದು ಎಂದು ಕಳವಳ ವ್ಯಕ್ತಪಡಿಸಿದೆ.

**ಸುಪ್ರೀಂ ಕೋರ್ಟ್ ಪೀಠ ಹೇಳಿದ್ದೇನು?:** ದೆಹಲಿಯ ಜಂತರ್ ಮಂತರ್ ಪ್ರತಿಭಟನೆಗಳ ಪ್ರತಿಭಟನೆಗಳ ವರದಿಗಾರಿಕೆ ವೇಳೆ ಸ್ವತಂತ್ರ ಹಾಗೂ ಫ್ರೀಲ್ಯಾನ್ಸ್ ಪತ್ರಕರ್ತರಿಗೆ ಪೊಲೀಸ್ ಕಿರುಕುಳವಾಗುತ್ತಿದೆ ಎಂದು ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸುವಾಗ, ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲಾ ಬಾಗ್ಚಿ ಅವರನ್ನೊಳಗೊಂಡ ಪೀಠವು, ಸಂವಿಧಾನದ 19(1)(a) ವಿಧಿ ಅಡಿಯಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಲಭ್ಯವಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಿಕೊಂಡು ದೇಶದ ಪ್ರತಿಯೊಬ್ಬ ನಾಗರಿಕನೂ ತಾನು ಪತ್ರಕರ್ತ ಎಂದು ಹೇಳಿಕೊಳ್ಳಲು ಸಾಧ್ಯವೇ ಎಂಬುದನ್ನು ಆಳವಾಗಿ ಪರಿಶೀಲಿಸಬೇಕಿದೆ ಎಂದು ಹೇಳಿದೆ. ಜೊತೆಗೆ, ಎಲ್ಲರೂ ಪತ್ರಕರ್ತರಾಗಲು ಹೊರಟರೆ ವ್ಯವಸ್ಥೆಯಲ್ಲಿ ಭಾರಿ ಸಮಸ್ಯೆ ಸೃಷ್ಟಿಯಾಗುತ್ತದೆ ಎಂದು ಪೀಠ ಎಚ್ಚರಿಸಿದೆ. ಮುಂದುವರೆದು, ಮಾನ್ಯತೆ ಪಡೆದ ಪತ್ರಕರ್ತರು, ನೋಂದಾಯಿತ ಮಾಧ್ಯಮ ಸಂಸ್ಥೆಗಳಲ್ಲಿ ಕೆಲಸ ಮಾಡುವವರು, ಸ್ವತಂತ್ರ ಪತ್ರಕರ್ತರು ಹಾಗೂ ಕೇವಲ ಸಾಮಾಜಿಕ ಜಾಲತಾಣಗಳ ಇನ್‌ಫ್ಲುಯೆನ್ಸರ್ ಅಥವಾ ರೀಲ್ಸ್ ಮಾಡುವವರ ನಡುವೆ ಸ್ಪಷ್ಟವಾದ ವ್ಯತ್ಯಾಸಗಳು ಮತ್ತು ರಕ್ಷಣೆಯ ಹಂತಗಳಿವೆ ಎಂದು ಅಭಿಪ್ರಾಯಪಟ್ಟ ಜಸ್ಟಿಸ್ ಬಾಗ್ಚಿ, ದುಡಿಯುವ ಪತ್ರಕರ್ತರ ಕಾಯ್ದೆಯಲ್ಲಿ ಪತ್ರಕರ್ತರಲ್ಲಿ ಕೆಲವು ವರ್ಗಗಳನ್ನು ಮಾಡಿದೆ, ಇದರ ಸಂಪೂರ್ಣ ಆಳವಾದ ಪರಿಶೀಲನೆ ಅಗತ್ಯವಿದೆ ಎಂದು ತಿಳಿಸಿದರು.

**ಕೈಯಲ್ಲೊಂದು ಮೈಕ್ ಹಿಡಿದವರೆಲ್ಲಾ ತಾವು ಸ್ವತಂತ್ರ ಪತ್ರಕರ್ತರು....**
ಇನ್ನು ವಿಚಾರಣೆಯ ವೇಳೆ ಸರ್ಕಾರದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಡಿಜಿಟಲ್ ತಂತ್ರಜ್ಞಾನದ ಇಂದಿನ ಯುಗದಲ್ಲಿ ಎದುರಾಗುತ್ತಿರುವ ಪ್ರಾಯೋಗಿಕ ಸವಾಲುಗಳನ್ನು ಕೋರ್ಟ್ ಗಮನಕ್ಕೆ ತಂದರು. ಅದರಂತೆ, ಇಂದಿನ ದಿನಗಳಲ್ಲಿ ಮೊಬೈಲ್ ಫೋನ್ ಮತ್ತು ಕೈಯಲ್ಲೊಂದು ಮೈಕ್ ಹಿಡಿದವರೆಲ್ಲಾ ತಾವು ಸ್ವತಂತ್ರ ಪತ್ರಕರ್ತರು ಎಂದು ಹೇಳಿಕೊಳ್ಳುತ್ತಿದ್ದಾರೆ. ಜೊತೆಗೆ, ಪ್ರತಿಭಟನಾ ಸ್ಥಳಗಳಲ್ಲಿ ವೃತ್ತಿಪರ ವರದಿಗಾರಿಕೆಗಿಂತ ಹೆಚ್ಚಾಗಿ, ಕೇವಲ ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯತೆ ಗಳಿಸಲು ಮತ್ತು ಹಣಗಳಿಸುವ ಉದ್ದೇಶದಿಂದ ಏಕಪಕ್ಷೀಯ ಅಥವಾ ವಿಷಯಗಳನ್ನು ಅತಿರಂಜಿತಗೊಳಿಸಿ ರೀಲ್ಸ್ ಮಾಡುವ ಹಾವಳಿ ಹೆಚ್ಚಾಗಿದೆ ಎಂದು ವಾದಿಸಿದರು.

# ಸ್ಮಾಲ್ ಬಜೆಟ್ ಆದ್ರೂ ಒಳ್ಳೆ ಚಿತ್ರ ಮಾಡಿ ಗೆಲ್ಲಬೇಕು





ರಾಜ್ಯಾದ್ಯಂತ ಚಿತ್ರಮಂದಿರಗಳಲ್ಲಿ ಅತ್ಯುತ್ತಮ ಪ್ರದರ್ಶನ ಕಾಣುತ್ತಿರುವ 'ಪ್ರೇಮದ ಊರಲಿ' ಚಿತ್ರತಂಡಕ್ಕೆ ಮತ್ತೋರ್ವ ಖ್ಯಾತ ತಾರೆಯ ಬೆಂಬಲ ಸಿಕ್ಕಿದೆ. ಒಂದೊಳ್ಳೆ ಚಿತ್ರದ ಅಭೂತಪೂರ್ವ ಯಶಸ್ಸಿಗೆ ರಾಕಿಂಗ್ ಸ್ಟಾರ್ ಯಶ್ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸ್ಯಾಂಡಲ್‌ವುಡ್ ಬಾಕ್ಸ್ ಆಫೀಸ್‌ನಲ್ಲಿ ನಿರೀಕ್ಷೆಗೂ ಮೀರಿದ ದಾಖಲೆ ಬರೆಯುತ್ತಿರುವ ಚಿತ್ರತಂಡವನ್ನು ತಮ್ಮ ರಾಮಾಯಣ ಈವೆಂಟ್ ಸಂದರ್ಭ ಖುದ್ದಾಗಿ ಭೇಟಿಗೆ ಆಹ್ವಾನಿಸಿದ ಯಶ್, ಚಿತ್ರದ ಗೆಲುವಿಗೆ ಬೆನ್ನುತಟ್ಟಿ, ಮುಂದಿನ ಪಯಣಕ್ಕೆ ಮನದುಂಬಿ ಶುಭ ಹಾರೈಸಿದ್ದಾರೆ. ಸ್ಯಾಂಡಲ್‌ವುಡ್ ರಾಕಿಂಗ್ ಸ್ಟಾರ್ ಯಶ್ ರಾವಣನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವ ಬಹುನಿರೀಕ್ಷಿತ ಚಿತ್ರ 'ರಾಮಾಯಣ ಭಾಗ 1' ನವೆಂಬರ್ 5ರಂದು ವಿಶ್ವಾದ್ಯಂತ ಬಿಡುಗಡೆಯಾಗುತ್ತಿದ್ದು, ಗುರುವಾರ ಸಂಜೆ ಬೆಂಗಳೂರಿನಲ್ಲಿ ಅದ್ದೂರಿ ಪ್ರಚಾರ ಕಾರ್ಯಕ್ರಮ ಜರುಗಿತು. ಈ ವೇದಿಕೆಯಲ್ಲಿಯೂ ಯಶ್ ಪ್ರೇಮದ ಊರಲಿ ಸಿನಿಮಾ ಬಗ್ಗೆ ಪ್ರಶಂಸಿಸಿದರು. "ನಮಗೆ ಸಿಕ್ಕಿರುವ ಅವಕಾಶದಲ್ಲಿ ಉದ್ಯಮಕ್ಕೂ ಏನಾದ್ರು ಮಾಡಬೇಕಾಗುತ್ತದೆ. ಕನ್ನಡ ಚಿತ್ರರಂಗದಲ್ಲಿ ಇಂದು ನನಗೆ ಬಹಳ ಖುಷಿಯಾಗುತ್ತಿದೆ. ಪ್ರೇಮದ ಊರಲಿ ಸಿನಿಮಾ ಬಹಳ ದೊಡ್ಡಮಟ್ಟದಲ್ಲಿ ಯಶಸ್ವಿಯಾಗಿದೆ. ಈಗ ತಾನೆ ಅವರೆಲ್ಲರನ್ನೂ ಭೇಟಿಯಾದೆ. ಆ ಕಣ್ಣುಗಳಲ್ಲಿ ಖುಷಿ ನೋಡಿದೆ" ಎಂದು ತಿಳಿಸಿದರು. ಮಾತು ಮುಂದುವರಿಸಿ, "ಚಿತ್ರರಂಗಕ್ಕೆ ಪ್ರಮುಖವಾಗಿ ಎರಡು ವಿಷಯಗಳು ಬೇಕಾಗುತ್ತದೆ. ಹೊರಗೆ ಹೋಗಿ ಎಲ್ಲೆಲ್ಲಿ ನಮಗೆ ಬೇಲಿಗಳಿವೆಯೋ, ಗೋಡೆಗಳಿವೆಯೋ ಅದನ್ನು ಒಡೆಯೋ ಕೆಲಸ ಮಾಡಬೇಕು. ಜೊತೆಗೆ ನಮ್ಮಲ್ಲಿರುವ ಅಡಿಪಾಯವನ್ನೂ ಗಟ್ಟಿಮಾಡಿಕೊಳ್ಳಬೇಕು. ಹೊಸ ಪ್ರತಿಭೆಗಳು ಬರಬೇಕು. ಚಿಕ್ಕ ಚಿತ್ರವಾದ್ರೂ ಒಳ್ಳೆ ಚಿತ್ರ ಮಾಡಿ ಗೆಲ್ಲಬೇಕು. ನನಗೆ ಬಳ ಸಂತೋಷವಾಗಿದೆ. ಕನ್ನಡಿಗರು ಈ ಮಟ್ಟಿನ ಸಕ್ಸಸ್ ಕೊಟ್ಟಿದ್ದೀರ. ಅದು ನಮಗೆ ಧೈರ್ಯ ಕೊಡುತ್ತದೆ. ಹೆಚ್ಚಿನದ್ದನ್ನು ಸಾಧಿಸಲು ನಮಗೆ ಉತ್ಸಾಹ ಕೊಡುತ್ತದೆ" ಎಂದು ತಿಳಿಸಿದರು.

ಭಾರತೀಯ ಚಿತ್ರರಂಗದ ಅಗ್ರಗಣ್ಯ ನಟನಿಂದ ಸಿಕ್ಕ ಈ ಅಭಿನಂದನೆ ಚಿತ್ರತಂಡಕ್ಕೆ ಹೊಸ ಹುರುಪು ತುಂಬಿದೆ. ಚಿತ್ರತಂಡದ ಶ್ರಮವನ್ನು ಗುರುತಿಸಿ ಬೆಂಬಲಿಸುವ ಯಶ್ ಅವರ ಈ ಪ್ರೋತ್ಸಾಹದ ನಡೆಗೆ ಚಿತ್ರತಂಡ ತುಂಬು ಹೃದಯದ ಕೃತಜ್ಞತೆ ಸಲ್ಲಿಸಿದೆ.

ಸಿನಿಮಾ ಇಂಡಸ್ಟ್ರಿ ಟ್ರ್ಯಾಕರ್ ಸ್ಯಾಕ್ನಿಲ್ಕ್ ವರದಿ ಪ್ರಕಾರ, ಪ್ರೇಮದ ಊರಲಿ ತನ್ನ 21 ದಿನಗಳ ಪ್ರದರ್ಶನಗಳಲ್ಲಿ ಒಟ್ಟು 77.86 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ಈ ಪೈಕಿ ಇಂಡಿಯಾ ಗ್ರಾಸ್ ಕಲೆಕ್ಷನ್ 76.36 ಕೋಟಿ ರೂಪಾಯಿ ಆಗಿದ್ದರೆ, ನೆಟ್ ಕಲೆಕ್ಷನ್ 65.37 ಕೋಟಿ ರೂ. ಆಗಿದೆ. ವಿದೇಶದಲ್ಲಿ 1.50 ಕೋಟಿ ರೂಪಾಯಿ ಸಂಪಾದನೆಯಾಗಿದೆ.

ಮನೋಜ್ ಕುಮಾರ್ ನಿರ್ದೇಶನದ ಹಾಗೂ ವೆನಿಲ್ಲಾ ಎಂಟರ್‌ಟೈನ್‌ಮೆಂಟ್ ಬ್ಯಾನರ್ ಅಡಿಯಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ರಂಗಾಯಣ ರಘು, ಶ್ರೀರಾಮ್, ತಪಸ್ವಿನಿ ಪೂಣಚ್ಚ ಹಾಗೂ ರಮಿಕಾ ಶಿವು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಭಾವನಾತ್ಮಕ ಕಥಾಹಂದರ ಹಾಗೂ ಕಲಾವಿದರ ಅದ್ಭುತ ಅಭಿನಯದಿಂದ ಕನ್ನಡಿಗರ ಹೃದಯ ಗೆದ್ದಿರುವ ಈ ಚಿತ್ರ, ಕೇವಲ ಬಾಯ್ಮಾತಿನ ಪ್ರಚಾರದ ಬಲದಿಂದಲೇ ಚಿತ್ರಮಂದಿರಗಳತ್ತ ಜನಸಾಗರ ಹರಿದುಬರುವಂತೆ ಮಾಡಿದೆ. ವಿಶೇಷವೆಂದರೆ, ಜೈಲರ್ 2 ಮತ್ತು ರಣಬಾಲಿಯಂತಹ ಬಿಗ್ ಬಜೆಟ್ ಸಿನಿಮಾಗಳ ನಡುವೆಯೂ 2 ಕೋಟಿ ಬಜೆಟ್‌ನ ಪ್ರೇಮದ ಊರಲಿ ಸಿನಿಮಾದ ಅಬ್ಬರ ಕಿಂಚಿತ್ತೂ ಕುಗ್ಗಿಲ್ಲ. ಘಟಾನುಘಟಿ ಪರಭಾಷಾ ಮತ್ತು ಸ್ವಭಾಷಾ ಚಿತ್ರಗಳ ಪೈಪೋಟಿಯ ನಡುವೆಯೂ ರಾಜ್ಯಾದ್ಯಂತ ಹೌಸ್‌ಫುಲ್ ಪ್ರದರ್ಶನಗಳನ್ನು ಕಾಣುತ್ತಾ ತನ್ನ ಸ್ಯಾಂಡಲ್ ವುಡ್‌ನಲ್ಲಿ ಸಂಚಲನ ಸೃಷ್ಟಿಸಿದೆ.

## ಪ್ರೇಮದ ಊರಲಿ ತಂಡವನ್ನು ಭೇಟಿಯಾದ ಯಶ್

# ಎಂ.ಎಸ್.ಸುಬ್ಬುಲಕ್ಷ್ಮಿ ಪಾತ್ರ ನಿರ್ವಹಿಸಲು ಬಾಲಿವುಡ್ ಸ್ಟಾರ್ ನಟಿಗೆ 7 ಬಾರಿ ಆಫರ್

## ಕೊನೆಗೆ ರಶ್ಮಿಕಾ ಪಾಲಾದ ದಿಗ್ಗಜೆಯ ಪಾತ್ರ



ತಮ್ಮ ದೈವಿಕ ಕಂಠದ ಮೂಲಕ ದಶಕಗಳ ಕಾಲ ಭಾರತದಾದ್ಯಂತದ ಗಾನಪ್ರಿಯರನ್ನು ಮಂತ್ರಮುಗ್ಧಗೊಳಿಸಿದ್ದ ಭಾರತದ ಶ್ರೇಷ್ಠ ಗಾಯಕಿ ದಿ.ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಜೀವನಚರಿತ್ರೆಗೆ ಜೀವ ತುಂಬುವ ಅವಕಾಶವನ್ನು ನ್ಯಾಷನಲ್ ಕ್ರಶ್ ಖ್ಯಾತಿಯ ರಶ್ಮಿಕಾ ಮಂದಣ್ಣ ತಮ್ಮದಾಗಿಸಿಕೊಂಡಿದ್ದಾರೆ.

ಪ್ಯಾನ್ ಇಂಡಿಯಾ ಮಟ್ಟದಲ್ಲಿ ಮೂಡಿಬರುತ್ತಿರುವ ಚಿತ್ರಕ್ಕೆ ಸೆಪ್ಟೆಂಬರ್ 16ರ ಸಂಜೆ ಚೆನ್ನೈನ ಮ್ಯೂಸಿಕ್ ಅಕಾಡೆಮಿಯಲ್ಲಿ ಚಾಲನೆ ನೀಡಲಾಯಿತು. ಇದೀಗ ಬಾಲಿವುಡ್‌ನ ಸ್ಟಾರ್ ನಟಿ ಈ ಪಾತ್ರವನ್ನು ನಿರ್ವಹಿಸಲು ಬಯಸಿದ್ದಾಗಿ ಹಂಚಿಕೊಂಡಿದ್ದಾರೆ.

ಒಂದು ದಶಕಕ್ಕೂ ಹಿಂದೆಯೇ ರಾಜೀವ್ ಮೆನನ್ ನಿರ್ದೇಶನದ ಎಂ.ಎಸ್.ಸುಬ್ಬುಲಕ್ಷ್ಮಿ ಜೀವನಾಧಾರಿತ ಸಿನಿಮಾದಲ್ಲಿ ಬಾಲಿವುಡ್‌ನ ಬೇಡಿಕೆಯ ತಾರೆ ವಿದ್ಯಾ ಬಾಲನ್ ನಟಿಸಬೇಕಿತ್ತು. ಆದ್ರೆ, ಸುಬ್ಬುಲಕ್ಷ್ಮಿ ಕುರಿತ ಪುಸ್ತಕ ಮತ್ತು ಚಿತ್ರ ಹಕ್ಕುಗಳ ಕುರಿತಾದ ಕಾನೂನ್ ವಿವಾದದಿಂದ ಸಿನಿಮಾ ಕಾರ್ಯರೂಪಕ್ಕೆ ಬರಲಿಲ್ಲ. ವರ್ಷಗಳ ಹಿಂದೆ, ಎಂ.ಎಸ್.ಸುಬ್ಬುಲಕ್ಷ್ಮಿ ಅವರನ್ನು ಹೋಲುವಂತೆ ವಿದ್ಯಾ ಬಾಲನ್ ಫೋಟೋಶೂಟ್ ಮಾಡಿಸಿಯೂ ಗಮನ ಸೆಳೆದಿದ್ದರು.

ಇದೀಗ ಮಾಧ್ಯಮವೊಂದರಲ್ಲಿ, ವಿದ್ಯಾಬಾಲನ್ ತಮ್ಮ ವೈರಲ್ ಫೋಟೋಶೂಟ್ ಸುಬ್ಬುಲಕ್ಷ್ಮಿ ಪಾತ್ರವನ್ನು ನಿರ್ವಹಿಸಲು 7 ಅವಕಾಶಗಳನ್ನು ತಂದುಕೊಟ್ಟಿದ್ದವು ಎಂದು ಬಹಿರಂಗಪಡಿಸಿದ್ದಾರೆ. ಜೊತೆಗೆ ದಿಗ್ಗಜೆ ಗಾಯಕಿಯ ಸಂಗೀತವು ಬಾಲ್ಯದಿಂದಲೂ ಹೇಗೆ ತಮ್ಮ ಜೀವನದ ಭಾಗವಾಗಿದೆ ಎಂಬುದರ ಕುರಿತು ಮಾತನಾಡಿದ್ದಾರೆ.

ತಾವು ದಶಕದ ಹಿಂದೆಯೇ ಮಾಡಬೇಕಿದ್ದ ಸಿನಿಮಾ ಕುರಿತು ಮಾತನಾಡುತ್ತಾ, "2012-13ರ ಸುಮಾರಿಗೆ, ಬಹುಶಃ 2013-14 ಇರಬಹುದು... ನಿರ್ದೇಶಕ ರಾಜೀವ್ ಮೆನನ್ ಅವರೊಂದಿಗೆ ನಾನು ಗಾಯಕಿ ದಿ.ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಬಯೋಪಿಕ್ ಮಾಡಬೇಕಿತ್ತು. ಆದ್ರೆ ಸ್ಟೇ ಆರ್ಡರ್ ಇದ್ದ ಹಿನ್ನೆಲೆ ಸಿನಿಮಾ ಮುಂದುವರಿಯಲಿಲ್ಲ. ಸುಬ್ಬುಲಕ್ಷ್ಮಿ ಪಾತ್ರಕ್ಕೆ ಜೀವ ತುಂಬಲು ಬಹಳ ಬಯಸಿದ್ದೆ, ಹಾಗಾಗಿ ಸಿನಿಮಾ ಕ್ಯಾನ್ಸಲ್ ಆದಾಗಿನಿಂದಲೂ ನನಗೆ ಬಹಳ ಬೇಸರವಿದೆ" ಎಂದು ತಿಳಿಸಿದ್ದಾರೆ.

"ನಮ್ಮ ಮನೆಯಲ್ಲಿ ಪ್ರತೀ ಮುಂಜಾನೆ ಅವರ ಸುಪ್ರಭಾತ ಕೇಳುತ್ತಿದ್ದೆವು. ಹಾಗಾಗಿ ನನಗೆ ಅವರ ಬಗ್ಗೆ ಸಾಕಷ್ಟು ತಿಳಿದಿತ್ತು. ನಿರ್ದೇಶಕರು ಉತ್ತಮ ಚಿತ್ರಕಥೆಯನ್ನೂ ಬರೆದುಕೊಂಡಿದ್ದರು. ಆದ್ರೆ ಏನೋ ಕಾರಣದಿಂದ ಸಿನಿಮಾ ಮೇಲೆ ತಡೆಯಾಜ್ಞೆ ವಿಧಿಸಲಾಯಿತು" ಎಂದು ಹಂಚಿಕೊಂಡಿದ್ದಾರೆ. ವಸ್ತ್ರ ವಿನ್ಯಾಸಕಿ ಅನು ಪಾರ್ಥಸಾರಥಿ ಅವರ ಸಲಹೆಯಂತೆ, ವಿದ್ಯಾಬಾಲನ್ ಅವರಿಂದ ಫೋಟೋಗ್ರಾಫಿಕ್ ಟ್ರಿಬ್ಯೂಟ್ ರೂಪುಗೊಂಡಿತು. ಕೋವಿಡ್ ಹಿನ್ನೆಲೆ ಉಂಟಾದ ಅಡಚಣೆಗಳಿಂದ ಈ ಫೋಟೋಶೂಟ್ ಕೂಡಾ ತಕ್ಷಣ ಕಾರ್ಯರೂಪಕ್ಕೆ ಬರಲಿಲ್ಲ. ಫೈನಲಿ ಎರಡು ವರ್ಷಗಳ ಹಿಂದೆ ಅಂದರೆ ಎಂ.ಎಸ್.ಸುಬ್ಬುಲಕ್ಷ್ಮಿ ಅವರ 108ನೇ ಜನ್ಮವಾರ್ಷಿಕೋತ್ಸವ ಸಂದರ್ಭ ತಮ್ಮ ಅಧಿಕೃತ ಸೋಷಿಯಲ್ ಮೀಡಿಯಾದಲ್ಲಿ ಫೋಟೋ ವಿಡಿಯೋಗಳನ್ನು ಹಂಚಿಕೊಂಡು ವಿದ್ಯಾ ಅವರು ಗಾಯಕಿಗೆ ನಮನ ಸಲ್ಲಿಸಿದ್ದರು.

ಈ ಫೋಟೋಶೂಟ್‌ಗೆ ಸಿಕ್ಕ ಪ್ರತಿಕ್ರಿಯೆಯು ಮೆಚ್ಚುಗೆಯನ್ನು ಮೀರಿತ್ತು. ಫೋಟೋಶೂಟ್ ಹಂಚಿಕೊಂಡ ಬಳಿಕ ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಪಾತ್ರವನ್ನು ನಿರ್ವಹಿಸಲು ನನಗೆ 7 ಅವಕಾಶಗಳು ಬಂದಿದ್ದವು. ಆಗ ನಾನು, "ಸಿನಿಮಾಗೆ ಅಗತ್ಯವಿರುವ ಎಲ್ಲಾ ಅನುಮತಿಗಳು ಸಿಕ್ಕರೆ ನಾನು ಈ ಬಗ್ಗೆ ಯೋಚಿಸುತ್ತೇನೆ. ಇಲ್ಲದಿದ್ದರೆ ಈ ಸಿನಿಮಾದಲ್ಲಿ ನಟಿಸಲು ಸಾಧ್ಯವಾಗುವುದಿಲ್ಲ" ಎಂದು ಹೇಳಿದ್ದೆ ಎಂದು ಬಾಲನ್ ಹಂಚಿಕೊಂಡಿದ್ದಾರೆ.

"ಅವರ ಜೀವನದ ಕುರಿತು ಒಂದು ಸಿನಿಮಾ ನಿರ್ಮಾಣವಾಗುತ್ತಿದೆ ಎಂಬ ಸುದ್ದಿ ಬಂತು. ನಾನಾಗ, 'ಈ ಬಗ್ಗೆ ಹೇಳಲು ನನಗೆ ಏನೂ ಇಲ್ಲ' ಎಂದೆ. ನಾನು ಯಾವಾಗಲೂ ಅವರ ಪಾತ್ರವನ್ನು ನಿರ್ವಹಿಸಲು ಬಯಸಿದ್ದೆ. ಬಹುತೇಕ ಸಿನಿಮಾ ಮಾಡಬೇಕಿತ್ತು, ಸಾಧ್ಯವಾಗಲಿಲ್ಲ. ಆದರೆ, ನಾನು ಬೇರೆ ಮಾರ್ಗದ ಮೂಲಕ ಈ ಗೌರವವನ್ನು ಸಲ್ಲಿಸಲು ಸಾಧ್ಯವಾಗಿದ್ದಕ್ಕೆ ನನಗೆ ಅಪಾರ ಸಂತೋಷವಿದೆ" ಎಂದು ಹಂಚಿಕೊಂಡರು.

ಎಂ.ಎಸ್.ಸುಬ್ಬುಲಕ್ಷ್ಮಿ ಅವರ 110ನೇ ಜನ್ಮ ವಾರ್ಷಿಕೋತ್ಸವ ಹಿನ್ನೆಲೆ, ಸೆಪ್ಟೆಂಬರ್ 16ರ ಸಂಜೆ ಚೆನ್ನೈನ ಮ್ಯೂಸಿಕ್ ಅಕಾಡೆಮಿಯಲ್ಲಿ ಸಿನಿಮಾ ಅಧಿಕೃತವಾಗಿ ಘೋಷಣೆಯಾಯಿತು. ಖ್ಯಾತ ನಟ ಕಮಲ್ ಹಾಸನ್, ಮೊದಲ ದೃಶ್ಯಕ್ಕೆ ಕ್ಲ್ಯಾಪ್ ಮಾಡಿದ್ರು. ಅದ್ದೂರಿ ಕಾರ್ಯಕ್ರಮದಲ್ಲಿ ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಕುಟುಂಬದ ಸದಸ್ಯರೂ ಉಪಸ್ಥಿತರಿದ್ದರು. ನಿರ್ಮಾಪಕರಾದ ಅಲ್ಲು ಅರವಿಂದ್, ರಾಕ್‌ಲೈನ್ ವೆಂಕಟೇಶ್ ಹಾಗೂ ಬನ್ನಿ ವಾಸು ಜಂಟಿಯಾಗಿ ಈ ಬೃಹತ್ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

'ಎಂಎಸ್‌ಎ ಲೆಗಸಿ ಆನ್ ಸ್ಕ್ರೀನ್' ಸಿನಿಮಾ ಲಾಂಚ್ ಆದ ಸಂದರ್ಭ ಮಾತನಾಡಿದ್ದ ನಾಯಕ ನಟಿ ರಶ್ಮಿಕಾ ಮಂದಣ್ಣ, "ಇಂತಹ ಅದ್ಭುತ ಅವಕಾಶ ಸಿಕ್ಕಿರುವುದಕ್ಕೆ ನನ್ನ ಹೃದಯ ತುಂಬಿ ಬಂದಿದೆ. ಇದೀಗ, ದೈವಿಕ ಸಾನ್ನಿಧ್ಯದಲ್ಲಿ ನಿಂತಿರುವ ಅನುಭವವಾಗುತ್ತಿದೆ. ಸುಬ್ಬುಲಕ್ಷ್ಮಿ ಅವರ ಅಸಾಧಾರಣ ಪಯಣದ ಒಂದು ಸಣ್ಣ ಭಾಗವಾಗಲು ಅವಕಾಶ ದೊರೆತಿರುವುದಕ್ಕೆ ನನಗೆ ಅಪಾರ ಹೆಮ್ಮೆ ಹಾಗೂ ಗೌರವವಿದೆ. ಅವರ ಆಶೀರ್ವಾದ ಸದಾ ನಮ್ಮೊಂದಿಗಿರುತ್ತದೆ ಎಂಬ ನಂಬಿಕೆಯಿದೆ. ಎಲ್ಲರೂ ಮೆಚ್ಚುವ ರೀತಿಯಲ್ಲಿ ಈ ಮಹತ್ವದ ಪಾತ್ರವನ್ನು ತೆರೆಮೇಲೆ ತರಲು ಪ್ರಯತ್ನಿಸುತ್ತೇನೆ" ಎಂದು ಭರವಸೆ ನೀಡಿದ್ದಾರೆ. ಜೊತೆಗೆ, "ಅಮ್ಮ, ನಿಮ್ಮ ಜೀವನದ ಒಂದು ಸಣ್ಣ ಭಾಗವಾಗಲು ನೀವು ನನ್ನನ್ನು ಆಯ್ಕೆ ಮಾಡಿಕೊಂಡಿದ್ದೀರಿ. ಇದಕ್ಕಾಗಿ ನಾನು ಸದಾ ಕೃತಜ್ಞಳಾಗಿರುತ್ತೇನೆ" ಎಂದು ತಿಳಿಸಿದ್ದಾರೆ.

# ಮೊದಲ ದಿನವೇ 100 ಕೋಟಿ ದಾಟಿದ ಜೈಲರ್ 2: ಟಾಕ್ಸಿಕ್ ದಾಖಲೆ ಮುರಿಯುವಲ್ಲಿ ವಿಫಲ!



ಅಭಿಮಾನಿಗಳಿಂದ ತಲೈವ ಎಂದೇ ಕರೆಸಿಕೊಳ್ಳುವ ಭಾರತದ ದಿಗ್ಗಜ ನಟ ರಜನಿಕಾಂತ್ ಅವರು ಬಾಕ್ಸ್ ಆಫೀಸ್‌ನಲ್ಲಿ ತಮ್ಮ ಬಲವಾದ ಹಿಡಿತವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ಸೂಪರ್‌ಸ್ಟಾರ್‌ನ ಬಹುನಿರೀಕ್ಷಿತ ಚಿತ್ರ 'ಜೈಲರ್ 2' ಅಕ್ಟೋಬರ್ 15, ಗುರುವಾರದಂದು ವಿಶ್ವಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದ್ದು, ಬಹುತೇಕ ಉತ್ತಮ ಪ್ರತಿಕ್ರಿಯೆಯನ್ನು ಪಡೆದುಕೊಂಡಿದೆ. ಮುಂಗಡ ಬುಕಿಂಗ್‌ನಲ್ಲೇ ಈ ಚಿತ್ರಕ್ಕೆ ಭಾರಿ ಬೇಡಿಕೆ ಇತ್ತು. ಬಾಕ್ಸ್ ಆಫೀಸ್‌ನ ಆರಂಭಿಕ ಅಂಕಿಅಂಶಗಳನ್ನು ಗಮನಿಸಿದರೆ, ತಮಿಳು ಚಿತ್ರರಂಗದಲ್ಲಿ ಮೊದಲ ದಿನ ಅತಿ ಹೆಚ್ಚು ಗಳಿಸಿದ ಕೆಲವೇ ಸಿನಿಮಾಗಳ ಪೈಕಿ ಒಂದಾಗಿ ಹೊರಹೊಮ್ಮಿದೆ.

**'ಜೈಲರ್ 2' ಮೊದಲ ದಿನದ ಕಲೆಕ್ಷನ್ ನಂಬರ್ಸ್**

ಮೊದಲ ದಿನ 'ಜೈಲರ್ 2' ಚಿತ್ರವು 16,599 ಶೋಗಳಲ್ಲಿ ಪ್ರದರ್ಶನಗೊಂಡು ಭಾರತದಲ್ಲಿ 59.70 ಕೋಟಿ ನೆಟ್ (ನಿವ್ವಳ) ಕಲೆಕ್ಷನ್ ಮಾಡಿದೆ. ದೇಶೀಯ ಮಾರುಕಟ್ಟೆಯಲ್ಲಿ ಚಿತ್ರದ ಗ್ರಾಸ್ (ಒಟ್ಟು) ಕಲೆಕ್ಷನ್ 70.25 ಕೋಟಿ ರೂಪಾಯಿ.

ವಿಶ್ವಾದ್ಯಂತ ಅಪಾರ ಅಭಿಮಾನಿಗಳನ್ನು ಹೊಂದಿರುವ ಜನಪ್ರಿಯ ನಟನ ಸಿನಿಮಾ ಸಾಗರೋತ್ತರ ಪ್ರದೇಶಗಳಲ್ಲಿಯೂ ಉತ್ತಮ ಕಮಾಯಿ ಮಾಡಿದೆ. ವಿದೇಶಗಳಿಂದಲೇ ಬರೋಬ್ಬರಿ 55 ಕೋಟಿ ರೂಪಾಯಿ ಬಂದಿದ್ದು, ಚಿತ್ರದ ಮೊದಲ ದಿನದ ಒಟ್ಟಾರೆ ಕಲೆಕ್ಷನ್ ಬರೋಬ್ಬರಿ 125.25 ಕೋಟಿ ರೂಪಾಯಿ ಆಗಿದೆ.

59.70 ಕೋಟಿ ನೆಟ್ ಕಲೆಕ್ಷನ್‌ಗೆ ತಮಿಳು ಆವೃತ್ತಿ ದೊಡ್ಡ ಕೊಡುಗೆ ನೀಡಿದೆ. ಮೂಲ ಭಾಷೆಯಲ್ಲಿ 9,326 ಪ್ರದರ್ಶನಗಳಿಂದ 43.35 ಕೋಟಿ ರೂ. ವ್ಯವಹಾರ ನಡೆದಿದ್ದರೆ, ತೆಲುಗು ಆವೃತ್ತಿಯು 2,792 ಪ್ರದರ್ಶನಗಳಿಂದ 12.50 ಕೋಟಿ ರೂ. ಬಂದಿದೆ. ಹಿಂದಿ ಆವೃತ್ತಿಯು 4,371 ಪ್ರದರ್ಶನಗಳಿಂದ 3.50 ಕೋಟಿ ರೂ. ಮತ್ತು ಕನ್ನಡ ಆವೃತ್ತಿಯು 110 ಪ್ರದರ್ಶನಗಳಿಂದ 35 ಲಕ್ಷ ರೂಪಾಯಿ ಗಳಿಸಿವೆ.

**ಜೈಲರ್ ಗಳಿಕೆ ಮೀರಿಸಿದ ಜೈಲರ್ 2**

ವರದಿಗಳ ಪ್ರಕಾರ 2023ರಲ್ಲಿ ಬಿಡುಗಡೆಯಾದ ಮೊದಲ ಭಾಗ ಸರಿಸುಮಾರು 92 ಕೋಟಿ ರೂಪಾಯಿ ಸಂಗ್ರಹಿಸಿತ್ತು. ಆದ್ರೆ ಈ ಸೀಕ್ವೆಲ್ ಬರೋಬ್ಬರಿ 125 ಕೋಟಿ ರೂಪಾಯಿ ಕಲೆಕ್ಷನ್ ಮಾಡುವ ಮೂಲಕ ದಾಖಲೆ ಬರೆದಿದೆ. ಜೈಲರ್ 1 ತನ್ನ ಒಟ್ಟಾರೆ ಥಿಯೇಟ್ರಿಕಲ್ ರನ್‌ನಲ್ಲಿ ವಿಶ್ವಾದ್ಯಂತ ಬರೋಬ್ಬರಿ 604.50 ಕೋಟಿ ರೂಪಾಯಿ ಕಲೆಕ್ಷನ್ ಮಾಡಿತ್ತು. ಈ ದಾಖಲೆ ಬ್ರೇಕ್ ಮಾಡುವ ಗುರಿಯೊಂದಿಗೆ ಜೈಲರ್ 2 ಸಾಗಿದೆ.

**ಟಾಕ್ಸಿಕ್ ರೆಕಾರ್ಡ್ ಬ್ರೇಕ್ ಮಾಡುವಲ್ಲಿ ವಿಫಲ!**

ಟಾಕ್ಸಿಕ್ ನಿರ್ಮಿಸಿರುವ ಕೆವಿಎನ್ ಪ್ರೊಡಕ್ಷನ್ಸ್ ಸೋಷಿಯಲ್ ಮೀಡಿಯಾದಲ್ಲಿ ಅಂದು ಹಂಚಿಕೊಂಡಿದ್ದ ಅಧಿಕೃತ ಮಾಹಿತಿ ಪ್ರಕಾರ, ಸಿನಿಮಾ ತೆರೆಕಂಡ ದಿನ ವಿಶ್ವಾದ್ಯಂತ 150 ಕೋಟಿ ರೂಪಾಯಿ ಸಂಪಾದಿಸಿದೆ. ಸಿನಿಮಾ ಇಂಡಸ್ಟ್ರಿ ಟ್ರ್ಯಾಕರ್ ಸ್ಯಾಕ್ನಿಲ್ಕ್ ಅಂದು ಕೊಟ್ಟಿದ್ದ ಮಾಹಿತಿ ಪ್ರಕಾರ, ಟಾಕ್ಸಿಕ್ ವಿಶ್ವಾದ್ಯಂತ ಒಟ್ಟು 140.75 ಕೋಟಿ ರೂಪಾಯಿ ಕಲೆಕ್ಷನ್ ಮಾಡಿತ್ತು. ಈ ಹಿನ್ನೆಲೆ, ಈ ರೆಕಾರ್ಡ್ ಬ್ರೇಕ್ ಮಾಡುವಲ್ಲಿ ಜೈಲರ್ 2 ವಿಫಲವಾಗಿದೆ. ಆದಾಗ್ಯೂ, ನಂತರ ಟಾಕ್ಸಿಕ್ ಮಿಶ್ರ ಪ್ರತಿಕ್ರಿಯೆಗಳಿಗೊಳಗಾದ ಹಿನ್ನೆಲೆ, ಕಲೆಕ್ಷನ್‌ನಲ್ಲಿ ತೀವ್ರ ಕುಸಿತ ಕಂಡು ತನ್ನ ಥಿಯೇಟ್ರಿಕಲ್ ರನ್ ಟೈಮಲ್ಲಿ ವಿಶ್ವಾದ್ಯಂತ ಒಟ್ಟು 342.26 ಕೋಟಿ ರೂಪಾಯಿ ಕಲೆಕ್ಷನ್ ಮಾಡಿತು. ಸದ್ಯ ಜೈಲರ್ ಉತ್ತಮ ಪ್ರದರ್ಶನ ಕಾಣುತ್ತಿದ್ದು, ಒಟ್ಟಾರೆ ಥಿಯೇಟ್ರಿಕಲ್ ಕಲೆಕ್ಷನ್ ಅದ್ಭುತವಾಗಿರಲಿದೆ ಎಂದು ನಿರೀಕ್ಷಿಸಲಾಗಿದೆ.

**ಇತರೆ ತಮಿಳು ಹಿಟ್ ಚಿತ್ರಗಳನ್ನು ಹಿಂದಿಕ್ಕಿದ 'ಜೈಲರ್ 2'** ಅಂಕಿ ಅಂಶಗಳನ್ನು ಗಮನಿಸಿದರೆ, 'ಜೈಲರ್ 2' ಚಿತ್ರವು ಮೊದಲ ದಿನವೇ 50 ಕೋಟಿ ರೂಪಾಯಿಗಳಿಗೂ (ನಿವ್ವಳ) ಹೆಚ್ಚು ಗಳಿಕೆ ಮಾಡಿದ ಕೆಲವೇ ತಮಿಳು ಚಿತ್ರಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಈ ಮೂಲಕ, 32 ಕೋಟಿ ರೂ. ಗಳಿಸಿದ್ದ 'ವಿಕ್ರಮ್', 43 ಕೋಟಿ ರೂ. ಗಳಿಸಿದ್ದ 'ಜನ ನಾಯಗನ್' ಮತ್ತು 44 ಕೋಟಿ ರೂ. ಗಳಿಸಿದ್ದ 'ಉಬೆಂಖಿ' ಚಿತ್ರಗಳ ಗಳಿಕೆಯ ಅಂಕಿಅಂಶಗಳನ್ನು ಮೀರಿಸಿದೆ. 49 ಕೋಟಿ ರೂ. ಗಳೊಂದಿಗೆ ಆರಂಭಗೊಂಡ 'ಬೀಸ್ಟ್' ಚಿತ್ರವನ್ನೂ 'ಜೈಲರ್ 2' ಹಿಂದಿಕ್ಕಿದೆ.

ವರದಿಗಳ ಪ್ರಕಾರ, ವಿಜಯ್ ಅವರ 'ಲಿಯೋ' ಮತ್ತು ರಜನಿಕಾಂತ್ ಅವರ 'ಕೂಲಿ' ಚಿತ್ರಗಳು ಬಿಡುಗಡೆಯ ಮೊದಲ ದಿನ ತಲಾ 65 ಕೋಟಿ ರೂಪಾಯಿಗಳನ್ನು ಗಳಿಸಿತ್ತು. ಹಾಗೆಯೇ ರಜನಿಕಾಂತ್ ಅವರ '2.0' ಚಿತ್ರವೂ 60 ಕೋಟಿ ರೂಪಾಯಿಗಳನ್ನು ಗಳಿಸಿತ್ತು. ಆದ್ರೆ, 'ಜೈಲರ್ 2' ಈ ಅಂಕಿಅಂಶಗಳನ್ನು ಮೀರಿಲ್ಲ.

ಸನ್ ಪಿಕ್ಚರ್ಸ್ ನಿರ್ಮಿಸಿರುವ 'ಜೈಲರ್ 2' ಚಿತ್ರದಲ್ಲಿ, ರಜನಿಕಾಂತ್ ಅವರು 'ಟೈಗರ್ ಮುತ್ತುವೇಲ್ ಪಾಂಡಿಯನ್' ಪಾತ್ರದಲ್ಲಿ ಮರಳಿದ್ದಾರೆ. ಈ ಚಿತ್ರದ ಕಥೆಯು, ನಾಯಕನ ಪಾತ್ರವು ಹೊಸ ಶತ್ರುಗಳ ಗುಂಪನ್ನು ಎದುರಿಸುವ ಸನ್ನಿವೇಶದ ಸುತ್ತ ಸಾಗುತ್ತದೆ. ಈ ಸೀಕ್ವೆಲ್‌ಗೆ ನೆಲ್ಸನ್ ದಿಲೀಪ್‌ಕುಮಾರ್ ನಿರ್ದೇಶಕರಾಗಿ ಮರಳಿದ್ದಾರೆ.

ರಮ್ಯಾ ಕೃಷ್ಣನ್, ಯೋಗಿ ಬಾಬು ಮತ್ತು ರಿಥ್ವಿಕ್ ಮೊದಲ ಚಿತ್ರದಿಂದ ತಮ್ಮ ಪಾತ್ರಗಳನ್ನು ಪುನರಾವರ್ತಿಸಿದ್ದಾರೆ. ಹೊಸ ಪಾತ್ರವರ್ಗದಲ್ಲಿ ವಿದ್ಯಾ ಬಾಲನ್, ಎಸ್. ಜೆ.ಸೂರ್ಯ, ಮಿಥುನ್ ಚಕ್ರವರ್ತಿ, ಸೂರಜ್ ವೆಂಜರಮೂಡು, ಅಣ್ಣಾ ರಾಜನ್ ಮತ್ತು ಜತಿನ್ ಸರ್ನಾ ಸೇರಿದ್ದಾರೆ. ಅಲ್ಲದೇ ಈ ಚಿತ್ರದಲ್ಲಿ ಹೃತಿಕ್ ರೋಷನ್, ಮೋಹನ್ ಲಾಲ್, ಶಿವ ರಾಜ್‌ಕುಮಾರ್ ಮತ್ತು ಜಾಕಿ ಶ್ರಾಫ್ ಅತಿಥಿ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಉಳಿದಂತೆ, ಅನಿರುದ್ಧ್ ರವಿಚಂದರ್ ಸಂಗೀತ ಸಂಯೋಜಿಸಿದ್ದಾರೆ. ಸೆನ್ಸಾರ್ ಮಂಡಳಿಯಿಂದ 'ಯುಎ 16+' ಪ್ರಮಾಣಪತ್ರವನ್ನು ಪಡೆದಿದ್ದು, ಚಿತ್ರದ ರನ್‌ಟೈಮ್ 2 ಗಂಟೆ 45 ನಿಮಿಷಗಳಿವೆ.

# ನವೆಂಬರ್ ನಿಂದ ಹೊಸ ಸ್ವರೂಪದ ಕ್ರಿಕೆಟ್ ಪ್ರಾರಂಭ




## ಪುರುಷ ಮಹಿಳಾ ತಂಡಗಳು ಒಟ್ಟಿಗೆ ಕಣಕ್ಕೆ

**ಬೆಂಗಳೂರು/ಮುಂಬೈ:** ಕ್ರಿಕೆಟ್ ಇತಿಹಾಸದಲ್ಲೇ ಮೊದಲ ಬಾರಿಗೆ 'ಟೆಸ್ಟ್ ಟ್ವೆಂಟಿ' ಎಂಬ ವಿಶಿಷ್ಟ ಮಾದರಿಯ ಸರಣಿ ಆರಂಭವಾಗುತ್ತಿದೆ. ಟೆಸ್ಟ್, ಏಕದಿನ ಹಾಗೂ ಟಿ-ಟ್ವೆಂಟಿ ಮಾದರಿಯ ಬಳಿಕ ನಾಲ್ಕನೇ ಮಾದರಿಯ ಈ ಟೂರ್ನಿ ನವೆಂಬರ್ 14 ರಿಂದ ಕೊಲಂಬೊದ ಸಿಂಹಳೀಸ್ ಸ್ಪೋರ್ಟ್ಸ್ ಕ್ಲಬ್ ಮೈದಾನದಲ್ಲಿ ಆರಂಭವಾಗಲಿದೆ.

ಇದಲ್ಲದೆ ಕ್ರಿಕೆಟ್ ಇತಿಹಾಸದಲ್ಲಿ ಇದೇ ಮೊದಲ ಬಾರಿ ಕ್ರಿಕೆಟ್ ಸರಣಿಯೊಂದರಲ್ಲಿ ಮಹಿಳಾ ಮತ್ತು ಪುರುಷ ಆಟಗಾರರು ಒಂದೇ ತಂಡದಿಂದ ಕಣಕ್ಕಿಳಿಯಲಿದ್ದಾರೆ. ಟೂರ್ನಿಗಾಗಿ ವಿಶ್ವದಾದ್ಯಂತ ಟ್ರಯಲ್ಸ್ ಮೂಲಕ ಆಯ್ಕೆಯಾದ 13 ರಿಂದ 21 ವರ್ಷದೊಳಗಿನ 160 ಯುವ ಕ್ರಿಕೆಟಿಗರನ್ನ ಆಯ್ಕೆ ಮಾಡಲಾಗಿದ್ದು, 4 ಖಂಡಗಳ ತಂಡಗಳನ್ನಾಗಿ ವಿಂಗಡಿಸಲಾಗಿದೆ.

**ಏನಿದು 'ಟೆಸ್ಟ್ ಟ್ವೆಂಟಿ'?** ಈ ಮಾದರಿಯ ಪಂದ್ಯಗಳು ಒಂದೇ ದಿನದಲ್ಲಿ 80 ಓವರ್‌ಗಳ ಸ್ವರೂಪದಲ್ಲಿ ನಡೆಯಲಿದ್ದು, ಇದರಲ್ಲಿ 20 ಓವರ್‌ಗಳ ನಾಲ್ಕು ಇನ್ನಿಂಗ್ಸ್‌ಗಳಾಗಿ ವಿಂಗಡಿಸಲಾಗಿರುತ್ತದೆ. ಪ್ರತಿ ತಂಡಕ್ಕೂ ಎರಡು ಬಾರಿ ಬ್ಯಾಟಿಂಗ್ ಮಾಡುವ ಅವಕಾಶವಿರುತ್ತದೆ. ಪಂದ್ಯದ ಮೊದಲ 40 ಓವರ್‌ಗಳನ್ನ ಹಗಲಿನಲ್ಲಿ ಸಾಂಪ್ರದಾಯಿಕ ಬಿಳಿ ಉಡುಪು ಮತ್ತು ಕೆಂಪು ಚೆಂಡಿನೊಂದಿಗೆ ಆಡಲಾಗುತ್ತದೆ. ಉಳಿದ 40 ಓವರ್‌ಗಳನ್ನ ರಾತ್ರಿ ಫ್ಲಡ್‌ಲೈಟ್ ಬೆಳಕಿನಲ್ಲಿ ಬಣ್ಣದ ಉಡುಪು ಹಾಗೂ ಬಿಳಿ ಚೆಂಡಿನೊಂದಿಗೆ ಆಡಲಾಗುತ್ತದೆ. ಕ್ರಿಕೆಟ್ ಇತಿಹಾಸದಲ್ಲೇ ಒಂದೇ ಪಂದ್ಯದಲ್ಲಿ ಕೆಂಪು ಮತ್ತು ಬಿಳಿ ಚೆಂಡು ಎರಡನ್ನೂ ಬಳಸುತ್ತಿರುವುದು ಇದೇ ಮೊದಲ ಬಾರಿಯಾಗಿದೆ.

ಈ ಪಂದ್ಯವನ್ನು 80 ಓವರ್‌ಗಳವರೆಗೆ ಆಡಲಾಗುತ್ತದೆ ಪಂದ್ಯ ಆರಂಭಕ್ಕೂ ಮುನ್ನ ನಡೆಯುವ ಟಾಸ್ ವಿಶಿಷ್ಟ ಪಾತ್ರ ವಹಿಸಲಿದೆ. ಟಾಸ್ ಗೆದ್ದ ನಾಯಕ ಮೊದಲು ಪುರುಷರೋ ಅಥವಾ ಮಹಿಳಾ ಆಟಗಾರ್ತಿಯರು ಆಡಬೇಕೋ ಎಂಬುದನ್ನೂ ನಿರ್ಧರಿಸುತ್ತಾರೆ. ಮೊದಲ ಇನ್ನಿಂಗ್ಸ್‌ನಲ್ಲಿ ಗಳಿಸಿದ ರನ್‌ಗಳು ಎರಡನೇ ಇನ್ನಿಂಗ್ಸ್‌ಗೂ ಸಹ ಮುಂದುವರಿಯಲಿವೆ. ಅಂತಿಮವಾಗಿ ಜಂಟಿ ಇನ್ನಿಂಗ್ಸ್‌ಗಳ ಸ್ಕೋರ್ ಆಧರಿಸಿ ವಿಜೇತರನ್ನ ಘೋಷಿಸಲಾಗುತ್ತದೆ.

ಗೌರವ್ ಬಹಿರ್ವಾನಿ ಅವರು ಈ ವಿಶಿಷ್ಟ ಟೂರ್ನಿ ಪರಿಕಲ್ಪನೆಯ ಸಂಸ್ಥಾಪಕರಾಗಿದ್ದಾರೆ. ವಿರಾಟ್ ಕೊಹ್ಲಿಯವರ ಬಾಲ್ಯದ ತರಬೇತುದಾರರಾದ ರಾಜ್‌ಕುಮಾರ್ ಶರ್ಮಾ ನೇತೃತ್ವದ ಜಾಗತಿಕ ಆಯ್ಕೆ ಸಮಿತಿ ಈ ಟೂರ್ನಿಗೆ ಆಟಗಾರರನ್ನ ಆಯ್ಕೆ ಮಾಡಿದೆ. ಇವರೊಂದಿಗೆ ಎಬಿ ಡಿ ವಿಲಿಯರ್ಸ್, ಮ್ಯಾಥ್ಯೂ ಹೇಡನ್ ಮತ್ತು ಸರ್ ಕ್ಲೈವ್ ಲಾಯ್ಡ್ ಅವರಂತಹ ದಿಗ್ಗಜ ಕ್ರಿಕೆಟಿಗರು ಈ ಟೂರ್ನಿಯ ಆಡಳಿತ ಮಂಡಳಿಯಲ್ಲಿದ್ದಾರೆ. ನವೆಂಬರ್ 14 ರಿಂದ 29 ರವರೆಗೆ ನಡೆಯಲಿರುವ ಈ ಸಂಪೂರ್ಣ ಕ್ರಿಕೆಟ್ ಪಂದ್ಯಾವಳಿಯು ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್‌ನಲ್ಲಿ ನೇರ ಪ್ರಸಾರವಾಗಲಿದ್ದು, ವಿಶ್ವದಾದ್ಯಂತ ಕ್ರೀಡಾಭಿಮಾನಿಗಳಿಗೆ ಹೊಸ ಅನುಭವ ನೀಡಲು ಸಜ್ಜಾಗಿದೆ.

# IND vs WI 5ನೇ ಟಿ20

## ಚಿನ್ನಸ್ವಾಮಿ ಕ್ರೀಡಾಂಗಣ ಪ್ರವೇಶ ನಿಯಮಗಳಲ್ಲಿ ಭಾರಿ ಬದಲಾವಣೆ

ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ ಐದನೇ ಮತ್ತು ಅಂತಿಮ ಟಿ20 ಪಂದ್ಯಕ್ಕೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಆತಿಥ್ಯ ವಹಿಸಿಕೊಳ್ಳುತ್ತಿದೆ. ಐದು ಪಂದ್ಯಗಳ ಸರಣಿ ಪ್ರಸ್ತುತ 2-2ರಲ್ಲಿ ಸಮಬಲಗೊಂಡಿದ್ದು, ನಾಳೆ ನಡೆಯಲಿರುವ ಪಂದ್ಯವು ನಿರ್ಣಾಯಕವಾಗಿರಲಿದೆ. ಈ ರೋಚಕ ಪಂದ್ಯಕ್ಕಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಪ್ರೇಕ್ಷಕರಿಗೆ ಕ್ರೀಡಾಂಗಣದ ಪ್ರವೇಶ ನಿಯಮಗಳಲ್ಲಿ ಭಾರಿ ಬದಲಾವಣೆಗಳನ್ನ ಜಾರಿಗೆ ತಂದಿದೆ.

2026ರ ಹೊಸ ಮಾದರಿಯಡಿಯಲ್ಲಿ ಈ ಬಾರಿ ಪಂದ್ಯವನ್ನ ಕಣ್ತುಂಬಿಕೊಳ್ಳಲು ಆಗಮಿಸುವ ಅಭಿಮಾನಿಗಳು ಕಡ್ಡಾಯವಾಗಿ ತಿಳಿದಿರಬೇಕಾದ ಪ್ರಮುಖ ಬದಲಾವಣೆಗಳನ್ನ ಮಾಡಲಾಗಿದೆ. ಈ ಹಿಂದೆ ಇದ್ದ ಕಾಗದದ ಟಿಕೆಟ್ ಮತ್ತು ಡಿಜಿಟಲ್ ಕೋಡ್‌ಗಳ ಬದಲಿಗೆ ಈ ಬಾರಿ ಸಂಪೂರ್ಣವಾಗಿ ಡೈನಾಮಿಕ್ ಎಂ-ಟಿಕೆಟ್‌ಗಳ ವ್ಯವಸ್ಥೆ ಅಳವಡಿಸಲಾಗಿದೆ. ಭದ್ರತೆ ಕಾರಣದಿಂದ ಕ್ಯೂಆರ್ ಕೋಡ್‌ಗಳು ಗೇಟ್‌ಗಳು ತೆರೆಯುವ ಕೇವಲ 5 ಗಂಟೆಗಳ ಮುನ್ನ ಮಾತ್ರವೇ ಸುರಕ್ಷಿತವಾಗಿ ಜನರೇಟ್ ಆಗಲಿದ್ದು, ಇವುಗಳನ್ನ ಇತರರಿಗೆ ವರ್ಗಾಯಿಸಲು ಸಾಧ್ಯವಾಗುವುದಿಲ್ಲ.

ಪ್ರಯಾಣದ ವಿಚಾರದಲ್ಲಿ ಖಾಸಗಿ ವಾಹನಗಳ ದಟ್ಟಣೆಯನ್ನು ತಡೆಯಲು 'ನೋ ಕಾರ್' ಪಾಲಿಸಿ ಜಾರಿಗೊಳಿಸಲಾಗಿದ್ದು, ಪ್ರೇಕ್ಷಕರ ಅನುಕೂಲಕ್ಕಾಗಿ ನಮ್ಮ ಮೆಟ್ರೋ ಪ್ರಯಾಣವನ್ನ ನೇರವಾಗಿ ಪಂದ್ಯದ ಟಿಕೆಟ್‌ಗಳೊಂದಿಗೆ ಸಂಯೋಜಿಸಲಾಗಿದೆ. ಕ್ವೀನ್ಸ್ ರಸ್ತೆಯಲ್ಲಿ ಉಂಟಾಗುತ್ತಿದ್ದ ಭಾರಿ ಸಂಚಾರ ದಟ್ಟಣೆಯನ್ನು ತಪ್ಪಿಸಲು ಈ ಬಾರಿ ಸಾರ್ವಜನಿಕರ ಪ್ರವೇಶವನ್ನು ಕಬ್ಬನ್ ರಸ್ತೆ ಮತ್ತು ಲಿಂಕ್ ರಸ್ತೆಗಳ ಮೂಲಕ ಮಾತ್ರ ಕಲ್ಪಿಸಲಾಗಿದೆ.

### ರಸ್ತೆ ಸಂಚಾರದಲ್ಲಿ ಬದಲಾವಣೆ

**ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ ಅಂತಿಮ ಪಂದ್ಯದ ಹಿನ್ನೆಲೆಯಲ್ಲಿ ರಸ್ತೆ ಸಂಚಾರದಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡಲಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತಮುತ್ತ ಸಂಚಾರ ಮಾರ್ಗ, ಪಾರ್ಕಿಂಗ್ ವ್ಯವಸ್ಥೆ ಬದಲಾವಣೆ ಮಾಡಲಾಗಿದೆ.**



ಕ್ರೀಡಾಂಗಣದ ಪ್ರವೇಶದಲ್ಲೂ ಹಂತ-ಹಂತದ ವ್ಯವಸ್ಥೆಯನ್ನು ಮಾಡಲಾಗಿದ್ದು, ನೇರವಾಗಿ ಗೇಟ್‌ಗಳಲ್ಲಿ ಸಾಲು ನಿಲ್ಲುವ ಬದಲು ಟಿಕೆಟ್ ಪರಿಶೀಲನೆ, ಹೋಲ್ಡಿಂಗ್ ಏರಿಯಾ, ಟರ್ನ್‌ಸ್ಟೈಲ್ ಬಳಿ ಕ್ಯೂಆರ್ ಸ್ಕ್ಯಾನ್ ಮತ್ತು ನಂತರ ನೇರವಾಗಿ ಸ್ಟ್ಯಾಂಡ್ ತಲುಪುವ ವ್ಯವಸ್ಥೆಯನ್ನ ರೂಪಿಸಲಾಗಿದೆ.ಆದ್ದರಿಂದ ನಾಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಹೈ-ವೋಲ್ಟೇಜ್ ಪಂದ್ಯವು ಕೇವಲ ಮೈದಾನದೊಳಗಿನ ರೋಚಕ ಕದನಕ್ಕೆ ಮಾತ್ರವಲ್ಲದೆ, ಕ್ರೀಡಾಂಗಣದ ಹೊಸ ಆಡಳಿತಾತ್ಮಕ ರೂಪುರೇಷೆಗಳಿಗೂ ಸಾಕ್ಷಿಯಾಗಲಿದೆ.

# ಭಾರತ ತಂಡಕ್ಕೆ ಅಚ್ಚರಿಯ ಎಂಟ್ರಿ ಕೊಟ್ಟ RCB ಸ್ಟಾರ್



ಭಾರತ ಮತ್ತು ವೆಸ್ಟ್ ಇಂಡೀಸ್ ತಂಡಗಳ ನಡುವಿನ 5ನೇ ಟಿ20 ಪಂದ್ಯ ನಾಳೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಪಂದ್ಯಕ್ಕೂ ಮೊದಲೇ ದೊಡ್ಡ ಸುದ್ದಿಯೊಂದು ಹೊರಬಿದ್ದಿದೆ. ಸರಣಿ ನಿರ್ಣಾಯಕ ಪಂದ್ಯಕ್ಕಾಗಿ ಬಿಸಿಸಿಐ ಆರ್‌ಸಿಬಿ ಸ್ಟಾರ್ ಅನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಈಗಾಗಲೇ 4 ಪಂದ್ಯಗಳು ಮುಕ್ತಾಯಗೊಂಡಿದ್ದು ಎರಡೂ ತಂಡಗಳು ತಲಾ 2 ಪಂದ್ಯಗಳನ್ನು ಗೆದ್ದುಕೊಂಡಿವೆ. ಮೊದಲ ಪಂದ್ಯವನ್ನು ಭಾರತ 8 ವಿಕೆಟ್‌ಗಳಿಂದ ಗೆದ್ದುಕೊಂಡು ಶುಭಾರಂಭ ಮಾಡಿತ್ತು. ಬಳಿಕ ಅದ್ಭುತ ಕಮ್‌ಬ್ಯಾಕ್ ಮಾಡಿದ ವಿಂಡೀಸ್ ಪಡೆ ಎರಡನೇ ಪಂದ್ಯದಲ್ಲಿ 249 ರನ್‌ಗಳ ಬೃಹತ್ ಗುರಿಯನ್ನು ಯಶಸ್ವಿಯಾಗಿ ಚೇಸ್ ಮಾಡಿ ಗೆಲುವು ಸಾಧಿಸಿತ್ತು. ಮೂರನೇ ಪಂದ್ಯದಲ್ಲಿ ಭಾರತ 14 ರನ್ಗಳಿಂದ ಗೆದ್ದರೇ, ನಾಲ್ಕನೇ ಪಂದ್ಯದಲ್ಲಿ ವಿಂಡೀಸ್ ಪಡೆ 24 ರನ್‌ಗಳಿಂದ ಗೆಲುವಿನೊಂದಿಗೆ 2-2 ರಿಂದ ಸರಣಿಯಲ್ಲಿ ಸಮಬಲ ಸಾಧಿಸಿತು. ಇದೀಗ ಐದನೇ ಪಂದ್ಯ ಉಭಯ ತಂಡಗಳ ಪಾಲಿಗೆ ನಿರ್ಣಾಯಕವಾಗಿದೆ. ಅದರಲ್ಲೂ ವೆಸ್ಟ್ ಇಂಡೀಸ್ ತಂಡ 2019ರ ಬಳಿಕ ಭಾರತದಲ್ಲಿ ಒಮ್ಮೆಯೂ ಟಿ20L ಸರಣಿಯನ್ನು ಗೆದ್ದುಕೊಂಡಿಲ್ಲ. ಈ ಬಾರಿ ಶಾಯ್ ಹೋಪ್ ನಾಯಕತ್ವದಲ್ಲಿ ಸರಣಿ ಗೆಲುವಿನ ವಿಶ್ವಾಸದಲ್ಲಿದೆ. ಮತ್ತೊಂದೆಡೆ ಭಾರತ ತವರಿನಲ್ಲಿನ ತನ್ನ ಪ್ರಾಬಲ್ಯ ಮುಂದುವರಿಸುವ ಗುರಿಯನ್ನು ಹೊಂದಿದೆ. ಇದಕ್ಕಾಗಿ ಭಾರತ ತಂಡಕ್ಕೆ ಆರ್‌ಸಿಬಿ ಸ್ಟಾರ್ ಅನ್ನು ಕರೆತಂದಿದೆ. ವೇಗದ ಬೌಲರ್ ಅರ್ಷದೀಪ್ ಸಿಂಗ್ ಗಾಯಗೊಂಡಿರುವ ಕಾರಣ ಐದನೇ ಪಂದ್ಯದಲ್ಲಿ ಅವರು ಆಡುತ್ತಾರೆಯೆ ಇಲ್ಲವೇ ಎಂಬುದು ಅನುಮಾನವಾಗಿದೆ. ಬುಧವಾರ ಹೈದರಾಬಾದ್‌ನಲ್ಲಿ ನಡೆದಿದ್ದ ನಾಲ್ಕನೇ ಟಿ20 ಪಂದ್ಯದಲ್ಲಿ ಅರ್ಷದೀಪ್ ಸಿಂಗ್ ಬ್ಯಾಟಿಂಗ್ ಮಾಡುವಾಗ ಶಾಮರ್ ಜೋಸೆಫ್ ಎಸೆದ ಚೆಂಡು ಅರ್ಷದೀಪ್ ಭುಜಕ್ಕೆ ಬಲವಾಗಿ ತಾಕಿತ್ತು. ಇದರಿಂದ ಕೆಲ ಸಮಯ ನೋವಿನಿಂದ ಪರದಾಡಿದರು ಮತ್ತು ಅರ್ಧದಲ್ಲೆ ಮೈದಾನ ತೊರೆದರು. ಇದರಿಂದಾಗಿ ಭಾರತ 9 ವಿಕೆಟ್‌ಗಳಿಗೆ ತನ್ನ ಇನ್ನಿಂಗ್ಸ್ ಅನ್ನು ಕೊನೆಗೊಳಿಸಿ 24 ರನ್‌ಗಳಿಂದ ಪಂದ್ಯ ಸೋಲನ್ನು ಕಂಡಿತು. ಸದ್ಯ ಅರ್ಷದೀಪ್ ಅವರ ಗಾಯದ ಬಗ್ಗೆ ಯಾವುದೇ ಅಪ್ಡೇಟ್‌ಗಳು ಲಭ್ಯವಾಗಿಲ್ಲ. ಮುಂಜಾಗೃತೆ ಕ್ರಮವಾಗಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆರ್‌ಸಿಬಿ ಸ್ಟಾರ್ ಅನ್ನು ತಂಡಕ್ಕೆ ಸೇರಿಸಿಕೊಂಡಿದೆ. ಈ ಕುರಿತು ಸ್ವತಃ ಬಿಸಿಸಿಐ ಟ್ವೀಟ್ ಮೂಲಕ ಮಾಹಿತಿಯನ್ನು ಹಂಚಿಕೊಂಡಿದೆ.

**ಭಾರತ ತಂಡಕ್ಕೆ ಸಡನ್ ಎಂಟ್ರಿ ಕೊಟ್ಟ ಸ್ವಿಂಗ್ ಕಿಂಗ್:** ಸುಮಾರು 4 ವರ್ಷಗಳ ಕಾಲ ಭಾರತ ತಂಡದಿಂದ ಹೊರಗುಳಿದ್ದ ಭುವನೇಶ್ವರ್ ಕುಮಾರ್ ಅವರನ್ನು ತಂಡಕ್ಕೆ ಮರಳಿ ಕರೆತರಲಾಗಿದೆ. 36 ವರ್ಷದ ವೇಗಿ ಈ ಹಿಂದೆ ನವೆಂಬರ್ 22, 2022ರಂದು ನೇಪಿಯರ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ತಮ್ಮ ಕೊನೆಯ ಟಿ20 ಅಂತರರಾಷ್ಟ್ರೀಯ ಪಂದ್ಯವನ್ನು ಆಡಿದ್ದರು ಎಂಬುದು ಗಮನಾರ್ಹ. ಅರ್ಷದೀಪ್ ಗಾಯದಿಂದಾಗಿ ತಂಡಕ್ಕೆ ಅನುಭವಿ ಬೌಲರ್ ಅಗತ್ಯವಿತ್ತು ಇದಕ್ಕಾಗಿ ಬಿಸಿಸಿಐ ಭುವನೇಶ್ವರ್‌ಗೆ ಮಣೆಹಾಕಿದೆ. ಭುವನೇಶ್ವರ್ ಕುಮಾರ್ ಪ್ರಸ್ತುತ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಆಡುತ್ತಿದ್ದಾರೆ. ಈ ಹಿನ್ನೆಲೆ ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ತಮ್ಮ ಸ್ವಿಂಗ್ ಮೂಲಕ ಕಮಾಲ್ ಮಾಡಲು ಸಜ್ಜಾಗಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news